
ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ


ಸಂಪುಟ 25 ಸಂಚಿಕೆ 31
ಆಗಸ್ಟ್ 03, 2003 ಬೆಲೆ ರೂ. 3.00





ಉಡುಪಿ ಮಠದಲ್ಲಿ ತ್ರಿಶೂಲ ಹಂಚಿಕೆಯ ಕೇಡು !

ಆಕ್ರಮಣಖೋರ ಅಮೆರಿಕಾಕ್ಕೆ ಏಕೆ ಈ ಡೊಗ್ಗು ಸಲಾಮು ?




ಕನ್ನಡ ಚಿತ್ರೋದ್ಯಮ ಉಳಿಯುವುದು ಹೇಗೆ?

WTO ಕ್ಯಾಂಕುನ್ ಸಭೆ ವಿರುದ್ಧ ಆಂದೋಲನ

'ಹ್ಯಾರಿ ಪಾಟರ್' ನ ಮಾಯಾ ಜಗತ್ತು



ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ 37

ಹಿಂದಿನ ಸಂಚಿಕೆಯಲ್ಲಿ ಚರ್ಚೆ ಮಾಡುವಾಗ ಮುಷ್ಟಿಗಳನ್ನು ಎತ್ತಿದ ಮೇಜ್‌ಗಳನ್ನು ಗುದ್ದಾಡಿದ್ದು, ವಿನೀತ ಹಾಗೂ ಅನುಭವಿ ಸಂಗಾತಿಗಳು ಕೂಡಾ ಕಚ್ಚಾಡಿದ್ದು, ಇತಿಹಾಸದ ನಿರ್ಣಾಯಕ ಸಂದರ್ಭದಲ್ಲಿ ಜನರ ಕೈ ಬಿಟ್ಟೆವು ಎಂಬ ಜಯಪಾಲರ ಅಭಿಪ್ರಾಯ, ಜನಸಮೂಹದ ಸಂಪರ್ಕದಿಂದ ಮಸೆದು ಹರಿತಗೊಳಿಸದಿದ್ದರೆ ರಾಜಕೀಯ ನಂಬಿಕೆ ಮತ್ತು ಕ್ರಾಂತಿಕಾರಿ ಪ್ರಜ್ಞಾವಂತಿಕೆ ತುಕ್ಕು ಹಿಡಿಯುತ್ತದೆ ಎನ್ನುವ ಸಿಂಗರ ನಂಬಿಕೆ ಮತ್ತು ಕ್ರಾಂತಿಕಾರಿ ಪ್ರಜ್ಞಾವಂತಿಕೆ ತುಕ್ಕು ಹಿಡಿಯುತ್ತದೆ ಎನ್ನುವ ಸಿಂಗರ ನಂಬಿಕೆ ಮತ್ತು ಕ್ರಾಂತಿಕಾರಿ ಪ್ರಜ್ಞಾವಂತಿಕೆ ತುಕ್ಕು ಹಿಡಿಯುತ್ತದೆ



ಕನ್ನಡಕ್ಕೆ: ವಿಶ್ವ ಕುಂದಾಪುರ

ಪೊಲೀಸ್ ನಾಯಿಗಳ ನರಮಾಂಸ ದಾಹ!

'ಇದು ಒಳ್ಳೆಯದಲ್ಲ' ಎಂದು ನನ್ನಷ್ಟಕ್ಕೆ ನಾನು ಗೊಣಗುಟ್ಟಿದೆ. ಹೊಟ್ಟೆಯಲ್ಲಿ ಅಸಾಧ್ಯನೋವು, ಗಂಟಲು ಕೂಡ ಕಟ್ಟಿದಂಥ ಅನುಭವ. ಹಠಾತ್ತನೆ ಅನಾರೋಗ್ಯಪೀಡಿತನಾದೆ.

ನನ್ನ ಭದ್ರತೆಯ ದೃಷ್ಟಿಯಿಂದ ಪ್ರತಿಕೂಲಕರವಾದ ಜನರ ಮಧ್ಯೆ ಹಠಾತ್ತನೆ ಬಂದು ಸೇರಿದ್ದರಿಂದ ಹೀಗಾಯಿತೋ ಅಥವಾ ಈ 'ಸಭ್ಯಸ್ಥರ' ಅತಿಯಾದ ವಿಮರ್ಶೆ, ಒಣಜಂಭದ ಚರ್ಚೆಯಿಂದಾಗಿ ಹಾಗಾಯಿತೋ ಗೊತ್ತಾಗಲಿಲ್ಲ. ಅವರು ಚರ್ಚೆ ಮಾಡುತ್ತಿದ್ದುದು ನಮ್ಮ ನಾಲ್ವರು ಪ್ರಿಯ ಸಂಗಾತಿಗಳು ಹಾಗೂ ಜನರ 'ಕೊಲೆ ಹಾಗೂ ಅತ್ಯಾಚಾರದ' ಬಗ್ಗೆ. ಅದನ್ನು ಉಪ್ಪು ಖಾರ ಸೇರಿಸಿ ವರ್ಣಿಸಿ ಆನಂದ ಪಡುತ್ತಿದ್ದರು. ರಕ್ತ ಪಿಪಾಸು ನಾಯಿಗಳ ಥರ ವರ್ತಿಸುತ್ತಿದ್ದರು. ಇಂಥ ಜನರ ಬಗ್ಗೆ ಏನು ವಿಮರ್ಶಿಸುವುದೆಂದೇ ತಿಳಿಯಲಿಲ್ಲ ಅಥವಾ ಅದರ ಅಗತ್ಯವೂ ಇರಲಿಲ್ಲ.

ಆ ಗುಂಪು ಚರ್ಚೆ ಮಾಡುತ್ತಿದ್ದ ವಿಷಯ ಕೇಳಿ ಎದೆ ಡವಡವಗುಟ್ಟಿತು. ಅವರು ತೆಲಂಗಾಣದ ಬಗ್ಗೆ ಮಾತಾಡುತ್ತಿದ್ದಾರೆಂಬುದು ಸ್ಪಷ್ಟವಾಗಿತ್ತು.

"ಅವರದು ಲೂಟಿಕೋರರು ಹಾಗೂ ಅತ್ಯಾಚಾರಿಗಳ ಒಂದು ಗುಂಪಾಗಿದೆ ಅಷ್ಟೆ. ಕರುಣೆಯಿಲ್ಲದ ಭಯೋತ್ಪಾದನೆ, ಬಂಧಿತರನ್ನು ದಯ ದಾಕ್ಷಿಣ್ಯವಿಲ್ಲದೆ ನಾಶ ಮಾಡುವುದು, ಬಂಧಿಸಲು ಆಗದವರ ಕುಟುಂಬದವರ ಜತೆ ಕ್ರೂರವಾಗಿ ನಡೆದುಕೊಳ್ಳುವುದು. ಇಷ್ಟೇ ಈ ಪಿಡುಗಿಗೆ ಏಕೈಕ ಉತ್ತರ. ಕ್ರಿಮಿನಲ್‌ಗಳ ಜತೆ ವರ್ತಿಸುವಾಗ ನೈತಿಕ ಮತ್ತು ಮಾನಸಿಕ ವಿಧಾನಗಳ ವಿಚಾರವಾಗಿ ನಾನು ಚಿಂತಿಸುವುದಿಲ್ಲ. ಭಯೋತ್ಪಾದನೆಗೆ ಭಯೋತ್ಪಾದನೆಯೇ ಉತ್ತರ" ಹೀಗೆಂದು ಕೂಗಾಡಿದ ಒಬ್ಬ ಭಯಾನಕ ವ್ಯಕ್ತಿ. ಇಂಥ ಭೀಭತ್ಸ್ಯ ಮನುಷ್ಯನನ್ನು ನಾನೆಂದೂ ಕಂಡಿರಲಿಲ್ಲ.

ಆತನಿಗೆ ಮನುಷ್ಯರ ಮಾಂಸವೆಂದರೆ ಅಷ್ಟು ಇಷ್ಟವೆಂಬಂತೆ ಕಾಣಿಸುತ್ತಿತ್ತು. ಕೊಲೆ ಮತ್ತು ಅತ್ಯಾಚಾರದ ಬಗ್ಗೆ ಅಷ್ಟೊಂದು ಸಂತೃಪ್ತಿಯಿಂದ ಹಾಗೂ ಸಹಜವೆಂಬಂತೆ ಮಾತಾಡುತ್ತಿದ್ದವರು ಆ ಗುಂಪಿನಲ್ಲಿ ಬೇರೆ ಯಾರೂ ಇರಲಿಲ್ಲ. ದಮನಕಾರ್ಯಕ್ಕೆ ಈತನಿಗಿಂತ ಹೆಚ್ಚು ಸೂಕ್ತ ವ್ಯಕ್ತಿ ದೇಶದಲ್ಲಿ ಬೇರೆ ಯಾರೂ ಇದ್ದಿರಲಾರರು. ಆದರೆ ಅದು ಅಷ್ಟು ಸರಳವಾದುದಲ್ಲ. ಅಷ್ಟು ಸುಲಭವಾಗಿ ಅವರನ್ನು ದಮನಿಸಲು ಆಗಲಿ ತೆಲಂಗಾಣ ಪ್ರದೇಶದ ಶೋಷಿತ ಬಡವರು ಹಾಗೂ ಮುಗ್ಧ ರೈತರು ಅವರಿಗೆ ನೆರವಾಗುತ್ತಿದ್ದಾರೆ.

"ನಿನ್ನೆಯಷ್ಟೇ ನನಗೆ ಸಹೋದ್ಯೋಗಿಯೊಬ್ಬರ ಪತ್ರ ತಲುಪಿತು. ಆದರೆ ಬಹಳಷ್ಟು ವಿಚಾರ ತಿಳಿಯಿತು. ಅವರು ಪತ್ರದಲ್ಲಿ ಹೇಳಿದ ವಿಷಯಗಳೆಲ್ಲವೂ ನಿಜವೇ ಆಗಿದ್ದಲ್ಲಿ ಈ 'ಭಯೋತ್ಪಾದಕರನ್ನು' ನಿಯಂತ್ರಣಕ್ಕೆ ತರಲು ವರ್ಷಗಳೇ ಬೇಕಾಗುತ್ತದೆ. ನಾವು 'ವಿಷಯ'ವನ್ನು ಸಮಗ್ರವಾಗಿ ಅಧ್ಯಯನ ಮಾಡಬೇಕು ಹಾಗೂ ಅದರಿಂದ ಪಾಠಕಲಿಯಬೇಕು. ಹೊಸ ರೀತಿಯ ಈ ಕ್ರಿಮಿನಲ್‌ಗಳನ್ನು ನಿಭಾಯಿಸಲು ನಾವು ಹೊಸ ವಿಧಾನಗಳನ್ನು ರೂಪಿಸಿಕೊಳ್ಳಬೇಕು" ಹೀಗೆಂದು ಅಧಿಕಾರಿಯೊಬ್ಬ ಅಭಿಪ್ರಾಯಪಟ್ಟನು.

ಕಣ್ಣು ಪತ್ತೇದಾರಿ ಮೇಲೆ...... ಕಿವಿ....?

'ಕೊಲೆ ಹಾಗೂ ಅತ್ಯಾಚಾರದ ಈ 'ವಿದ್ಯಾರ್ಥಿಗಳು' ನನ್ನಲ್ಲಿ ಕುತೂಹಲ ಮೂಡಿಸಿದರು. ಎದ್ದು ಕುಳಿತೆ. ಅವರ ಸಂಭಾಷಣೆ ಮೇಲೆಯೇ ನನ್ನ ಕಿವಿಗಳು ಕೇಂದ್ರೀಕೃತವಾಗಿದ್ದವು ಆದರೆ ಯಾರಾದರೂ ನೋಡಿದರೆ ನನಗೆ ಆಸಕ್ತಿಯೇ ಇಲ್ಲ ಎನ್ನುವ ರೀತಿ ಇದ್ದೆ. ಒಂದು ಪತ್ತೇದಾರಿ ಕಾದಂಬರಿ ಓದುತ್ತಿರುವಂತೆ ನಟಿಸಿದೆ. ಆ ಪತ್ತೇದಾರಿಯ ಹೆಸರಾಗಲೀ ಅದರ ಕತೆಯಾಗಲೀ ನನಗೆ ಇಂದಿಗೂ ಗೊತ್ತಿಲ್ಲ.

ಪಕ್ಷದೊಳಗಿನ ಆಗಿನ ಸನ್ನಿವೇಶದಲ್ಲಿ ತೆಲಂಗಾಣದ ಬಗ್ಗೆ ಎರಡು ಧೋರಣೆಗಳ ಜತೆ ಅದು ಕಾಕತಾಳೀಯವಾಗಿ ಪರಿಣಮಿಸಿತು ಎನ್ನುವುದು ಕುತೂಹಲದ ಸಂಗತಿಯಾಗಿದೆ.

ಕೇವಲ ಒಂದು ಗಂಟೆಯ ಹಿಂದೆ ನಮ್ಮ 'ನೆಲೆ'ಯಲ್ಲಿ ಸಂಗಾತಿಯೊಬ್ಬ ನನಗೆ ಹೀಗೆ ಹೇಳಿದ್ದ 'ನೀವೊಬ್ಬ ಸಶಸ್ತ್ರ ಹೋರಾಟಗಾರರು. ನೀವು ತೆಲಂಗಾಣವನ್ನು ವೈಭವೀಕರಿಸುತ್ತಿದ್ದೀರಿ, ಅದರ ಶಕ್ತಿಯನ್ನು ಅತಿಯಾಗಿ ಅಂದಾಜು ಮಾಡುತ್ತಿದ್ದೀರಿ. ತೆಲಂಗಾಣ ಹೋರಾಟ ಜನರಿಂದ ಪ್ರತ್ಯೇಕಗೊಂಡ ಕೆಲವು ಹತಾಶ ಜನರ ಸಂಘರ್ಷವಾಗಿದೆ ಅಷ್ಟೆ. ಶರಣಾದರೆ ಗಲ್ಲುಶಿಕ್ಷೆ ಖಂಡಿತ ಎಂದು ಭಾವಿಸಿದ ಜನ ಈ ಹೋರಾಟ ಮಾಡುತ್ತಿದ್ದಾರೆ. ಮುಗ್ಧ ಜನರನ್ನು ಕೊಲ್ಲುವುದರಿಂದ ಕ್ರಾಂತಿ ಸಾಧ್ಯವಿಲ್ಲ ಎನ್ನುವುದು ನನ್ನ ಭಾವನೆ".

"ನಿನಗೆ ಅದ್ಹೇಗೆ ಗೊತ್ತು?" ನಾನು ತಕ್ಷಣವೇ ಕೂಗಾಡಿದವರಂತೆ ಪ್ರಶ್ನಿಸಿದೆ. ಅಷ್ಟರೊಳಗೆ ಇನ್ನೊಬ್ಬ ಸಂಗಾತಿ ಮಧ್ಯಪ್ರವೇಶಿಸಿದ. ಇದು ಅಷ್ಟು ಸರಳವಾದ ವಿಚಾರವಲ್ಲ. ನಾನೊಬ್ಬ ಸಶಸ್ತ್ರ ಹೋರಾಟಗಾರನಲ್ಲದಿದ್ದರೂ ಇಷ್ಟೊಂದು ಅಡ್ಡಿ ಆತಂಕಗಳ ಎದುರು ಇತರ ಕೆಲವು ಶಕ್ತಿಗಳ ಬೆಂಬಲವಿಲ್ಲದೆ ಕೆಲವೇ ಕೆಲವರು ಹೇಗೆ ಹೋರಾಟ ಮಾಡುತ್ತಾರೆ ಎನ್ನುವುದು ನನಗೆ ಅರ್ಥವಾಗುವುದಿಲ್ಲ" ಎಂದು ಆತ ಹೇಳಿದ.

ತೆಲಂಗಾಣ ಮತ್ತು ಆಂಧ್ರದ ಹೊರಗೆ, 'ತೆಲಂಗಾಣ'ದ ಕುರಿತು ಇಡೀ ಸಮಸ್ಯೆಯೆಂದರೆ ಅಂದಾಜು ಮಾಡಲು ನಿರ್ದಿಷ್ಟ ಅಂಕಿಸಂಖ್ಯೆ ಇಲ್ಲದಿದ್ದರೂ ಪಕ್ಷದೊಳಗಿನ ಪ್ರತಿಯೊಬ್ಬರೂ ಅದರ ಬಗ್ಗೆ ಅಂದಾಜು ಮಾಡಿದ್ದು. ಆಂಧ್ರ ಪ್ರಾಂತೀಯ ಸಮಿತಿ "ಆಂಧ್ರದಲ್ಲಿ ದಬ್ಬಾಳಿಕೆ" ಎಂಬ ದಾಖಲೆಯನ್ನು ಪ್ರಕಟಿಸಿತು. ಜೂನ್‌ನ ಕೇಂದ್ರ ಸಮಿತಿ ಸಭೆ "ತೆಲಂಗಾಣ ದಸ್ತಾವೇಜುಗಳನ್ನು" ವ್ಯಾಪಕವಾಗಿ ಪ್ರಸಾರ ಮಾಡಿತು. ಆದರೆ ಇದರ ಬಗ್ಗೆ ಭಿನ್ನಾಭಿಪ್ರಾಯ ತಳೆದ ಯಾರೂ ಕೂಡ ಅವುಗಳನ್ನು ವಾಸ್ತವಿಕವೆಂದು ನಂಬಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ತೆಲಂಗಾಣದ ಬಗ್ಗೆ ಬೇಕಾಬಿಟ್ಟಿಯಾಗಿ ಅಂದಾಜು ಮಾಡುವುದು ವಾಸ್ತವಿಕ ಅಂದಾಜು ಎಂದು ಹೇಗೆ ಹೇಳಲಾದೀತು, ನನಗೆ ಗೊತ್ತಿಲ್ಲ.


ದಟ್ಟ ಅರಣ್ಯ ಹಾಗೂ ಬೆಟ್ಟ ಪ್ರದೇಶಗಳ ನಡುವೆ ಇದ್ದು ಅತ್ಯಂತ ಕ್ರೂರ ಶತ್ರುವಿನ ವಿರುದ್ಧ ಜೀವನ್ಮರಣ ಹೋರಾಟ ನಡೆಸುವ ತೆಲುಗು ಜನರ ವೀರ ಪುತ್ರರು ಹಾಗೂ ಪುತ್ರಿಯರ ಬಗ್ಗೆ ಅವರ ವಿಚಾರವಾಗಿ ಏನೂ ಗೊತ್ತಿಲ್ಲದವರು ಅಂದಾಜು ಮಾಡುತ್ತಾರೆ. ಸಾವಿರಾರು ಮೈಲಿ ದೂರ ಕುಳಿತ ವ್ಯಕ್ತಿನಿಷ್ಠವಾದಿಗಳು ಈ ಜನರ ಬಗ್ಗೆ ತೆಗಳುತ್ತಾರೆ. ಛೇ ಛೇ... ಇದೆಲ್ಲ ಖಂಡಿತಕ್ಕೂ ಸರಿಯಲ್ಲ.


ಇಲ್ಲಿ ರೈಲು ಬೋಗಿಯಲ್ಲಿ ಕುಳಿತುಕೊಂಡು ನಾನು ತೆಲಂಗಾಣ ಕುರಿತ 'ಧೋರಣೆಗಳ' ಸಮೀಕ್ಷೆ ನಡೆಸಿದೆ.


ತೆಲಂಗಾಣ ಹೋರಾಟ ಕೇವಲ ಒಂದು ಹುಸಿನಾಟಕ, ಕೇಂದ್ರ ನಾಯಕತ್ವಕ್ಕೆ ಬಡ್ತಿ ಪಡೆಯಲು ಆಂಧ್ರ ನಾಯಕತ್ವ ನಡೆಸುತ್ತಿರುವ ತಂತ್ರ, ಬೇಕಂತಾನೇ ಹುಟ್ಟು ಹಾಕಿದ ಪಕ್ಷದ ಆಂತರಿಕ ಪ್ರಚಾರ ತಂತ್ರ ಎಂದು ನಮ್ಮ ಅನೇಕ ಸಂಗಾತಿಗಳು ಭಾವಿಸಿದ್ದರು. ಅವರು ಬಹುಶಃ ಕೆಲವು ತಂಡಗಳನ್ನು ನಿರ್ಲಕ್ಷಿಸುವಂತಿರಲಿಲ್ಲ. ವೈರಿ ತನ್ನ ಬಾಡಿಗೆ ಪತ್ರಿಕೆಗಳ ಮೂಲಕ ಇಂಥ ತಂಡಗಳ ಬಗ್ಗೆ ಪ್ರತಿದಿನ ಮಾತನಾಡುತ್ತಿದ್ದುದರಿಂದ ಇದು ಅನಿವಾರ್ಯವಾಗಿತ್ತು.

ಇನ್ನು ಕೆಲವು ಸಂಗಾತಿಗಳ ಪ್ರಕಾರ ತೆಲಂಗಾಣವು ಭಾರತೀಯ ಕ್ರಾಂತಿಕಾರಿ ರೈತರ ಜೀವಂತ ಸಂಕೇತವಾಗಿತ್ತು. ಕ್ರಮೇಣ ತೆಲಂಗಾಣವನ್ನು ವಿಮೋಚನೆಗೊಳಿಸುವ ಸೈನ್ಯವನ್ನು ಇಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ. ರೈತ ಪಡೆಗಳು ಪ್ರತಿದಿನವೂ ಹೊಸ ಎತ್ತರ ಹಾಗೂ ವಿಜಯಗಳತ್ತ ಮುಂದೆ ಸಾಗುತ್ತಿದೆ. ದಿನದಿನವೂ ಅದು ನಿಷ್ಕೃಷ್ಟಗೊಳ್ಳುತ್ತಿದೆ. ಆಹಾರ, ವೈರಿಗಳ ಬಗ್ಗೆ ಮಾಹಿತಿ ನೀಡಿ ಹಾಗೂ ಸೇನಾನಿಗಳಾಗಿ ಸೇರುವ ಮೂಲಕ ಜನಸಮೂಹವೂ ಸಂಘರ್ಷದಲ್ಲಿ ಭಾಗವಹಿಸುತ್ತಿದ್ದಾರೆ. ಇಂಥ ಬೆಂಬಲದಿಂದ ಮಾತ್ರವೇ ರೈತಾಪಿ ಹೋರಾಟ ಮುನ್ನಡೆಯಲು ಸಾಧ್ಯ.

(ಮುಂದುವರಿಯುವುದು)







ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಜುಲೈ 30, 2003
ಮಹಿಳಾ ವಿಶ್ವ ವಿದ್ಯಾನಿಯ ಹೇಗಿರಬೇಕು?
ವಿಚಾರಸಂಕಿರಣ, ಬೆಳಿಗ್ಗೆ 10. 30 ಕ್ಕೆ
ಸ್ಥಳ : ಪತ್ರಕರ್ತರ ಸಂಘದ ಕಛೇರಿ ಸಭಾಂಗಣ, ಕರ್ನಾಟಕ ಕಾರ್ಯನಿರತರ ಪತ್ರಕರ್ತರ ಸಂಘ, ಮಹಿಳಾ ಘಟಕ, ಬೆಂಗಳೂರು

ಆಗಸ್ಟ್ 1, 2003
ಬೆಂಗಳೂರು ವಿನೋಬಾನಗರದಲ್ಲಿ ಪೋಲಿಸ್ ದೌರ್ಜನ್ಯದಿಂದ ಮೃತನಾದ ದಲಿತ ವಿದ್ಯಾರ್ಥಿ ಚಂದ್ರಮೂರ್ತಿ ಕುಟುಂಬಕ್ಕೆ ಪರಿಹಾರ ಕೋರಿ ರ‍್ಯಾಲಿ.
ಬೆಳಿಗ್ಗೆ 10. 30 ಕ್ಕೆ ಲಾಲ್‌ಬಾಗ್ ಗೇಟ್‌ನಿಂದ ಮುಖ್ಯಮಂತ್ರಿ ಮನೆವರೆಗೆ - ಮನೆಮುಂದೆ ಧರಣಿ

ಆಗಸ್ಟ್ 2 ಮತ್ತು 3 , 2003 ಬೆಂಗಳೂರು
ಗ್ರಾಮ ಪಂಚಾಯತಿ ನೌಕರರ ಜಿಲ್ಲಾ ಮಟ್ಟದ ತರಬೇತಿ ಶಿಬಿರ - ಸ್ಕೌಟ್ ಕ್ಯಾಂಪ್ ದೊಡ್ಡಬಳ್ಳಾಪುರ


ಆಗಸ್ಟ್ 3, 2003
ಸಾಕ್ಷರತಾ ಪ್ರೇರಕರ ರಾಜ್ಯಮಟ್ಟದ [illegible]
ಡಿವೈಎಫ್‌ಐ ಕಛೇರಿ, ಬೆಂಗಳೂರು

ಆಗಸ್ಟ್ 16 ರಿಂದ 31,2003
ಕೇಂದ್ರ ಸರಕಾರದ ಅಮೇರಿಕ ಪರ ವಿದೇ[illegible] ನೀತಿ, ಜನವಿರೋಧಿ ಆರ್ಥಿಕ ನೀತಿ ಹಾಗು ಕೋಮುವಾದೀಕರಣದ ವಿರುದ್ಧ ಪ್ರಚಾರಾಂದೋಲನ - ಸಿಪಿಐ(ಎಂ) ಕರೆ


ಸೆಪ್ಟೆಂಬರ್1, 2003
ಕರ್ನಾಟಕ ಪ್ರಾಂತ ರೈತ ಸಂಘದ ರೈತರ ದಿನ- ವಿಶೇಷ ರಾಜ್ಯ ಸಮಾವೇಶ[illegible] ಗುಲ್ಬರ್ಗಾ

ತೊಗಾಡಿಯಾ ಸುತ್ತ ಒಂದು ನಾಟಕ!

ಬಿಜೆಪಿಗಳು ಅಸೆಂಬ್ಲಿಯಲ್ಲಿ ಕೂಗಾಡಿ ಅಮೂಲ್ಯ ಕಲಾಪಗಳನ್ನು ಹಾಳುಮಾಡಿದ್ದಾರೆ. ಅವರತಗಾದ ಜನರ ಪ್ರಶ್ನೆಗಳಲ್ಲಿ ತೊಗಾಡಿಯಾನ ಸಲುವಾಗಿ ಪ್ರವೀಣ ತೊಗಾಡಿಯಾ ಮತ್ತೇ ಕರ್ನಾಟಕಕ್ಕೆ ಕಾಲಿಡುತ್ತಿದ್ದಾನೆ. ಅದು ವಿಜಾಪುರಕ್ಕೆ ಇದೇ ಜುಲೈ 27 ರಂದು ಈಗಾಗಲೇ ಬಜರಂಗದಳ ತನ್ನ ಚಟುವಟಿಕೆ ವ್ಯಾಪಕಗೊಳಿಸಿದೆ. ತ್ರಿಶೂಲ ಹಂಚಿದೆ! ಅಲ್ಲಿ ವಿಶ್ವ ಹಿಂದೂ ಪರಿಷತ್‌ನಿಂದ ಹಿಂದೂ ವಿರಾಟ್ ಸಮಾವೇಶ ಎಂಬುದು ಒಂದು ನೆಪ. ಮುಂದಿನ ವಿಧಾನಸಭೆ, ಪಾರ್ಲಿಮೆಂಟ್ ಚುನಾವಣೆಗಳ ಮೇಲೆ ಕಣ್ಣಿರಿಸಿ ಏನಾದರಾಗಲಿ ಶಾಸಕರು, ಸಂಸದರ ಸಂಖ್ಯೆ ಹೆಚ್ಚಿಸಿಕೊಳ್ಳಲೇ ಬೇಕೆಂಬ ಆರ್.ಎಸ್.ಎಸ್., ಬಿಜೆಪಿಯ ಷಡ್ಯಂತ್ರದ ಭಾಗವಾಗಿ ಕೋಮು ವಿಭಜನೆ ತರುವ, ದ್ವೇಷದ ವಿಷಕಾರಿ, ದಳ್ಳುರಿ ಎಬ್ಬಿಸಿ ರಾಜಕೀಯ ಮೈಲುಗಲ್ಲು ಸಾಧಿಸುವುದು ಇವರ ಅಸಲೀ ಹುನ್ನಾರ. ಯಾವುದೇ ಊರಿಗೆ, ನಗರಕ್ಕೆ ತೊಗಾಡಿಯಾ ಬರುತ್ತಾನೆಂದರೆ ಅಲ್ಲಿ ವಾರಗಟ್ಟಲೇ ದ್ವೇಷದ ವಾತಾವರಣವಿರುತ್ತದೆ. ಹಾಗೇ ಪರಿಸ್ಥಿತಿಯನ್ನು ಸಮಾಜೋತ್ಸವ, ಸಮಾವೇಶ ಸಂಘಟಿಸವ ವ್ಯವಸ್ಥಾಪಕರು ಬಿಸಿಯೇರುವಂತೆ ವ್ಯವಸ್ಥೆಗೊಳಿಸಿರುತ್ತಾರೆ. ಹೀಗಾದಲ್ಲಿ ಜನರೂ ಸಹ ಅಂತಹ 'ಶೋ' ಪ್ರದರ್ಶನಕ್ಕೆ ಬರುತ್ತಾರೆ ಎಂಬುದು, ಪೂರ್ವ ಮಾನಸಿಕ ಹದ. ಹೀಗೆ ಮಾಡಿದರೆ ತೊಗಾಡಿಯಾನಿಂದ ವಿಷದ ಬೀಜ ಸದವಾಗಿ ಬಿತ್ತಬಹುದು ಎಂಬುದು ವಿಭಜಕವಾದಿಗಳ ಲೆಕ್ಕಾಚಾರ? 'ಚೆಡ್ಡಿ ಪಡೆ' ಅಟ್ಟಹಾಸದಲ್ಲಿ ಹಿಟ್ಲರ್ ನರ ಕಿರಾತಕರ ನರ್ತನಗೈಯುತ್ತಿದ್ದರೆ, ಬಡವರು, ಅಲ್ಪಸಂಖ್ಯಾತರು ಶಾಂತಿ ಸಹಬಾಳ್ವೆ ಬಯಸುವ ನಾಗರೀಕರು ತಲ್ಲಣಗೊಳ್ಳುತ್ತಾರೆ. ಹೀಗಾಗದಿದ್ದರೆ ಹಿಂದುತ್ವ ಉಳಿಯಲಾರದಂತೆ ಎಂದರೆ ಧರ್ಮದ ಅಂತಃ ಸತ್ವದ ವಧೆಯಾಗಬೇಕು ಎಂಬುದು ಅವರ ತಗಾದೆ.



ಈ ಪ್ರವೀಣಭಾಯಿ ತೊಗಾಡಿಯಾ ಏನು ಮಾತನಾಡುತ್ತಾನೆ ಎಂಬುದು ಎಲ್ಲರಿಗೂ ಗೊತ್ತು! ಆತನ ಕಿರಿಚಾಟಕ್ಕೆ ಒಂದು ವಾದ-ತರ್ಕ, ಸತ್ಯದ ಲವಲೇಶವಾದರೂ ಇರಬಹುದು ಎಂಬುದೇ ಮೂರ್ಖತನ. ಅವಾವೂ ಆತನಿಗೂ ಆತನ ಹಾಲೀಕರಿಗೂ ಬೇಕಿಲ್ಲ. ದೇಶದ ಸಂವಿಧಾನ, ಸೌಹಾರ್ದತೆ ಪರಂಪರೆ ಜನ ಸಂಸ್ಕೃತಿಯ ಬಗೆಗೆ ಕಿಂಚಿತ್ತೂ ಗೌರವವಿಲ್ಲ. ಆ ಲೆಕ್ಕದಲ್ಲಿ ಗೃಹಸಚಿವ ಖರ್ಗೆ ಹೇಳಿದಂತೆ 'ದೇಶದ್ರೋಹಿ' ಎಂಬುದರಲ್ಲಿ ಎರಡು ಮಾತಿಲ್ಲ. ಇಂತಹ ಹುಚ್ಚಾಟ ಆರ್ಭಟ ಮಾಡುತ್ತಿದ್ದ ತೊಗಾಡಿಯಾ ರಾಜಸ್ತಾನಕ್ಕೆ ಹೋದಾಗ ಬಂಧಿಸಿ ಜೈಲಿಗಟ್ಟಲಾಗಿತ್ತು. ಆಗ ದೇಶವೇ ಉರಿದು ಬೀಳುತ್ತದೆಯೆಂದು ಪತ್ರಿಕೆ, ಟಿ.ಪಿ. ಯವರು ಭಾವಿಸಿದ್ದರು. ಆದರೆ ಏನಾಗಲಿಲ್ಲ! ಸ್ವತಃ ಡಾ। ತೊಗಾಡಿಯಾ ಬಾಲಮುದರಿಕೊಂಡು ಹೋಗಿದ್ದ ಕಾನೂನಿನ ದಂಡ ಎತ್ತಿದ್ದರೆ ಥಂಡಾ ಆಗುತ್ತಾನೆ ಎಂಬುದು ಜಗಜ್ಜಾಹೀರು. ಆದರೆ ಕರ್ನಾಟಕದ ಚೆಡ್ಡಿಗಳು ಮತ್ತೇ ಆತನಿಗೆ ಹಿಂದೂ ರಕ್ಷಕನ ಇಮೇಜ್ ತರಲು ಯತ್ನಿಸುತ್ತಿದ್ದಾರೆ.



ಹೀಗೆ ಕರ್ನಾಟಕದಲ್ಲಿ ಬಜರಂಗದಳ, ವಿಶ್ವಹಿಂದೂ ಪರಿಷತ್ ನ ಮೂಲಕ ಚೆಡ್ಡಿ ಪಡೆಯುವರ ಕೋಮು ದ್ವೇಷದ ಪ್ರಚಾರ, ಗಲಭೆಗಳ ಸಿದ್ಧತೆ, ತ್ರಿಶೂಲ ಹಂಚಿಕೆಯಂತಹ ಅಪಾಯಕಾರಿ ಕೃತ್ಯಗಳನ್ನು ನಿತ್ಯನಿರಂತರವಾಗಿ ಮುಂದುವರಿಸಿರುವಾಗ ಅವು ನಡೆಯಲು ಬಿಟ್ಟಿರುವ ಕರ್ನಾಟಕದ ಘನಂದಾರಿ ಸೆಕ್ಯುಲರ್ ಸರ್ಕಾರ, ತೊಗಾಡಿಯಾ ಮಂಗಳೂರಿನ ಸಮಾವೇಶಕ್ಕೆ ಬರದಂತೆ ನಿಷೇಧಿಸಿತ್ತು. ಆಗ ಹೈಕೋರ್ಟ್ ಮೂಲಕ ತಡೆಯಾಜ್ಞೆ ತಂದು ಭಾಷಣ ಮಾಡಿ ಹೋದ. ಈಗ ವಿಜಾಪುರಕ್ಕೆ ಬರದಂತೆ ತಡೆಯಲು ನಿರ್ಧರಿಸಿ, ಜಿಲ್ಲಾಧಿಕಾರಿಗಳ ಆಜ್ಞೆ ಹೊರಡಿಸಿದ್ದರು. ಈಗಲೂ ಹೈಕೋರ್ಟ್ ಅದನ್ನು ತೆರವುಗೊಳಿಸಲು ಆದೇಶಿಸಿದೆ. ಹಲವು ಶರತ್ತು ಹಾಕಿದೆ. ಇದು ಕಾಂಗ್ರೆಸ್ ಸರ್ಕಾರಕ್ಕೆ ಗೊತ್ತಿರಲಿಲ್ಲವೇ? ಕಾಂಗ್ರೆಸ್ ನಿರ್ಬಧಿಸಿದಂತೆ ಮಾಡುವುದು, ಬಿಜೆಪಿ ಆರ್.ಎಸ್.ಎಸ್. ಇದರ ವಿರುದ್ಧ ವೀರಾವೇಶದಿಂದ ಹೋರಾಡಿ ಗೆದ್ದಂತೆ ಆಡುವುದು... ಎಷ್ಟೊಂದು ಲೆಕ್ಕಾಚಾರದ ನಾಟಕಗಳು!

ತೊಗಾಡಿಯಾ ನಿರ್ಬಂಧವನ್ನೇ ದೊಡ್ಡದಾಗಿ ಮಾಡಿ ವಿಧಾನಸಭೆಯ ಕಲಾಪಗಳೇ ನಡೆಯದಂತೆ ಅಧಿಕೃತ ವಿರೋಧ ಪಕ್ಷವಾದ ಬಿಜೆಪಿ ಬೊಬ್ಬೆ ಹೊಡೆದಿದೆ. ಕಲಾಪಗಳನ್ನೆ ನಡೆಸಲು ಬಿಡದೇ ಪ್ರಜಾಸತ್ತೆಗೆ ಕಳಂಕ ತಂದಿದೆ. ತಾವು ಬೇರೆ, ಅವರು ಬೇರೆ ಎಂದು ಬಣ್ಣದ ಮಾತು ಆಡುತ್ತಿದ್ದು ಚೆಡ್ಡಿಗಳೀಗ ತಾವೆಲ್ಲಾ ಒಂದೇ, ಎಂದು ಮತ್ತೆ ತೆರೆದು ತೋರಿಸಿದ್ದಾರೆ. ರಾಷ್ಟ್ರದ ಐಕ್ಯತೆಗೆ ಘಾತುಕ ಎಸಗುತ್ತಿರುವ ತೊಗಾಡಿಯಾ ನನ್ನ ಬೆನ್ನ ಮೇಲೆ ಹೊತ್ತು ತಿರುಗುವ ಮೂಲಕ, ಆತನನ್ನು, ಕೃತ್ಯಗಳನ್ನು ಉತ್ಪ್ರೇಕ್ಷಿಸುವುದು. ನಾಡಿನಲ್ಲಿ ಬರ, ನೀರು - ಮೇವಿನ ಹಾಹಾಕಾರ, ಹಸಿವಿನ ಸಾವು, ಗ್ರಾಮೀಣ ಕೃಪಾಂಕದವರ ಸಮಸ್ಯೆ, ವಿದ್ಯುತ್ ರಂಗ, ಕೈಗಾರಿಕೆಗಳ ಅವನತಿ, ಕೃಷಿ-ನಾಶ, ಬೆಲೆಯೇರಿಕೆಯಂತಹ ಹತ್ತಾರು ಜ್ವಲಂತ ಸಮಸ್ಯೆಗಳ ಬಗ್ಗೆ ಕಿಂಚಿತ್ತೂ ಕಾಳಜಿಯಿಲ್ಲದ ಹೊಣೆಗೇಡಿ ಬಿಜೆಪಿ ಕಲಾಪಗಳನ್ನೇ ಹಾಳುಮಾಡಿ, ಜನರ ಗಮನ ಬೇರಡೆಗೆ ಸೆಳೆದು ತಮ್ಮ ಕೋಮುವಾದೀ ಅಜೆಂಡಾ ಜಾರಿಗೆ ಇಳಿದಿದೆ. ಕೃಷ್ಣ, ಖರ್ಗೆಯವರಿಗೆ ನಿಜಕ್ಕೂ ಧರ್ಮನಿರಪೇಕ್ಷತೆ ರಾಷ್ಟ್ರೀಯ ಸಮಗ್ರತೆ ಬಗ್ಗೆ ವಿಶ್ವಾಸವಿದ್ದಲ್ಲಿ ತೊಗಾಡಿಯಾನ ಹಾರಾಟಗಳಿಗೆ ನಿಯಂತ್ರಣ ಹಾಕುವ ಕಾನೂನಾತ್ಮಕ ಕ್ರಮ ವಹಿಸಲು ದೃಢ ನಿರ್ಧಾರ ಪ್ರದರ್ಶಿಸಲಿ. ಅಂದಾಗಲೇ ಕೃಷ್ಣರವರು ಮೃದು ಹಿಂದುತ್ವ ಹೊದಿಕೆಯಲ್ಲಿ ಇಲ್ಲವೆಂದು ಸ್ವಲ್ಪವಾದರೂ ನಂಬಿಕೆ ಬಂದೀತು.!

ಈವಾರ ಕರ್ನಾಟಕ ಒಂದು ನೋಟ



ಎಸ್ ವೈ ಗುರುಶಾಂತ್

ಬಾಗೇಪಲ್ಲಿ ತಾಲೂಕಿನ ಪರಗೋಡು ಯೋಜನೆಯನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರ ಒಪ್ಪಿಗೆ ಸೂಚಿಸಿದೆ. ಕಳೆದ ತಿಂಗಳಿನಲ್ಲಿ ಬ್ಯಾರೇಜ್ ನಿರ್ಮಾಣ ಕುರಿತಂತೆ ಆಂಧ್ರ ಕರ್ನಾಟಕದ ನಡುವೆ ಸ್ಫೋಟಕ ಪರಿಸ್ಥಿತಿಯೇ ನಿರ್ಮಾಣಗೊಂಡಿತ್ತು.

ಉದ್ಭವಿಸಿದ ವಿವಾದದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಎಸ್.ಕೆ.ದಾಸ್ ನೇತೃತ್ವದ ತಂಡವನ್ನು ವಸ್ತು ಸ್ಥಿತಿಯ ಅಧ್ಯಯನಕ್ಕೆ ಕಳುಹಿಸಿತ್ತು. ಉಭಯ ರಾಜ್ಯಗಳ ವಾದ ಆಲಿಸಿದ್ದಲ್ಲಲ್ಲೇ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಾಗಿತ್ತು.

ಇದು ಕಾಡಿನ ನೀರಿಗೆ ಸೀಮಿತವಾದ ಯೋಜನೆಯೆಂಬುದನ್ನು ಕೇಂದ್ರಸರ್ಕಾರ ಒಪ್ಪಿದೆ. ಈ ಮೂಲಕ ನೀರಾವರಿಗೆ ಬಳಸಲಾಗುವುದೆಂಬ ಆಂಧ್ರ ತೆಲುಗುದೇಶಂ ಸರ್ಕಾರದ ವಾದ ಸರಿಯಲ್ಲವೆಂದು ತಳ್ಳಿಹಾಕಿದೆ. ಆಗಲೂ ಸಹ ನಿಜಪರಿಸ್ಥಿತಿ ಅರಿತು ಪರಸ್ಪರ ಸೌಹಾರ್ದತೆಯಿಂದ ಉಭಯ ರಾಜ್ಯಗಳು ಬಗೆಹರಿಸಿಕೊಳ್ಳುವುದಕ್ಕಿಂತ ವಿವಾದವಾಗಿ ರಾಜಕೀಯ ಲಾಭಗಳಿಸಲು ಮಾಡಿದ ಪ್ರಯತ್ನವೇ ಪ್ರಧಾನವಾಗಿತ್ತು. ಕೇಂದ್ರದ ಈ ನಿರ್ದೇಶನದ ಬಳಿಕ ಈ ಯೋಜನೆಯನ್ನು ಮತ್ತೇ ನೆನೆಗುದಿಗೆ ಬೀಡದೇ ಕರ್ನಾಟಕ ಸರ್ಕಾರ ಕೂಡಲೇ ಮುಗಿಸಿ ಬಾಗೆಪಲ್ಲಿ, ಗುಡಿಬಂಡೆ ಜನರಿಗೆ ಕುಡಿಯಲು ನಿರೊದಗಿಸಬೇಕು.

ಹಳದಿಕಾರ್ಡ್ ನೀಡಿಕೆಯ ಕಡಿತದ ಕ್ರಮ

ಹಳದಿಕಾರ್ಡುಗಳನ್ನು ಆಗಸ್ಟ್ 20ರೊಳಗೆ ಸಿದ್ಧಗೊಳಿಸಿ ವಿತರಿಸುವುದಾಗಿ ನಾಗರೀಕ ಸರಬರಾಜು ಸಚಿವ ರಾಮಲಿಂಗಾರೆಡ್ಡಿಯವರು ವಿಧಾನ ಸಭೆಯಲ್ಲಿ ಹೇಳಿಕೆ ನೀಡಿದ್ದಾರೆ. ಅವರು ಹೆಸರುಗಳು ಕಂಪ್ಯೂಟರಿನಲ್ಲಿ ದಾಖಲಾಗಿವೆಯಂತೆ. ಇನ್ನೂ 32 ಲಕ್ಷ ಅರ್ಜಿಗಳ ಇಲಾಖೆಯಲ್ಲಿದ್ದು ಅದನ್ನು ಪರಿಶೀಲಿಸಬೇಕಾಗಿದೆಯೆಂತೆ.

ಈ ಬಗ್ಗೆ ಅಸೆಂಬ್ಲಿಯಲ್ಲಿ ಚರ್ಚೆ ಬಂದದ್ದೇನೇ ಸರಿ, ಆದರೆ ಹಸಿರುಕಾರ್ಡ್ ರದ್ದುಪಡಿಸಿ, ಹಳದಿ ಕಾರ್ಡ್ ನೀಡಿಕೆಯ ಮಾನದಂಡ ನಿಗದಿಮಾಡಿದ್ದು ಅವೈಜ್ಞಾನಿಕ ಮಾನದಂಡಗಳನ್ನು ಬದಲಾಯಿಸಲು ಏನಾದರೂ ಕ್ರಮ ಕೈಗೊಂಡಿಲ್ಲ. ಈ ಮಾನದಂಡ ಅನುಸರಿಸಿದರೆ ಸುಮಾರು ಅರ್ಧದಷ್ಟು ಜನ ಕಾರ್ಡಿನ ಅವಕಾಶವನ್ನೇ ಕಳೆದುಕೊಳ್ಳಲಿದ್ದಾರೆ.

ಗ್ರಾಮೀಣ ಶ್ರೀಮಂತರು, ರಾಜಕೀಯ ಪ್ರಭಾವಿಗಳು ಇಂತಹ ಕಾರ್ಡುಗಳನ್ನು ಪಡೆಯುವಲ್ಲಿ ಪಕ್ಷಪಾತ ಅನುಸರಿಸಿರುವ ದೂರುಗಳಿವೆ. ಅರ್ಹ ಫಲಾನುಭವಿಗಳಿಗೆ ಸಿಕ್ಕದೇ ಹೋಗುವ ಸಂದರ್ಭ ಏರ್ಪಟ್ಟಿದೆ. ಮುಖ್ಯವಾಗಿ ಪಡಿತರದ ಧರಗಳನ್ನು ಏರಿಸುವ ಕ್ರಮವಲ್ಲದೇ ಕಾರ್ಡುದಾರರ ಸಂಖ್ಯೆಯನ್ನೇ ಕುಗ್ಗಿಸಲು ಈಗಾಗಲೇ ಸರ್ಕಾರ ನಿರ್ಧರಿಸಿ ಆ ಹಿನ್ನೆಲೆಯಲ್ಲಿ ನಿಯಮ ರೂಪಿಸಿ ನಿರ್ದೇಶನ ನೀಡಿದೆ. ಇಂತಹ ಸಮಸ್ಯೆಯ ಇತ್ಯರ್ಥಕ್ಕೆ ಸರ್ಕಾರ ಮುಂದಾಗಿಲ್ಲ. ಅಸೆಂಬ್ಲಿಯಲ್ಲಿ ಅದೇನೇ ಭರವಸೆಯನ್ನು ಸಚಿವರು ನೀಡಬಹುದು. ಆದರೆ ಅತೀ ಅಗತ್ಯ ಇರುವ ಜನತೆ ವಂಚಿತರಾಗುತ್ತಿರುವುದು ಧಾರುಣ ಸತ್ಯ ಜನಚಳುವಳಿ ಉತ್ತರ ಅಗತ್ಯವಿದೆ.

ಇತಿಹಾಸದ ಪುಟಗಳಿಂದ

ಮೈಸೂರು ಸಂಸ್ಥಾನದಲ್ಲಿ ರೈತರ ಹೋರಾಟಗಳು

80 ರ ದಶಕದ ನವಲಗುಂದ-ನರಗುಂದ ರೈತ ಹೋರಾಟ ಕಾಂಗ್ರೆಸ್ ನೇತೃತ್ವದ ಗುಂಡೂರಾಯರ ಸರಕಾರವನ್ನು ಕಿತ್ತೊಗೆಯಲು ಸಾಧ್ಯವಾಗಿತ್ತು. 50 ರ ದಶಕದಲ್ಲಿ ಭೂಮಿಗಾಗಿ ನಡೆದ ಕಾಗೋಡು ಸತ್ಯಾಗ್ರಹ ದೇಶದಲ್ಲಿನ ಸಮಾಜವಾದಿ ಚಿಂತಕರನ್ನು ಆಕರ್ಷಿಸಿತ್ತು. ಕೋಲಾರ, ಪಿ.ಕೆ. ಘುಂತಾಪುರದ ಭೂಮಿಗಾಗಿ ನಡೆದ ಹೋರಾಟಗಳು ಗಮನಾರ್ಹ.

ಅದಕ್ಕೂ ಮೊದಲು 1930-31 ರಲ್ಲಿ ಮಂಡ್ಯ ಜಿಲ್ಲೆಯಲ್ಲಿ ನಡೆದ ರೈತ ಹೋರಾಟ ಪ್ರಮುಖವಾದುದು. ಇದು ಇರ್ವಿನ್ ನಾಲಾ ರೈತ ಚಳುವಳಿ ಎಂದು ಪ್ರಸಿದ್ಧಿ ಪಡೆದಿದೆ. ಕೃಷ್ಣರಾಜ ಸಾಗರ ಅಣೆಕಟ್ಟನ್ನು ಕಟ್ಟಿ ಮಂಡ್ಯ ಜಿಲ್ಲೆಗೆ ಕಾಲುವೆ ಮೂಲಕ ನೀರನ್ನು ನೀಡಿದ ಕೀರ್ತಿ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರದ್ದು. ಅಂದು ರಾಜರ ಆಡಳಿತಕ್ಕೆ ಒಳಪಟ್ಟಿದ್ದ ಈ ಪ್ರದೇಶದಲ್ಲಿ ಬ್ರಿಟೀಷರ ಪ್ರಭಾವ ಇತ್ತು. ಅಂತೆಯೂ ನಾಲೆಗೆ ಇರ್ವಿನ್ ನಾಲೆ ಎಂದು ಹೆಸರಾಗಿತ್ತು. ಈಗ ಅದನ್ನು ವಿಶ್ವೇಶ್ವರಯ್ಯ ನಾಲೆ ಎಂದು ಕರೆಯುತ್ತಿದ್ದಾರೆ.

ನಾಲೆಯನ್ನು ಆರಂಭಿಸಿದ ಸರಕಾರ ಫಲಾನುಭವಿ ರೈತರ ಮೇಲೆ ಸುಂಕ ವಿಧಿಸಿತ್ತು. ಆದರೆ ರೈತರಿಗೆ ತಾವು ಬೆಳೆದ ಬೆಳೆಗಳಿಗೆ ಸರಿಯಾದ ಬೆಲೆ ಸಿಗುತ್ತಿರಲಿಲ್ಲ. ಸುಂಕವನ್ನು ನೀಡಲು ಅವರ ಬಳಿ ಹಣವಿರಲಿಲ್ಲ. ರಾಜರ ಆಡಳಿತದ ಸರಕಾರ ಬಲವಂತವಾಗಿ ವಸೂಲಿ ಮಾಡಲು ಹೊರಟಿತು. ಮಾತ್ರವಲ್ಲದೆ ಕಟ್ಟದೆ ಹೋದವರ ಮೇಲೆ ಬಡ್ಡಿ ವಿಧಿಸಿತು. ಆಗ ಹೆಚ್.ಕೆ.ವೀರಣ್ಣ ಗೌಡರ ನೇತೃತ್ವದಲ್ಲಿ ವ್ಯಾಪಕವಾದ ಪ್ರಚಾರ, ಸಿದ್ಧತೆಗಳನ್ನು ಮಾಡಿಕೊಂಡು ನಾಲ್ಕು ಸಾವಿರ ರೈತರು ಕಾಲ್ನಡಿಗೆಯಲ್ಲಿ ಬೆಂಗಳೂರಿಗೆ ಬಂದು ದಿವಾನರಿಗೆ ಬಾಕಿ ವಸೂಲಿ ಮಾಡಬಾರದೆಂದು ಒತ್ತಾಯಿಸಿದರು.

ಬಡ್ಡಿ ಇಲ್ಲದೆ ಹತ್ತು ವಾರ್ಷಿಕ ಕಂತುಗಳಲ್ಲಿ ರೈತರ ಸಾಲವನ್ನು ವಸೂಲಿ ಮಾಡಲು ಸರ್ಕಾರ ಒಪ್ಪಿಕೊಂಡಿತು. ಹೀಗೆ ರಾಜಕೀಯದ ಗಂಧವಿಲ್ಲದೆ, ತಮ್ಮ ಹಿತರಕ್ಷಣೆಯನ್ನು ಮಾಡಲು ಆರಂಭವಾದ ರೈತ ಚಳುವಳಿ, ಮುಂದಿನ ರಾಜಕೀಯ ಸೆಣಸಾಟಕ್ಕೆ ಜನರನ್ನು ಸಜ್ಜುಗೊಳಿಸಿತು.

ಆಧಾರ:
ಎನ್.ಪಿ.ಶಂಕರ ನಾರಾಯಣರಾವ್ ಅವರ
ಮೈಸೂರು ಸಂಸ್ಥಾನದ
ಮೊದಲ ಕಮ್ಯುನಿಸ್ಟರು

'ಬಿಸಿಯೂಟ'ದ ಸುದ್ದಿ ಸವಿಯು ಆರದಂತೆ ನೋಡಿಕೊಳ್ಳಲಾಗುತ್ತಿದೆ! ಇದು ಸಾಕಾಗದು ಎಂದಾಗ ಶಾಲೆಯ ಪಾಯಿಖಾನೆ ತೊಳೆದು, ಕಿರು ಉಪದೇಶವನ್ನೂ ಹೊಡೆದು ಮಹಾತ್ಮಗಾಂಧೀಜಿಯ ಪೋಜು ಕೊಡುವುದು ನಡೆದಿದೆ! ಆಹಾ! ಎಂತಹ ರಂಗಿನ ರಾಜಕೀಯ ಸ್ಟಂಟ್‌ಗಳು! ಕ.ಕನ್ನಡದಲ್ಲಿ


ಅಕ್ಕಿ ನೀಡಿದ 'ಅನಂತ' ಬಿಸಿಯೂಟ ಉಂಡ ರಮಾನಾಥ್! ಪಾಯಿಖಾನೆ ತೊಳೆದ ಪೂಜಾರಿ!

ಫೋಟೋ ಪೋಜು!

ಬಿಸಿಯೂಟದ ಬಗ್ಗೆ ರಾಜ್ಯದ ವಿವಿಧ ಮೂಲೆಗಳಿಂದ ನವನವೀನ ಸುದ್ದಿಗಳು ಕೇಳಿ ಬರುತ್ತಿರುವಂತೆಯೇ ದ.ಕ. ದಲ್ಲೂ ರಂಗುರಂಗಿನ (ಎಸ್.ಎಂ.) ಕೃಷ್ಣ ನಾಟಕದ ಪಡಿಯಚ್ಚುಗಳು ಮೂಡಿ ಬರುತ್ತಿವೆ. ವಿವಿಧೆಡೆಗಳಲ್ಲಿ ಕೃಷ್ಣ ಸರಕಾರದ ಮಂತ್ರಿಗಳು, ಶಾಸಕರು ಮತ್ತು ಅಮ್ಮ ಪಕ್ಷ (ಇಂದಿರಾ ಕಾಂಗ್ರೆಸ್)ದ ರಾಜ್ಯಾಧ್ಯಕ್ಷರ ನವುರಾದ ಪ್ರಹಸನ ಎಳೆಯ ಚಿಣ್ಣರನ್ನು ಮೂಕವಿಸ್ಮಿತಗೊಳಿಸಿದೆ. ಬಿ. ಜನಾರ್ಧನ ಪೂಜಾರಿಯವರು ತನ್ನ ಪ್ರತಿಯೊಂದು ಭಾಷಣದಲ್ಲೂ ಇಂದಿರಾಗಾಂಧಿಯನ್ನು 'ಅಮ್ಮ' ಎಂದು ಸಂಬೋಧಿಸಿ ಗೋಳಾಡಿ ಕಣ್ಣೀರು ಸುರಿಸುವುದು ಸಂಪ್ರದಾಯ. ಆದ್ದರಿಂದಲೇ ಕಾಂಗ್ರೆಸ್ಸಿಗೆ ಪರ್ಯಾಯವಾಗಿ 'ಅಮ್ಮ ಪಕ್ಷ' ಯಾ 'ಅಮ್ಮ ಕಾಂಗ್ರೆಸು' ಎಂದು ದ.ಕ. ಜಿಲ್ಲೆಯಲ್ಲಿ ಜನಜನಿತವಾದ ಸಂಗತಿಯಾಗಿದೆ.

ದ.ಕ.ದಲ್ಲಿ ಬಿಸಿಯೂಟದಿಂದ ಆಸ್ಪತ್ರೆ ಸೇರಿದ ಪ್ರಕರಣಗಳು ವರದಿಯಾಗಿಲ್ಲ. ಆದರೆ ರಾಜ್ಯದಲ್ಲಿ ಅಂತಹ ಘಟನೆ ನಡೆದಾಗ ಬಿಜೆಪಿಯ ಅಧ್ಯಕ್ಷತೆ ಹೊಸತಾಗಿ ವಹಿಸಿದ ಅನಂತ ಕುಮಾರ್‌ರವರು ಜಿಲ್ಲಾ ಪ್ರವಾಸದಲ್ಲಿ ಇದ್ದು ಕೇಂದ್ರ ನೀಡಿರುವ ಅಕ್ಕಿ ಯನ್ನು ಸರಿಯಾಗಿ ಬೇಯಿಸಿ ಹಾಕಲು ತಾಕತ್ತಿಲ್ಲದವರು ಎಂದು ಜರೆದರು. ಕಾಂಗ್ರೆಸು ಇದಕ್ಕೆ ಸೂಕ್ತವಾದ ಪ್ರತಿಕ್ರಿಯಿಸಿಲ್ಲ. ಏಕೆಂದರೆ ಬಿಸಿಯೂಟ ಕಾರ್ಯಕ್ರಮದಿಂದ 'ಕಿಸೆ' ಬಿಸಿ ಮಾಡುವುದರಲ್ಲೇ ತಲ್ಲೀನವಾಗಿರುವಾಗ 'ವಾಗ್ಬಾಣ'ಗಳ ವೈಖರಿ ನಮಗೇಕೆ ಎಂಬ ಮನೋಭಾವ ಅವರದ್ದಾಗಿದೆ.

ಜುಲೈ ತಿಂಗಳ ಮೊದಲ ಹದಿನೈದು ದಿನಗಳು ಜಿಲ್ಲೆಯ ಪತ್ರಿಕೆಗಳು ಬಹಳಷ್ಟು ಜಾಗವನ್ನು 'ಬಿಸಿಯೂಟ'ಕ್ಕಾಗಿ ಮೀಸಲಿರಿಸಿವೆ. ಸಾಕಷ್ಟು ಪೋಟೋಗಳನ್ನು ಎಲ್ಲಾ ಪತ್ರಿಕೆಗಳು ಪ್ರಕಟಿಸಿಯಾಗಿವೆ. ಕೆ.ಪಿ.ಸಿ.ಸಿ.ಐ ಅಧ್ಯಕ್ಷರಾದ ಪೂಜಾರಿಯವರಂತೂ ಪತ್ರಿಕಾ ಮಿತ್ರರನ್ನು ತೆಕ್ಕೆಗೆ ಸೇರಿಸಿಕೊಂಡು ಮಧ್ಯಾಹ್ನದ ಹೊತ್ತಿಗೆ ಸರಕಾರಿ ಶಾಲೆಯ ಬಿಸಿಯೂಟದ ಪೋಟೋಕ್ಕೆ ಪೋಸು ಕೊಡುತ್ತಿದ್ದಾರೆ. ಬೊಕ್ಕಪಟ್ನ ಸರಕಾರಿ ಶಾಲೆಯಲ್ಲಿ ಊಟ ಮಾಡಿದ ಮೇಲೆ ಲ್ಯಾಟ್ರೀನ್ ತೊಳೆದು ಭಾರಿ 'ಪ್ರಚಾರ' ಪಡೆದುಕೊಂಡಿದ್ದಾರೆ. ಕಾಂಗ್ರೆಸು ಕಾರ್ಯಕರ್ತರಿಗೆ ಕ್ವಿಜ್ ನಡೆಸುವ 'ಹವ್ಯಾಸ'ದಂತೆ, ಊಟ ಆದ ಮೇಲೆ ಶಾಲೆಯ ಸಮಸ್ಯೆಗಳ ಬಗ್ಗೆ ಕಾಟಾಚಾರಕ್ಕೆ ವಿಚಾರಿಸುವ ಜಾಯಮಾನ ವನ್ನು ಹಿಂದಿರುವ ರಾಜಕಾರಣಿ. ಅವರು ಶಾಲಾ ಅಧ್ಯಾಪಕಿ ಪ್ರಾಮಾಣಿಕವಾಗಿ ಟಾಯ್ಲೆಟ್ ಕ್ಲೀನ್ ಮಾಡಲು ಜನಸಿಗುತ್ತಿಲ್ಲ ಎಂದು ಹೇಳಿದಾಗ, ಪೂಜಾರಿ ಹಿಡಿಸೂಡಿ ಪಡೆದು ನಾಟಕೀಯವಾಗಿ ನೀರು ಹಾಕಿ ಟಾಯ್ಲೆಟ್ ತೊಳೆಯುವ 'ಶಾಸ್ತ್ರ' ತೋರಿಸಿ ಜನ ಯಾತಕ್ಕೆ ಬೇಕು? ನೀವು ಮತ್ತು ವಿದ್ಯಾರ್ಥಿಗಳೇ ಮಾಡಬಹುದಲ್ಲ ಎಂದು ಉತ್ತರ ನೀಡಿ ದೊಡ್ಡ ಹೀರೋ ಆದರು. ಸಮಸ್ಯೆಯ ಬಗ್ಗೆ ಪ್ರಾಮಾಣಿಕ ಕಾಳಜಿ, ರಾಜಕೀಯ ಇಚ್ಛಾಶಕ್ತಿ ಇಲ್ಲದ ವ್ಯಕ್ತಿಗಳು ಎಷ್ಟೊಂದು ಸರಳೀಕರಿಸಿ ಪರಿಹಾರ ಸಾಧ್ಯವಿದೆ ಎಂದು ನಂಬಿಸುವುದಕ್ಕೆ ಇದಕ್ಕಿಂತ ಹೆಚ್ಚಿನ ಜಾಣ್ಮೆ ಬೇಕೇ? ಕಾಂಗ್ರೆಸ್ಸು ಸ್ವತಂತ್ರ ಭಾರತದ ಆಳ್ವಿಕೆಯಲ್ಲಿ ಮಾಡಿದ್ದು ಇದನ್ನೇ. ಸಮಸ್ಯೆಯ ಆಳಕ್ಕೆ ಹೋಗಿ ಪರಿಹಾರವನ್ನು ರೂಪಿಸದೆ, ತಾತ್ಕಾಲಿಕವಾಗಿ ಬೂದಿ ಪ್ರೋಕ್ಷಣೆ ನಡೆಸುವುದು; ಗಿಮಿಕ್ಕು ನಡೆಸುವುದೇ ಅದರ ವಿಧಾನ ಎಂಬುದು ಇಲ್ಲಿ ಸ್ಪಷ್ಟ. ಜಿಲ್ಲೆಯ ಹೆಚ್ಚಿನ ಬಿಸಿಯೂಟದ ಕೇಂದ್ರಗಳು ಪೂಜಾರಿಯವರು ಬಂದರೆ ಪೋಟೋ ಪತ್ರಿಕೆಯಲ್ಲೂ ಬರುತ್ತದೆ, ಟಾಯ್ಲೆಟ್ ಕ್ಲೀನೂ ಆಗಬಹುದೆಂದು ಕಾಯುತ್ತಿದ್ದ ಸುದ್ದಿ ಬಂದಿವೆ.



ಇತ್ತ ಜಿಲ್ಲಾ ಉಸ್ತುವಾರಿ ಸಚಿವ ರಮಾನಾಥರೈಯವರು ಭಾರೀ ಭಾರೀ ಕಷ್ಟ ಪಟ್ಟು ಮಕ್ಕಳೊಂದಿಗೆ ಊಟದ ತಟ್ಟೆಯ ಮುಂದೆ ಕುಳಿತುಕೊಂಡಂತಹ ಭಾವ ಚಿತ್ರವೂ ಪ್ರಕಟವಾಗಿದೆ. ಚಿತ್ರವನ್ನು ನೋಡುವಾಗ ತಟ್ಟೆಗೂ ಅವರಿಗೂ ಸಂಬಂಧವೇ ಇಲ್ಲ ಎಂಬಂತೆ ಕಾಣುತ್ತಿದೆ. ಉಳ್ಳಾಲ ಶಾಸಕರು ಮಕ್ಕಳೊಂದಿಗೆ ಊಟಕ್ಕೆ ಕುಳಿತು ಊಟ ಮಾಡಿದ್ದರಾದರೂ ಅವರು ಮಾಡಿದ್ದು ಹೋಟೇಲಿನಿಂದ ತರಿಸಿದ ಪ್ರತ್ಯೇಕ ಊಟ ಎಂಬ ಗುಸು ಗುಸು ಸುದ್ದಿ ಇದೆ.

ಬಹಳಷ್ಟು ಶಾಲೆಗಳಿಗೆ ಕೇವಲ ತೊಗರಿಬೇಳೆ ಮತ್ತು ಉಪ್ಪು ಹಾಗೂ ಅಕ್ಕಿ ಸರಬರಾಜು ಆಗಿದೆ. ಪ್ರತಿ ದಿನ ತೊಗರಿ ಬೇಳೆ ಸಾರು ಮಾತ್ರ ಕೊಡಲಾಗುತ್ತಿದ್ದು ಜಿಲ್ಲೆಯ ಬಡಜನರ ಆಹಾರ ಪದ್ಧತಿಯಲ್ಲಿ ತೊಗರಿ ಬೇಳೆ ಅಷ್ಟೊಂದು ಪ್ರೀತಿದಾಯಕವಾದುದು ಅಲ್ಲ. ಈ ಸಾಂಬಾರಿಗೆ ಪರ್ಯಾಯವನ್ನು ಸರಕಾರ ಮಾಡದಿದ್ದರೆ ಮುಂದೊಂದು ದಿನ ಬಿಸಿಯೂಟದ ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುವ ಸಾಧ್ಯತೆ ಇದೆ. ಈಗಾಗಲೇ ಶಾಲೆಯ ಅಕ್ಕಪಕ್ಕದ ಮನೆಗಳಲ್ಲಿ ವಾಸಿಸುವ ವಿದ್ಯಾರ್ಥಿಗಳು ಮನೆಯಲ್ಲೇ ಊಟ ಮಾಡಲು ಪ್ರಾರಂಭಿಸಿದ್ದಾರೆ ಎಂಬ ಸುದ್ದಿ ಒಂದೆಡೆಯಾದರೆ ಮತ್ತೊಂದೆಡೆಯಲ್ಲಿ ಮನೆಯಿಂದಲೇ ಬುತ್ತಿ ಕಟ್ಟಿಕೊಂಡು ಬರುವ ಸಂಪ್ರದಾಯವೇ ಮತ್ತೆ ಮುಂದುವರಿದಿದೆ.

ಇನ್ನು ಮಾಧ್ಯಮದಲ್ಲಿ ಬಿಸಿಯೂಟಕ್ಕೆ ಸಂಬಂಧಿಸಿ ಹಲವಾರು ಸ್ವಾರಸ್ಯಕರ ಸಂಗತಿಗಳು ಪ್ರಕಟವಾಗಿವೆ. ಮಂಗಳೂರಿನಲ್ಲಿ ಶಾಲಾ ರಂಗಮಂದಿರದ ಅರ್ಧಭಾಗವನ್ನು ಗೋಡೆಕಟ್ಟಿ ಅಡುಗೆ ಮನೆಯನ್ನಾಗಿ ಮಾಡಿದ ಪ್ರಕರಣ ಪ್ರತಿಭಟನೆಗೆ ಗುರಿಯಾಗಿದೆ. ಸಾಕಷ್ಟು ಭದ್ರತೆಯಿಲ್ಲದೆ ಹರಕು ಮುರುಕು ಶಾಲೆಗಳ ಕೋಣೆಗಳಿಂದ ಅಡುಗೆ ಅನಿಲ, ಗ್ಯಾಸ್, ಅಕ್ಕಿ ಮೊದಲಾದುವುಗಳನ್ನು ಕಳ್ಳರು ಲಪಟಾಯಿಸಿದ ಸಂಗತಿ ವರದಿಯಾಗಿದೆ. ಬಂಟ್ವಾಳದ ಮಿತನಡ್ಕ ಮತ್ತು ಮಂಗಳೂರಿನ ವೈಕಂಪಾಡಿಯಲ್ಲಿ ಅಡುಗೆ ಅನಿಲ ಸೋರಿ ಬೆಂಕಿ ಹತ್ತಿಕೊಂಡು, ಶಾಲಾ ಮಕ್ಕಳ ಪಠ್ಯ ಮತ್ತು ಬಿಸಿಯೂಟಕ್ಕೆ ಸಂಚಕಾರ ಒದಗಿ ಬಂದಿದೆ.

ಅಡುಗೆ ಸಹಾಯಕರ ನೇಮಕಾತಿಯ ಮೀಸಲಾತಿ ಅಂಶವನ್ನು ಗಾಳಿಗೆ ತೂರಿರುವ ಅಂ ಕೇವಲ ಕಾಂಗ್ರೆಸ್ಸು ಪಕ್ಷದ ಬೆಂಬಲಿಗರನ್ನು ಮಾ ನೇಮಿಸಿರುವ ಅಂಶವನ್ನು ಮಾಧ್ಯಮಗಳು ವರ ಮಾಡಿರುವಂತೆ ಜಾತಿಯ ವಿಷವನ್ನು ಕಕ್ಕ ಬಿಸಿಯೂಟವನ್ನು ಉಪಯೋಗಿಸಲಾಗಿದೆ ಎಂ ದಲಿತ ಸಂಘಟನೆಗಳು ದೂರಿವೆ.

ಕೆಲವು ಶಾಲೆಗಳ ಅಭಿವೃದ್ಧಿ ಸಮಿತಿಗ 'ಬಿಸಿಯೂಟ ಬೇಡ' ಎಂಬ ನಿರ್ಣಯ ಪಾ ಮಾಡಿ ಮೇಲಧಿಕಾರಿಗಳಿಗೆ ಕಳುಹಿಸಿಕೊಟ್ಟಿವೆ. ರೀತಿ ಚಿತ್ರ ವಿಚಿತ್ರವಾಗಿ ನಾಟಕೀಯ ತಿರುವುಗಳ ಪಡೆದುಕೊಡುತ್ತಿರುವ ಈ ಕಾರ್ಯಕ್ರಮದ ಮುಂದ ಭವಿಷ್ಯ ಉತ್ತ ಸಾಗಬಹುದೆಂದು ಊಹಿಸುವು ಕಷ್ಟದ ಸಂಗತಿಯಾಗಿದೆ.

● ಆಯುಷ್ಕಾಮ
ಮಂಗಳೂರು

ಕೇರಳದಲ್ಲಿ ಬಿಸಿಯೂಟದ ಕಾರ್ಯಕ್ರಮಕ್ಕೆ 17 ವರ್ಷಗಳು ಸಂದಿವೆ. ಒಂದೇ ಒಂದು ಇಂತಹ ಅಹಿತಕರ ಘಟನೆ ಸಂಭವಿಸಿಲ್ಲ.

ಕೇರಳದಲ್ಲಿ ಈ ರೀತಿ ಇದೆ

1. ಏಳನೇ ತರಗತಿವರೆಗಿನ ಎಲ್ಲಾ ಮಕ್ಕಳಿಗೂ ಸಿಗುತ್ತದೆ.
2. ಪ್ರತೀ ಮಗುವಿಗೆ 60 ಗ್ರಾಂ ಅಕ್ಕಿ, 30 ಗ್ರಾಂ ಪಚ್ಚೆ ಹೆಸ್ರು.
3. 900 ಮಕ್ಕಳವರೆಗೆ ಒಬ್ಬರೇ ಅಡುಗೆಯವರು.
4. ಅಡುಗೆಯ ಪಾತ್ರೆಗಳನ್ನು ಆಯಾ ಶಾಲೆ ಅಕ್ಷರ - ರಕ್ಷಕ ಸಮಿತಿ ನೀಡುತ್ತದೆ.
5. ಅಕ್ಕಿ ಪಚ್ಚೆ ಹೆಸ್ರು ಸರಕಾರ ನೀಡಿದರೆ ಉಳಿದ ಖರ್ಚನ್ನು ಗ್ರಾಮ ಪಂಚಾಯತ್ ಭರಿಸುತ್ತದೆ.
6. ಅಡುಗೆಯನ್ನು ರಕ್ಷಕರು ಮಕ್ಕಳನ್ನು ಜಗಲಿಯಲ್ಲಿ ಕೂರಿಸಿ ಬಡಿಸುತ್ತಾರೆ.
7. ಊಟದ ತಟ್ಟೆಯನ್ನು ಮಕ್ಕಳೇ ತರುತ್ತಾರೆ.
8. ಅಡುಗೆ ಶಡ್ಡನ್ನು ಸ್ಥಳೀಯ ಗ್ರಾಮ ಪಂಚಾಯತ್ ಒದಗಿಸುತ್ತದೆ.
9. ಅಡುಗೆಯವರ ಸಂಬಳ, ಸೌದೆ, ಸಾಗಾಟ, ಉಪ್ಪು, ಮೆಣಸು ಖರ್ಚಿಗಾಗಿ 100ರ ವರೆಗೆ ಪ್ರತೀ ಮಗುವಿಗೆ 50 ಪೈಸೆಯಂತೆ ಅದಕ್ಕಿಂತ ಹೆಚ್ಚಿದರೆ 20 ಪೈಸೆಯಂತೆ ನೀಡಲಾಗುತ್ತದೆ.
10. ಅಡುಗೆ ಅನಿಲದ ಬದಲು ಹೊಗೆ ರಹಿತ ಒಲೆ ಉಪಯೋಗಿಸಲಾಗುತ್ತಿದ್ದು ಕಡಿಮೆ ಬೆಲೆಯ ಗೆರಟೆ ಮರದ ಹುಡಿಯನ್ನು ಬಳಸಲಾಗುತ್ತಿದೆ.
11. ಆಯಾಯ ದಿನದ ಹಾಜರಾತಿಯನ್ನು ನೋಡಿ ಬೆಳಗ್ಗೆ 10.30ಕ್ಕೆ ಅಂದಿನ ಊಟದ ತಯಾರಿ ಪ್ರಾರಂಭವಾಗುತ್ತದೆ.

ಆಧಾರ : ವಿಜಯ ಕರ್ನಾಟಕ

ಭಾರತದಲ್ಲಿ ವಿಶ್ವ ಸಾಮಾಜಿಕ ವೇದಿಕೆ ಸಮಾವೇಶ : ಕರ್ನಾಟಕದಲ್ಲೂ ಚಾಲನೆ

ಶೋಷಣೆಯನ್ನೇ ಗುರಿಯಾಗಿಸಿಕೊಂಡಿರುವ ವಿಶ್ವ ಆರ್ಥಿಕ ವೇದಿಕೆ (World Economic Forum)ಗೆ ಪರ್ಯಾಯವಾಗಿ ಅಸ್ತಿತ್ವಕ್ಕೆ ಬಂದಿರುವ ವಿಶ್ವ ಸಾಮಾಜಿಕ ವೇದಿಕೆ (World Social Forum) ಗೆ ಕರ್ನಾಟಕದಲ್ಲಿ ಚಾಲನೆ ಆರಂಭವಾಗಿದೆ.

ವಿ.ಸಾ.ವೇದಿಕೆಯು ಕಳೆದ ಮೂರು ಅಂತರರಾಷ್ಟ್ರೀಯ ಸಮಾವೇಶಗಳು ಬ್ರೆಜಿಲ್‌ನಲ್ಲಿ ನಡೆದಿದ್ದು ನಾಲ್ಕನೇ ಸಮಾವೇಶ ಭಾರತದ ಮುಂಬೈನಲ್ಲಿ ನಡೆಯಲಿದೆ. 2004 ರ ಜನವರಿ 16 ರಿಂದ 21 ರವರೆಗೆ ನಡೆಯಲಿರುವ ಈ ಸಮಾವೇಶದಲ್ಲಿ ಭಾರತದ 50 ಸಾವಿರ ಹಾಗೂ ಪ್ರಪಂಚದ ಇತರ ದೇಶಗಳ 15 ಸಾವಿರ ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆಯಿದೆ.

ಜಾಗತೀಕರಣ ಹಾಗೂ ಕೋಮುವಾದವನ್ನು ವಿರೋಧಿಸುವ ಎಲ್ಲ ರೀತಿಯ ಸಂಘಟನೆಗಳಿಗೂ ಈ ವೇದಿಕೆಯಲ್ಲಿ ಸ್ಥಳವಿದೆ. ಈ ವಿಶಾಲ ವೇದಿಕೆಯಲ್ಲಿ ಈಗಾಗಲೇ ಸಾವಿರಾರು ಸಂಘಟನೆಗಳು ಸೇರಿದ್ದು ಈ ವೇದಿಕೆಯ ವ್ಯಾಪ್ತಿಗೆ ಸೇರದಿರುವ ಇನ್ನೂ ಅನೇಕ ಸಂಘಟನೆಗಳಿದ್ದು ಅವರುಗಳನ್ನೆಲ್ಲಾ ವೇದಿಕೆಗೆ ತರುವ ಪ್ರಯತ್ನ ನಡೆದಿದೆ.

ನಾಲ್ಕನೇ ಅಂತರ ರಾಷ್ಟ್ರೀಯ ಸಮಾವೇಶ ಭಾರತದಲ್ಲಿ ನಡೆಯಲಿರುವ ಹಿನ್ನೆಲೆಯಲ್ಲಿ ಎಲ್ಲ ರಾಜ್ಯಗಳಲ್ಲಿಯೂ ಈಗಾಗಲೇ ಚಟುವಟಿಕೆಗಳು ಆರಂಭವಾಗಿವೆ. ಕರ್ನಾಟಕದಲ್ಲಿ ಇದಕ್ಕೆ ಚಾಲನೆ ನೀಡುವ ಹಿನ್ನೆಲೆಯಲ್ಲಿ ಈಗಾಗಲೇ ನಾಲ್ಕು ಸಭೆಗಳು ಬೆಂಗಳೂರಿನಲ್ಲಿ ನಡೆದಿವೆ. ರಾಜ್ಯದಲ್ಲಿ ಜಾಗತೀಕರಣದಿಂದುಂಟಾಗಿರುವ ಸಮಸ್ಯೆಗಳು, ಪ್ರದೇಶಗಳನ್ನು ಗುರ್ತಿಸಿ ಅಧ್ಯಯನ ಮಾಡುವುದು ಮತ್ತು ಬದಲಿ ನೀತಿಗಳನ್ನು ರೂಪಿಸುವ ಕೆಲಸ ಆಗಬೇಕಾಗಿದೆ.

ರಾಜ್ಯದಲ್ಲಿ ಕರ್ನಾಟಕ ಸಾಮಾಜಿಕ ವೇದಿಕೆ ರಚಿಸಬೇಕಿರುವ ಅಗತ್ಯವಿರುವ ಕಾರಣ, ವಿಶ್ವ ಸಾಮಾಜಿಕ ವೇದಿ ಉದ್ದೇಶಗಳಿಗೆ ಬದ್ಧರಾಗಿರುವ ಎಲ್ಲ ಸಂಘಟನೆಗ ಒಂದೆಡೆ ತರುವ ಪ್ರಯತ್ನ ನಡೆದಿದೆ. ಪೂರಕವಾಗಿ ಸೆಪ್ಟೆಂಬರ್ 9 ರ ಬೆಂಗಳೂರಿನಲ್ಲಿ ಒಂದು ದಿನದ ರಾಜ್ಯ ಸಮಾವೇಶ ನಡೆಯಲಿದೆ.

ಈ ಸಮಾವೇಶದಲ್ಲಿ ವಿ.ಸಾ.ವೇದಿಕೆಯ ಉದ್ದೇಶಗಳನ್ನು ಅರ್ಥೈಸಿಕೊಳ್ಳುವುದು, ರಾ ತೆಗೆದುಕೊಳ್ಳಬಹುದಾದ ಚಟುವಟಿಕೆಗ ಗುರ್ತಿಸುವುದು ಮತ್ತು ರಾಜ್ಯಮಟ್ಟದ ವೇದಿಕೆ (ಕರ್ನಾಟಕ ಸಾಮಾಜಿಕ ವೇದಿಕೆ) ತರಲಾಗುವುದು.

ಚುನಾವಣೆಯನ್ನು ಗಮನದಲ್ಲಿರಿಸಿರುವ ಬಿಜೆಪಿ ಹಲವಾರು ವರಸೆಗಳಲ್ಲಿ ತೊಡಗಿದೆ. ಹಿಂದುತ್ವದ ಆಕ್ರಮಣಕಾರಿ ಅಜೆಂಡಾ, ಪಾಕ್ ಸಂಬಂಧದಲ್ಲಿ ಶಾಂತಿ ಪ್ರಕ್ರಿಯೆ ಮುರಿಯುವ ಯತ್ನ ನಡೆಸಿದೆ. ಆಘಾತಕಾರಿ ಅಂಶವೆಂದರೆ ಬಾಬ್ರಿ ಮಸೀದಿ ಧ್ವಂಸದಲ್ಲಿ ಭಾಗಿಯಾಗಿದ್ದ ಅಡ್ವಾಣಿ, ಜೋಷಿಯವರ 'ಸಂಚಿ'ನ ಅಂಶ ಸಿಬಿಐ ಮೂಲಕ ಕೈ ಬಿಡಿಸಿರುವುದು.

ಚುನಾವಣೆ ಅಯೋಧ್ಯಾ ಕಾಂಡ

ಪಾತಕಿ ಕುತಂತ್ರಿಗಳಿಗೆ ಸಿಬಿಐ ಸಮರ್ಥನೆ!

ಛತೀಸ್ ಘಡದ ರಾಜಧಾನಿ ರಾಯಪುರದಲ್ಲಿ ನಡೆದ ಭಾರತೀಯ ಜನತಾಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿಯು, ಮುಂಬರುವ ಚುನಾವಣೆಗಳನ್ನು ಗುರಿಯಲ್ಲಿಟ್ಟುಕೊಂಡು ಅಯೋಧ್ಯಾ ಕಾರ್ಯ ಸೂಚಿಯನ್ನು ಮತ್ತೆ ದೇಶದ ಮುಂದಿಟ್ಟಿದೆ. ತನ್ನ ಐದು ವರ್ಷಗಳ ದೀರ್ಘ ಆಡಳಿತದಲ್ಲಿ ಜನಸಾಮಾನ್ಯರ ಬವಣೆಯನ್ನು ನೀಗಿಸಲು ಸಾಧ್ಯವಾಗದ ಬಿಜೆಪಿ, ಮತಗಳಿಸುವ ಹಾದಿ ಕೋಮು ವಿಭಜನೆಯೊಂದೇ ಎಂದು ಮನದಟ್ಟು ಮಾಡಿಕೊಂಡಿದೆ. ಅಂತೆಯೇ ಹಿಂದೂ ಮುಸ್ಲಿಂರ ಮಧ್ಯೆ ಗಲಭೆಗಳನ್ನು ಸೃಷ್ಟಿಸಿ, ಹಿಂದೂ ಮತ ಬ್ಯಾಂಕಿನ ಮೇಲೆ ತನ್ನ ಕಣ್ಣಿಟ್ಟಿದೆ.

ಆದ್ದರಿಂದಲೇ ಎನ್.ಡಿ.ಎ. ಅಜೆಂಡಾದಂತೆ ಕಾರ್ಯನಿರ್ವಹಿಸುವುದಾಗಿ ದೇಶದ ಜನತೆಗೆ ಮಾತು ಕೊಟ್ಟಿದ್ದರೂ, ಚುನಾವಣೆ ಸಮೀಪಿಸುತ್ತಿದ್ದಂತೆ, ತನ್ನ ನಿಜ ಕಾರ್ಯ ಸೂಚಿಯನ್ನು ಹೊರಹಾಕುತ್ತಿದೆ. ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ, ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಿದ ಸಂವಿಧಾನದ 370ನೇ ಕಲಂನ್ನು ತೆಗೆದುಹಾಕುವುದು, ಸಮಾನ ನಾಗರಿಕ ಕಾನೂನು, ಗೋಹತ್ಯೆ ನಿಷೇಧ ಮೊದಲಾದ ಬಿಜೆಪಿಯ ಅಜೆಂಡಾವನ್ನು ಘೋಷಿಸಿದ್ದ ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ ಮಾಡಲು ತನಗೆ ಮೆಜಾರಿಟಿ ಇಲ್ಲ ಎಂದು ಹೇಳುವ ಬಿಜೆಪಿ, ಪ್ರತಿಯೊಂದು ಹಳ್ಳಿಗೂ, ಪ್ರತಿಯೊಂದು ಮನೆಗೂ ಹೋಗಿ ಪ್ರಚಾರ ನಡೆಸಬೇಕೆಂದು ತನ್ನ ಕಾರ್ಯಕರ್ತರಿಗೆ ಹೇಳಿದೆ. ಸೋನಿಯಾ ಗಾಂಧಿ ವಿದೇಶಿ ಮೂಲದವರು ಎಂಬ ವಿಷಯ ಕೂಡಾ ಮುಂದಿನ ಚುನಾವಣೆಯ ಪ್ರಮುಖ ಅಜೆಂಡಾ ಎಂದು ಬಿಜೆಪಿ ಕಾರ್ಯಕಾರಿಣಿ ಸೂಚಿಸಿದೆ.

1989ರಲ್ಲಿ ಪಲಂಪುರದಲ್ಲಿ ನಡೆದ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ರಾಮಮಂದಿರ ನಿರ್ಮಾಣಕ್ಕಾಗಿ ಕೇಂದ್ರ ಕಾನೂನು ತರಬೇಕೆಂದು ನಿರ್ಣಯ ಕೈಗೊಂಡಿತ್ತು. ಈ 14 ವರುಷಗಳ ಅವಧಿಯಲ್ಲಿ ನ್ಯಾಯಾಲಯದ ತೀರ್ಪಿನಿಂದಾಗಲಿ, ಮಾತುಕತೆಯ ಮೂಲಕವಾಗಲಿ ತನ್ನ ಆಸೆ ಕೈಗೂಡುವುದಿಲ್ಲ ಎಂದು ಅರಿತ ಬಿಜೆಪಿ, ತನ್ನ ಮಿತ್ರ ಪಕ್ಷಗಳ ಅಭಿಪ್ರಾಯಗಳನ್ನು. ಗಣನೆಗೆ ತೆಗೆದುಕೊಳ್ಳದೆ, ರಾಯಪುರದಲ್ಲಿ ನಡೆದ ಸಭೆಯಲ್ಲಿ ಪುನಃ ಕೇಂದ್ರ ಕಾನೂನು ತರಬೇಕೆಂದು ನಿರ್ಣಯ ಅಂಗೀಕರಿಸಿದೆ. ಅಂದರೆ ತನಗೆ ಮೆಜಾರಿಟಿ ಬಂದರೆ ಮಾತ್ರ ಇದು ಸಾಧ್ಯ ಎಂಬಂತೆ ಜನರನ್ನು ನಂಬಿಸಿ, ಮತಗಳಿಸುವ ಕುತಂತ್ರವನ್ನು ನಡೆಸಿದೆ.

1989ರ ಪಲಂಪುರ ಗೊತ್ತುವಳಿ ಯನ್ನು ಅಂಗೀಕರಿಸಿದ ಬೆನ್ನಲ್ಲೇ, ಅಡ್ವಾಣಿಯವರ ರಥಯಾತ್ರೆ ನಡೆದು ದೇಶದೆಲ್ಲೆಡೆ ಹಿಂಸಾಚಾರ ಭುಗಿಲೆದ್ದು ರಕ್ತದೋಕುಳಿ ಹರಿಯಿತು. ಸಾಮಾನ್ಯ ಜನರು ನಿರ್ಗತಿಕರಾದರು. ನಂತರದಲ್ಲಿ ಬಾಬರಿ ಮಸೀದಿಯನ್ನು ಧ್ವಂಸ ಗೊಳಿಸಲಾಯಿತು. ಈಗ ಅಂತಹ ಒಂದು ಕಾರ್ಯ ಸೂಚಿಯ ಪುನರಾವರ್ತನೆ ಆಗುತ್ತಿದೆಯೇ ಎಂಬ ಅನುಮಾನ ಚಿಂತಕರಲ್ಲಿ ಮೂಡಿದೆ.

ಸಿ.ಬಿ.ಐ - ಅಧಿಕಾರ ದುರುಪಯೋಗ

ಕೇಂದ್ರ ತನಿಖಾ ದಳ (ಸಿ.ಬಿ.ಐ) ಕಾರ್ಯ ನಿರ್ವಹಿಸುತ್ತಿರುವುದು ಪ್ರಧಾನಿ ಕಛೇರಿಯ ಅಡಿಯಲ್ಲಿ. ಬಾಬರಿ ಮಸೀದಿ ಧ್ವಂಸ ಪ್ರಕರಣದಲ್ಲಿ ಪಾತಕೀ ಕುತಂತ್ರ ಅಡಗಿದೆಯೇ ಎಂದು ಸಿಬಿಐ ತನಿಖೆ ನಡೆಸುತ್ತಿತ್ತು. ಇದರಲ್ಲಿ ಅಡ್ವಾಣಿ, ಮುರಳಿ ಮನೋಹರ ಜೋಷಿ ಮತ್ತಿತರರು ಇದ್ದಾರೆಂದು ಬೇರೆ ಹೇಳಬೇಕಾಗಿಲ್ಲ. ಆದ್ದರಿಂದಲೇ ಅಡ್ವಾಣಿಯವರಿಗೆ ಗೃಹಖಾತೆ ನೀಡಬಾರದೆಂದು ಸಿಪಿಐ(ಎಂ) ಮತ್ತಿತರ ಪಕ್ಷಗಳು ಕೇಂದ್ರ ಸರಕಾರವನ್ನು ಒತ್ತಾಯಿಸಿದ್ದವು. ಆಶ್ಚರ್ಯ ವೆಂದರೆ ಕಳೆದವಾರ, ಸಿಬಿಐ. ಅಡ್ವಾಣಿ, ಮುರಳಿ ಮನೋಹರ ಜೋಷಿ ಮೊದಲಾದವರ ಮೇಲಿನ ಆರೋಪವನ್ನು ಕೈಬಿಟ್ಟಿದೆ. ಉಭಯ ಸಂಸತ್ತುಗಳಲ್ಲಿ ತಾವು ಆಕ್ಷೇಪ ಬಂದನಂತರವೂ ಸರಕಾರ ಅದು ಸಿಬಿಐ ಮಾಡಿದ ಕೆಲಸ ಎಂದು ಹೇಳಿ ತೆಪ್ಪಗಿದೆ. ತನ್ನ ಅಧೀನದಲ್ಲಿರುವ ಸಿಬಿಐ ತಾನು ಹೇಳಿದಂತೆ ಕೇಳದೇ ಇರುತ್ತದೆಯೇ?



ಬಾಬರಿ ಮಸೀದಿ ಧ್ವಂಸ ಪ್ರಕರಣದಲ್ಲಿ ನ್ಯಾಯ ಸಿಗಬೇಕೆಂದಾದಲ್ಲಿ ಬಿಜೆಪಿ ಮತ್ತು ಸಂಘ ಪರಿವಾರವನ್ನು ಅಧಿಕಾರದಿಂದ ದೂರವಿಡಲೇ ಬೇಕಾಗುತ್ತದೆ.

ಪಾಕಿಸ್ತಾನದೊಂದಿಗೆ ಮಾತುಕತೆ

ನೆರೆ ದೇಶವಾದ ಪಾಕಿಸ್ತಾನದೊಂದಿಗೆ ಉತ್ತಮ ಬಾಂಧವ್ಯಕ್ಕಾಗಿ ಮಾತುಕತೆ ನಡೆಸುವುದಾಗಿ ಅಂತರರಾಷ್ಟ್ರೀಯ ಪ್ರಚಾರ ಗಿಟ್ಟಿಸಿಕೊಂಡ ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಒಂದೆಡೆಯಾದರೆ, ಮಾತುಕತೆಗೆ ಅಪಾಯವಾಗಿರುವಂತಹ ಸನ್ನವೇಶವನ್ನು ಬಿಜೆಪಿ ಮತ್ತು ಸಂಘ ಪರಿವಾರ ಉಂಟು ಮಾಡುತ್ತಿದೆ. ಸಂವಿಧಾನದ 370ನೇ ಕಲಂನ್ನು ಹಿಂತೆಗೆದುಕೊಳ್ಳಬೇಕು ಎಂದು ಹೇಳುವುದರೊಂದಿಗೆ, ಪರಿಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸಲು ದಾರಿ ಮಾಡಿದೆ. ಶಾಂತಿ ಪ್ರಕ್ರಿಯೆಯನ್ನು ಮುರಿಯಲು ದೇಶವಿರೋಧಿ ಕೃತ್ಯಗಳು ಭಯೋತ್ಪಾದಕರಿಂದ ನಡೆಯುತ್ತಿದ್ದರೂ, ಚುನಾವಣೆಯಲ್ಲಿ ಭಾಗವಹಿಸಿ ಹೊಸ ಸರಕಾರವನ್ನು ಅಸ್ತಿತ್ವಕ್ಕೆ ತರುವುದರ ಮೂಲಕ ಕಾಶ್ಮೀರಿ ಜನತೆ, ಭಾರತ ದೇಶದ ಪ್ರಜಾಪ್ರಭುತ್ವದಲ್ಲಿ ತನ್ನ ವಿಶ್ವಾಸವನ್ನು ಧೃಡಪಡಿಸಿದೆ. 370ನೇ ಕಲಂನ ಕುರಿತು ಬಿಜೆಪಿ ಕಾರ್ಯಕಾರಿಣಿಯ ನಿರ್ಣಯವು, ಸ್ವಾತಂತ್ರ್ಯದ ಸಂದರ್ಭದಲ್ಲಿ ಕಾಶ್ಮೀರಿ ಜನತೆಗೆ ನೀಡಿದ ಭರವಸೆಯ ವಂಚನೆಯಾಗುತ್ತದೆ.

ಪೊಳ್ಳು ಆಶ್ವಾಸನೆ

ಬಿಜೆಪಿ ಅಧಿಕಾರಕ್ಕೆ ಬರುವ ಸಂದರ್ಭದಲ್ಲಿ ಹಸಿವೆ, ಭಯ, ಭ್ರಷ್ಟಾಚಾರವನ್ನು ಹೋಗಲಾಡಿಸುವುದಾಗಿ ಭರವಸೆನೀಡಿತ್ತು. ಅಧಿಕಾರಕ್ಕೆ ಬಂದನಂತರ ಹಸಿವೆಯಿಂದ ಸಾಯುತ್ತಿರುವವರ ಸಂಖ್ಯೆ ಜಾಸ್ತಿಯಾಗಿದೆ. ವಾಜಪೇಯಿ ಸರಕಾರ ಅನುಸರಿಸಿದ ನೀತಿಯಿಂದಾಗಿ ಸಾಲದ ಭಾದೆಯಿಂದ ರೈತರು ಸಾಯುತ್ತಿದ್ದರೆ, ಹಸಿವೆಯಿಂದ, ಪೌಷ್ಟಿಕಾಂಶದ ಕೊರತೆಯಿಂದಾಗಿ ಬಿಸಿಲಿನ ಬೇಗೆತಾಳಲಾರದೆ ಬಡಜನರು ಸಾಯುತ್ತಿದ್ದಾರೆ.

ಈಗ ಪ್ರತಿಯೊಬ್ಬ ವ್ಯಕ್ತಿಗೆ ದೊರಕುತ್ತಿರುವ ಆಹಾರ ಧಾನ್ಯ ಎರಡನೇ ಮಹಾಯುದ್ಧದ ಕಾಲದಲ್ಲಿ ದೊರಕುತ್ತಿದ್ದ ಆಹಾರ ಧಾನ್ಯಕ್ಕಿಂತಲೂ ಕಡಿಮೆ ಎಂದರೆ, ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಜನರ ಪರಿಸ್ಥಿತಿ ಹೇಗಾಗಿದೆ ಎಂದು ಅರ್ಥಮಾಡಿಕೊಳ್ಳಬಹುದು.

ಕೋಮುವಾದಿ ಅಜೆಂಡಾ

ಇಂತಹ ಬರ್ಬರ ಪರಿಸ್ಥಿತಿಯಲ್ಲಿ ಜನರ ಮನಸ್ಸನ್ನು ಬೇರೆಡೆಗೆ ತಿರುಗಿಸಿ, ಪುನಃ ಅಧಿಕಾರಕ್ಕೆ ಬರಬೇಕೆಂದರೆ ಅದಕುಳಿದಿರುವ ಒಂದು ಮಾರ್ಗ. ಕೋಮುವಾದಿ ಅಜೆಂಡಾವನ್ನು ಮುಂದಕ್ಕೆ ಒಯ್ಯುವುದು ಹಾಗೂ ಆಮೂಲಕ ಚುನಾವಣಾ ಲಾಭಗಳಿಸುವುದು, ಆದರೆ ರಾಯಪುರದಲ್ಲಿ ಈ ನಿರ್ಣಯವನ್ನು ಅಂಗೀಕರಿಸುವಾಗ ಬಿಜೆಪಿ ಒಂದು ವಿಷಯ ಮರೆತಿದೆ. ಕೆಲವರನ್ನು ಎಲ್ಲಾ ಸಮಯದಲ್ಲೂ, ಎಲ್ಲರನ್ನು ಕೆಲ ಸಮಯ ಮೂರ್ಖರನ್ನಾಗಿಸಬಹುದು. ಆದರೆ ಎಲ್ಲರನ್ನು ಎಲ್ಲಾ ಸಮಯದಲ್ಲಿ ಮೂರ್ಖರನ್ನಾಗಿರಿಸಲು ಸಾಧ್ಯವಿಲ್ಲ. ಹಣದ ರಾಶಿಗಳ ಮೇಲೆ ಲಾಭ ಮಾಡಿಕೊಳ್ಳುವ ಬಿಜೆಪಿಗೆ ತಕ್ಕ ಜಾಗವನ್ನು ತೋರಿಸಲೇಬೇಕು. ಆಗಮಾತ್ರವೇ ಭವ್ಯ ಭಾರತದ ನಿರ್ಮಾಣದತ್ತ ಹೆಜ್ಜೆ ಹಾಕಬಹುದು.

ಏಕರೂಪ ನಾಗರಿಕ ಸಂಹಿತೆ ಸಾಧುವಲ್ಲದ ಸುಪ್ರೀಂ ಕೋರ್ಟು ಸಲಹೆ

ದೇಶದ ಐಕ್ಯತೆಯನ್ನು ಉಳಿಸಲು ಇಡೀ ದೇಶದಾದ್ಯಂತ ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೊಳಿಸಬೇಕೆಂದು ಸುಪ್ರೀಂ ಕೋರ್ಟು ಸಲಹೆ ಮಾಡಿದೆ. ಇದು ದೂರದೃಷ್ಟಿಯ ಸಲಹೆ. ಆದರೆ ಕೋಮುವಾದಿ ರಾಜಕೀಯ ದೇಶದೆಲ್ಲೆಡೆ ಪಸರಿಸಿರುವಾಗ ಅಲ್ಪ ಸಂಖ್ಯಾತರು ಅಭದ್ರತೆಯಲ್ಲಿರುವಾಗ ಇದು ಸಾಧುವಲ್ಲ.

ಹಿಂದುತ್ವದ ಕಾರ್ಯಸೂಚಿಯ ಹೆಸರಿನಲ್ಲಿ ಬಹು ಸಂಖ್ಯಾತ ಕೋಮುವಾದಿಗಳು ಅಲ್ಪಸಂಖ್ಯಾತರ ಮೇಲೆ ಭಯಭೀತಿಯ ವಾತಾವರಣವನ್ನು ಹರಿಯಬಿಟ್ಟಿದೆ. ಇಂತಹ ಸನ್ನಿವೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಕುರಿತ ಚರ್ಚೆಯು ಜನರ ಐಕ್ಯತೆಯನ್ನು ಬಲಪಡಿಸುವ ಬದಲಾಗಿ ವಿರುದ್ಧ ದಿಕ್ಕಿಗೆ ಚಾಲನೆ ನೀಡುತ್ತದೆ.

ಬಹು ಸಂಖ್ಯಾತ ಸಮುದಾಯವೂ ಸೇರಿದಂತೆ, ವಿವಿಧ ಸಮುದಾಯಗಳ ಕಾನೂನುಗಳು ಮಹಿಳೆಯರಿಗೆ ತಕ್ಕ ಸ್ಥಾನಮಾನವನ್ನು ಕಲ್ಪಿಸಿಲ್ಲ. ಸಂವಿಧಾನದಲ್ಲಿ ಕಲ್ಪಿಸಲಾದ ಹಕ್ಕುಗಳು ಮಹಿಳೆಯರಿಗೆ ದೊರೆಯುತ್ತಿಲ್ಲ. ಆದುದರಿಂದ ಮೊದಲು ಸಂಬಂಧಪಟ್ಟ ಸಮುದಾಯಗಳ ಕಾನೂನುಗಳಲ್ಲಿ ತೀವ್ರ ಬದಲಾವಣೆಗಳಾಗಬೇಕಾಗಿದೆ. ಹಾಗೆ ಮಾಡದೆ, ಒಮ್ಮಿಂದೊಮ್ಮಲೆ ಏಕರೂಪ ಕಾನೂನನ್ನು ಜನರ ಮೇಲೆ ಒತ್ತಾಯ ಪೂರ್ವಕವಾಗಿ ಹೇರಿದರೆ, ಅದರಿಂದಾಗಿ ಆಗುವ ಒಳಿತಿಗಿಂತ ಹಾನಿಯೇ ಹೆಚ್ಚು.

ಇಂದಿನ ಸಂದರ್ಭದಲ್ಲಿ ವಿವಿಧ ಸಮುದಾಯಗಳಲ್ಲಿರುವ ವೈಯಕ್ತಿಕ ಕಾನೂನುಗಳಲ್ಲಿ ತೀವ್ರ ಬದಲಾವಣೆಗೆ ಒತ್ತು ನೀಡಬೇಕಾಗಿದೆ. ಈ ಕುರಿತು ವಿಳಂಬ ಸಲ್ಲದು.



ಜುಟ್ಟು ಮತ್ತು ಗಡ್ಡ

ಜುಟ್ಟು ಹೇಳಿತು ಗಡ್ಡಕ್ಕೆ
ನಾನು ಮೇಲೆ ಎಂದಿಗೂ
ನೀನು ಕೆಳಗೆ ಇಂದಿಗೂ
ಗಡ್ಡ ಹೇಳಿತು ಜುಟ್ಟಿಗೆ
[illegible]
ನಾನು ಮುಂದು ಈವಾಗಲೂ

ಜುಟ್ಟು ಹೇಳಿತು ಗಡ್ಡಕೆ
ಮೊದಲೆ ಇದ್ದ ನಾನು
ಮತ್ತೆ ಬಂದೆ ನೀನು
ಗಡ್ಡ ಹೇಳಿತು ಜುಟ್ಟಿಗೆ
ನೀನು ಮೊದಲು ಖಾಲಿಯಾಗುವೆ
ನಾನು ಹೋಗುವೆ ಕೊನೆಗೆ ಗೋರಿಗೆ

ಜುಟ್ಟು ಹೇಳಿತು ಗಡ್ಡಕ್ಕೆ
ನನಗೆ ನಿತ್ಯಮಲ್ಲಿಗೆ
ಗಡ್ಡ ಹೇಳಿತು ಜುಟ್ಟಿಗೆ
ನನಗೆ ಸೆಂಟು ಸ್ಮೆಲ್ಲಿಗೆ

ಜುಟ್ಟು ಹೇಳಿತು ಗಡ್ಡಕ್ಕೆ
ನಾನು ಕುಣಿಯಬಲ್ಲೆನು
ಗಡ್ಡ ಹೇಳಿತು ಜುಟ್ಟಿಗೆ
ನಾನು ಕುಣಿಸಬಲ್ಲೆನು

ಜುಟ್ಟು ಹೇಳಿತು ಗಡ್ಡಕ್ಕೆ
ನನ್ನಿಂದಲೇ ಜನರ ಶುದ್ಧಿ
ಗಡ್ಡ ಹೇಳಿತು ಜುಟ್ಟಿಗೆ
ನನ್ನಿಂದಲೇ ಜನರ ವೃದ್ಧಿ

ಹಿಂದೆ ಮುಂದೆ
ಮೇಲೆ ಕೆಳಗೆ
ವಾದ ವಿವಾದ
ಕೆಲವೆ ಗಳಿಗೆ
ಗಡ್ಡ ಜುಟ್ಟು
ತಯಾರಾಗಿದ್ದಿ
ನಾನು ಬಂದೆ
ಅಮೇರಿಕಾದ ಕತ್ತರಿ

- ಜಯರಾಮಯ್ಯ, ಬೆಳ್ಳಗೆರೆ

ವಿಶ್ವದೆಲ್ಲೆಡೆ ಭಾರತಕ್ಕಿದ್ದ ಮನ್ನಣೆಯೀಗ ಮಣ್ಣುಪಾಲಾಗಿದೆ. ಸಾಮ್ರಾಜ್ಯಶಾಹಿಗಳ ದುರಾಕ್ರಮಣದ ವಿರುದ್ಧ ಮೂರನೇ ಜಗತ್ತಿನ ರಾಷ್ಟ್ರಗಳ ಹಿತಾಸಕ್ತಿ ಕಾಪಾಡುತ್ತಿದ್ದ ಭಾರತದ ಅಲಿಪ್ತ ವಿದೇಶಾಂಗ ನೀತಿಯನ್ನು ಗಾಳಿಗೆ ತೂರಲಾಗಿದೆ. ಮಹಾನ್ ಭಾರತವನ್ನು ಅಮೆರಿಕಾದ ಅಡಿಯಾಳಾಗಿಸಲಾಗುತ್ತಿದೆ. ವಾಜಪೇಯಿ ಸರ್ಕಾರದ ನೀತಿಗಳ ವಿರುದ್ಧ ಸಮರ ಹೂಡದೇ ಅನ್ಯ ಮಾರ್ಗವಿಲ್ಲ ಎನ್ನುತ್ತಾರೆ ಪ್ರಕಾಶ್ ಕಾರಟ್‌ರವರು

ಅಮೆರಿಕಾ 500 ಕೋಟಿ ಡಾಲರುಗಳ ವಿದೇಶಿ ನೆರವು ನಿಧಿ ಸ್ಥಾಪಿಸಿತು. ಸಹಸ್ರಮಾನದ ಸವಾಲು ಖಾತೆ (Miuxnium Challenge Account) ಎಂಬ ಹೆಸರಿನಲ್ಲಿ ಈ ಖಾತೆಯಿಂದ ಹಣ ಬಡ ದೇಶಗಳ ನೆರವಿಗಾಗಿಯಂತೆ. ಆದರೊಂದು ತೊಡಕು. ಅಮೆರಿಕಾದ ನಿರೀಕ್ಷೆಯ ಮಟ್ಟಗಳಿಗೆ ಈ ದೇಶಗಳು ಬರಬೇಕು. ಅಂದರೆ ಮುಕ್ತ ಮಾರುಕಟ್ಟೆಯ ನೀತಿಗಳನ್ನು ಅಂಗೀಕರಿಸಬೇಕು. ಇದರ ಪ್ರಕಾರ ಖಾಸಗೀಕರಣ, ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಮುಕ್ತ ಅವಕಾಶ ಉತ್ತಮ ಆಳ್ವಿಕೆಯ ಲಕ್ಷಣ!

ಸೋವಿಯೆತ್ ಒಕ್ಕೂಟದ ಪತನದ ನಂತರ ಹೋಗಿದೆ ಎಂಬುದು ಕಾಣುತ್ತದೆ. ಬಲವಾದ ಸಾರ್ವಜನಿಕ ವಿರೋಧದಿಂದಾಗಿ ಕೊನೆಗೂ ಸೇನಾಪಡೆಗಳನ್ನು ಕಳಿಸಲೇಬೇಕೆಂಬ ಅಮೆರಿಕನ್ ಕೋರಿಕೆಯನ್ನು ಅದು ನಿರಾಕರಿಸಬೇಕಾಗಿ ಬಂದರೂ ಅಮೆರಿಕಾವನ್ನು ಸಂತುಷ್ಟಗೊಳಿಸುವ ಪ್ರಯತ್ನ ಮುಂದುವರೆದಿದೆ. ಇರಾಕಿಗೆ ಪಡೆಗಳನ್ನು ಕಳಿಸಬೇಕೆಂಬ ಎಲ್ಲಾ ದೇಶಗಳಿಗೆ ವಿಶ್ವಸಂಸ್ಥೆಯೇ ಮನವಿ ಮಾಡಿಕೊಳ್ಳುವಂತೆ ಮಾಡುವ ಪ್ರಯತ್ನ ನಡೆದಿದೆ. ಹೇಗಾದರೂ ತನ್ನ ಪಡೆಗಳನ್ನು ಹೊರಗೆ ತರಬೇಕು ಎಂದು ಹತಾಶವಾಗಿರುವ ಅಮೆರಿಕಾ ಸ್ವಲ್ಪ ಪ್ರಮಾಣದಲ್ಲಿ ವಿಶ್ವಸಂಸ್ಥೆ ಇರಾಕಿನಲ್ಲಿ

ಆಕ್ರಮಣಕೋರ ಅಮೆರಿಕಾಕ್ಕೆ ಏಕೆ ಈ ಡೊಗ್ಗು ಸಲಾಮು ?

2001ರ ಸೆಪ್ಟೆಂಬರ್ 11 ರ ನಂತರ ಅಮೆರಿಕನ್ ಸಾಮ್ರಾಜ್ಯಶಾಹಿ ಒಂದು ಹೊಸ ಆಕ್ರಮಣಕಾರಿ ಘಟ್ಟವನ್ನು ಪ್ರವೇಶಿಸಿದೆ. ಭಯೋತ್ಪಾದನೆಯ ವಿರುದ್ಧ ಯುದ್ಧದ ಹೆಸರಲ್ಲಿ ಅದು ತನ್ನ ಯಜಮಾನಿಕೆಯನ್ನು ವಿಸ್ತರಿಸಹೊರಟಿದೆ. ಅಫಘಾನಿಸ್ತಾನದ ಮೇಲೆ ಯುದ್ಧದ ನಂತರ ಇರಾಕ್ ಮೇಲೆ ಯುದ್ಧ ನಡೆಯಿತು. ಬುಶ್‌ರವರ ಪ್ರಕಾರ ಇದು ಅಂತ್ಯವಿಲ್ಲದ ಯುದ್ಧ - ಭಯೋತ್ಪಾದನೆಯ ಸುಳಿವೂ ಇಲ್ಲದಂತಾಗುವವರೆಗೆ ನಡೆವ ಯುದ್ಧದಂತೆ. ಇದು ತನ್ನ ಸಾಮ್ರಾಜ್ಯಶಾಹಿ ಹಿತಾಸಕ್ತಿಗಳನ್ನು ಸಾಧಿಸಲು, ತನೆಲ್ಲಾ ಮಿತ್ರರನ್ನು ಅಣಿನೆರೆಸಲು ಅದಕ್ಕೊಂದು ಭಾರೀ ಅನುಕೂಲಕರವಾದ ನೆಪ.

ಸೆಪ್ಟೆಂಬರ್ 2001ರ ನಂತರ ಅದರ ಪ್ರಭಾವ, ನೆಲೆ ಹೊಸ ಪ್ರದೇಶಗಳಿಗೆ ಕಂಡಿವೆ. ಅಫಘಾನಿಸ್ತಾನವನ್ನು ಬಗ್ಗಿಸಿದ ನಂತರ ಅದು ಮಧ್ಯ ಏಶ್ಯಾ ಗಣತಂತ್ರಗಳಾದ ಕೆರ್ಗಿಯೋಸ್ತಾನ್, ಉಜ್ಬೇಕಿಸ್ತಾನ ಮತ್ತು ತಾಜಿಕ್‌ಸ್ತಾನ್ ಪ್ರವೇಶಿಸಿದೆ. ಮಧ್ಯ ಏಶ್ಯಾ, ಕ್ಯಾಸ್ಪಿಯನ್ ಸಮುದ್ರದ ತೈಲ ಮತ್ತು ನೈಸರ್ಗಿಕ ಅನಿಲ



ನಿಕ್ಷೇಪಗಳೀಗ ಅದರ ಹಿಡಿತಕ್ಕೆ ಬಂದಿವೆ.

ಆದರೆ ಸಾಮ್ರಾಜ್ಯಶಾಹಿಯ ಹೊಸ ಯುದ್ಧಕೋರ ಸ್ವರೂಪದ ಪ್ರತೀಕವಾಗಿರುವಂತದ್ದೂ ಇರಾಕ್‌ನ ಮೇಲೆ ಯುದ್ಧ ಮತ್ತು ಆ ದೇಶದ ಅತಿಕ್ರಮಣ. ವಿಶ್ವದಲ್ಲಿ ಎರಡನೇ ಅತಿದೊಡ್ಡ ತೈಲ ನಿಕ್ಷೇಪಗಳಿರುವ ಒಂದು ಸ್ವತಂತ್ರ ಅರಬ್ ಪ್ರಭುತ್ವವನ್ನೀಗ ಅದು ಆಕ್ರಮಿಸಿಕೊಂಡಿದೆ. ವಿಶ್ವಾದ್ಯಂತ ಪ್ರತಿಭಟನೆಗಳು ಬಂದರೂ, ವಿಶ್ವಸಂಸ್ಥೆಯ ಸನ್ನದಿಗೆ ವಿರುದ್ಧವಾಗಿದ್ದರೂ ಈ ಆಕ್ರಮಣವನ್ನು ನಡೆಸಲಾಯಿತು. ಭದ್ರತಾ ಮಂಡಳಿಯ ಬಹುಪಾಲು ಸದಸ್ಯರ ಬೆಂಬಲವೂ ಅದಕ್ಕೆ ಸಿಗಲಿಲ್ಲ. ಈ ಮಿಲಿಟರಿ ಕಾರ್ಯಾಚರಣೆಗೆ ಕೊಟ್ಟ ಪ್ರಮುಖ ಕಾರಣ ಸದ್ದಾಂ ಆಡಳಿತ ಸಾಮೂಹಿಕ ವಿನಾಶಕ ಶಸ್ತ್ರಾಸ್ತ್ರಗಳನ್ನು ಹೊಂದಿ ವಿಶ್ವಕ್ಕೆ ಬೆದರಿಕೆಯೊಡ್ಡಿದೆ ಎಂಬುದು. ಆದರೆ ಯುದ್ಧ ಮುಗಿದ ಮೂರು ತಿಂಗಳ ನಂತರವೂ ಅಮೇರಿಕನ್ನರಿಗಾಗಲೀ, ಬ್ರಿಟಿಶರಿಗಾಗಲೀ ಒಂದೇ ಒಂದು ಇಂತಹ ಶಸ್ತ್ರಾಸ್ತ್ರ ಸಿಕ್ಕಿಲ್ಲ, ಅಂತಹ ಶಸ್ತ್ರಾಸ್ತ್ರಗಳಿದ್ದವೆಂದು ಪುರಾವೆ ಕೂಡ ಸಿಗಲಿಲ್ಲ.

ವಿಶ್ವಶಾಂತಿಗೆ ಬೆದರಿಕೆ

ಅಂತರ್‍ರಾಷ್ಟ್ರೀಯ ನೀತಿನಿಯಮಗಳ ಉಲ್ಲಂಘನೆ, ವಿಶ್ವಸಂಸ್ಥೆಯ ಬಗ್ಗೆ ತಿರಸ್ಕಾರ, ವಾಸ್ತವ ಸಂಗತಿಗಳನ್ನು ತಟಸ್ಥವಾಗಿ ಕಾಣುವುದು ಇವೆಲ್ಲಾ ಅಮೆರಿಕನ್ ಆಳುವವಲಯಗಳಲ್ಲಿ ಹೊಸ ಲಕ್ಷಣಗಳೇನಲ್ಲ. ಆದರೆ ಬುಷ್ ಆಡಳಿತದಲ್ಲಿ ಇವು ಇನ್ನಷ್ಟು ಏರಿದೆ. ಅಧ್ಯಕ್ಷ ಬುಷ್‌ರ ಅಡಿಯಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನ ವಿಶ್ವಶಾಂತಿಗೆ ಒಂದು ಗಂಭೀರ ಬೆದರಿಕೆ ಎಲ್ಲಾ ದೇಶಗಳ ಸ್ವಾತಂತ್ರ್ಯ, ಸಾರ್ವಭೌಮತೆಗಳಿಗೆ ಒಂದು ದೊಡ್ಡ ಅಪಾಯ. ಭಯೋತ್ಪಾದನೆಯ ವಿರುದ್ಧ ಹೋರಾಡುತ್ತೇವೆ, ತಾನು ಗುರಿಯಿಟ್ಟ ದೇಶಗಳ ಜನರಿಗೆ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಕೊಡಮಾಡುತ್ತೇನೆ ಎಂಬುದೆಲ್ಲಾ ಗೋಸುಂಬೆತನದ ಮಾತುಗಳು. ಈ ಮಾತುಗಳ ಮರೆಯಲ್ಲಿ ಇರುವುದು ಆರ್ಥಿಕ ಮತ್ತು ಮಿಲಿಟರಿ ಶಕ್ತಿಯ ನಗ್ನ ಬಳಕೆ, ಅಮೆರಿಕಾವನ್ನು ಎದುರಿಸಿ ನಿಲ್ಲುವ ದೇಶಗಳ ಜನರನ್ನು ಮೊಣಕಾಲೂರುವಂತೆ ಮಾಡುವ ಪ್ರಯತ್ನ.

ರಾಜತಾಂತ್ರಿಕ ಒತ್ತಡ ಹೇರುವಂತೆ ಆರ್ಥಿಕ ನಿರ್ಬಂಧನೆಗಳನ್ನು ಕೂಡಾ ಅಮೆರಿಕಾ ಯಾವುದೇ ಎಗ್ಗಿಲ್ಲದೆ ಬಳಸುತ್ತಿದೆ. ಕ್ಯೂಬಾ ಇಂತಹ ನಿರ್ಬಂಧವನ್ನು 40 ವರ್ಷಗಳಿಂದ ಎದುರಿಸುತ್ತಾ ಇದೆ. ಇರಾಕ್‌ನಲ್ಲಿ 11 ವರ್ಷಗಳ ನಿರ್ಬಂಧ 5 ಲಕ್ಷ ಮಕ್ಕಳ ಸಾವಿಗೆ ಕಾರಣವಾಗಿದೆ. ಈಗ ಉತ್ತರ ಕೋರಿಯಾದ ಮೇಲೆ ನಿರ್ಬಂಧಗಳ ಬೆದರಿಕೆ ಹಾಕಲಾಗುತ್ತಿದೆ.

'ಉತ್ತಮ ಆಳ್ವಿಕೆ ಯೆಂದರೇನು?

ಈ ನಿರ್ಬಂಧಗಳಿಗೆ ಒಳಗಾಗದ ದೇಶಗಳಿಗೆ ಅಮೆರಿಕಾದ ಉದಾರ ಪೋಷಣೆಯಡಿ ಐ.ಎಂ.ಎಫ್. ವಿಶ್ವಬ್ಯಾಂಕ್ ಏರ್ಪಡಿಸಿದ ಕ್ಲಬ್ಬನ್ನು ಸೇರುವ ಅವಕಾಶವಂತೂ ಇದೆ! ಕಳೆದ ವರ್ಷ

ಅಮೆರಿಕಾ ವಿಶ್ವದಲ್ಲಿ ಪ್ರಬಲ ಸ್ಥಾನ ಪಡೆದಿದ್ದರೂ ತನ್ನ ಮಿಲಿಟರಿ ಖರ್ಚನ್ನು ಅದು ಇಳಿಸಿಲ್ಲ. ಸಾಮೂಹಿಕ ವಿನಾಶದ ಹೊಸ ಅಸ್ತ್ರಗಳ ನಿರ್ಮಾಣವನ್ನು ನಿಲ್ಲಿಸಿಲ್ಲ. ಬೇರೆ ಯಾವ ದೇಶವೂ ಅಮೆರಿಕಾದೊಂದಿಗೆ ಮಿಲಿಟರಿಯಲ್ಲಿ ತನ್ನ ಸಮನಾಗಲು ಬಿಡುವುದಿಲ್ಲ ಎಂಬುದು ಬುಶ್ ಮುಂದಿರುವ ರಾಷ್ಟ್ರೀಯ ಭದ್ರತಾ ಕಾರ್ಯತಂತ್ರಗಳಲ್ಲಿ ಸೇರಿದೆ.

ಭಾರತದ ಬಾಗಿಲಿಗೇ ಬಂದಿದೆ

ವಿಶ್ವದ ಮೇಲೆಲ್ಲಾ ಸವಾರಿ ಮಾಡುವ ಆಕ್ರಮಕ ಹುಡುಕಾಟ ಅಮೆರಿಕನ್ ಸಾಮ್ರಾಜ್ಯಶಾಹಿಯ ಬೆದರಿಕೆಯನ್ನು ಭಾರತದ ಮನೆಬಾಗಿಲಿಗೇ ತಂದಿಟ್ಟಿದೆ. ಅಫಘಾನಿಸ್ತಾನದ ಯುದ್ಧದೊಂದಿಗೆ ಅಮೆರಿಕಾ ಅಲ್ಲಿಯೂ, ಪಾಕಿಸ್ತಾನದಲ್ಲಿಯೂ ಮಿಲಿಟರಿ ನೆಲೆಗಳನ್ನು ಸ್ಥಾಪಿಸಿತು. ಹೇಳಿದಂತೆ ಕೇಳಲು ಸಿದ್ಧವಿರುವ ಬಿಜೆಪಿ ಅಧಿಕಾರದಲ್ಲಿರುವುದರಿಂದ ಅಮೆರಿಕಾ ಭಾರತವನ್ನು ತನ್ನ ಸಾಮೂಹಿಕ ಯೋಜನೆಗಳಲ್ಲಿ ಒಂದು ಕಿರಿಯ ಜೋಡಿದಾರನಾಗಿ ಮಾಡುವತ್ತ ಸಾಗುತ್ತಿದೆ. ಕಳೆದೆರಡು ವರ್ಷಗಳಲ್ಲಿ ದಕ್ಷಿಣ ಏಷ್ಯಾ ಪ್ರದೇಶದಲ್ಲಿ ಅಮೆರಿಕನ್ ಪ್ರಭಾವ ಹಲವು ಪಟ್ಟು ಹೆಚ್ಚಿದೆ. ವಾಜಪೇಯಿ ಸರಕಾರ ಕಳೆದ ಐದು ವರ್ಷಗಳಲ್ಲಿ ಭಾರತೀಯ ಮತ್ತು ಅಮೆರಿಕನ್ ಸೇನಾಪಡೆಗಳ ನಡುವೆ ಒಂದು ಸಾಮರಿಕ ಮಿಲಿಟರಿ ಶಾಮೀಲನ್ನು ಸ್ಥಾಪಿಸುವತ್ತ ಪ್ರಮುಖ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಈ ಮಿಲಿಟರಿ ಸಹಕಾರದ ಹಿಂದೆ ದಕ್ಷಿಣ ಏಶ್ಯಾದ 'ಇಸ್ರೇಲ್' ಆಗುವ ಬಿಜೆಪಿಯ ಮಹದೇಚ್ಛೆ ಇದೆ. ಪ್ರಧಾನಮಂತ್ರಿಗಳ ಪ್ರಮುಖ ಕಾರ್ಯದರ್ಶಿ ಬ್ರಿಜೇಶ್ ಪಟೇಲ್ ವಾಶಿಂಗ್‌ಟನ್‌ನಲ್ಲಿ ಈ ಗುರಿಗೆ ದನಿ ನೀಡಿದರು. ಭಾರತ, ಇಸ್ರೇಲ್, ಅಮೆರಿಕಾ ನಡುವೆ ಮೂರು ದಾರಿಯ ಮೈತ್ರಿಗೆ ಅವರು ಕರೆ ನೀಡಿದರು. ಇಸ್ರೇಲಿ ಪ್ರಧಾನ ಮಂತ್ರಿ ಅರಿಯಲ್ ಶರೋನ್‌ರನ್ನು ಭಾರತ ಭೇಟಿಗೆ ಆಹ್ವಾನಿಸಲಾಗಿದೆ. ಪ್ಯಾಲೆಸ್ಟೇನೀ ಜನತೆಯ ಕೊಲೆಗಡುಕನೆನಿಸಿದ ಶರೋನ್ ಬಿಜೆಪಿ ನೇತೃತ್ವದ ಸರಕಾರದ ಆದರಣೀಯ ಅವಧಿಯಾಗಲಿದ್ದಾರೆ.!

ಸಾಮ್ರಾಜ್ಯ ಶಾಹಿ ಪರ ಬಿಜೆಪಿ

ಬಿಜೆಪಿ ನೇತೃತ್ವದ ಸರಕಾರ ಸ್ವಾತಂತ್ರ್ಯಾನಂತರದ ಅತ್ಯಂತ ಸಾಮ್ರಾಜ್ಯಶಾಹಿ ಪರವಾದ ಸರಕಾರ. 1950ರ ದಶಕದಿಂದ ಭಾರತ ಅಂಗೀಕರಿಸಿದ್ದ ಅಲಿಪ್ತ ವಿದೇಶಾಂಗ ನೀತಿಯನ್ನು ಅದು ಕೈಬಿಟ್ಟಿದೆ. ಇರಾಕಿಗೆ ಭಾರತದ ಸೇನಾಪಡೆಗಳನ್ನು ಕಳಿಸಲು ಅದು ಸಿದ್ಧವಿದ್ದದ್ದನ್ನು ನೋಡಿದರೆ ಅಮೆರಿಕಾದ ವಿಶ್ವ ಹುನ್ನಾರದೊಡನೆ ಭಾರತವನ್ನು ಕಟ್ಟಿಬಿಡುವಲ್ಲಿ ಅದು ಎಷ್ಟರ ಮಟ್ಟಿಗೆ

ಪಾತ್ರವಹಿಸುವುದನ್ನು ಒಪ್ಪಿಕೊಳ್ಳಲೂ ಬಹುದು. ಆದರೆ ಕೇಂದ್ರ ಪ್ರಶ್ನೆ ಮಾತ್ರ ಹಾಗೆಯೇ ಉಳಿಯುತ್ತದೆ. ಅಂದರೆ ಇರಾಕ್ ಅಮೆರಿಕಾದ ವಶದಲ್ಲಿಯೇ ಇರುತ್ತದೋ ಇಲ್ಲವೋ ಎಂಬ ಪ್ರಶ್ನೆ. ಇರಾಕ್ ಅಮೆರಿಕಾದ ವಶದಲ್ಲಿ ಇರುವ ವರೆಗೆ ಅಲ್ಲಿಗೆ ಬಹುದೇಶೀಯ ಪಡೆಗಳನ್ನು ಕಳಿಸುವುದನ್ನು ಬೆಂಬಲಿಸಲು ಸಾಧ್ಯವಿಲ್ಲ. ಅಮೆರಿಕಾ ಬೀಗಿರುವ ಮಧ್ಯಂತರ ಮಂಡಳಿ ಈ ಆಕ್ರಮಣದ ವಿಸ್ತರಣೆಯಲ್ಲದೆ ಬೇರೇನಲ್ಲ. ತಾವು ಗೆರಿಲ್ಲಾ ಮಾದರಿ ಪ್ರತಿರೋಧ ಎದುರಿಸುತ್ತಿರುವುದಾಗಿ ಅಮೆರಿಕನ್ ಸೇನಾಧಿಪತಿ ಒಪ್ಪಿಕೊಂಡಿದ್ದಾರೆ. ಇರಾಕಿನ ಜನತೆಯನ್ನು ದಮನ ಮಾಡಲು ಪಡೆಗಳನ್ನು ಕಳಿಸುವ ಪ್ರಶ್ನೆಯೇ ಇಲ್ಲ. ಇಂತಹ ಪ್ರಯತ್ನಗಳ ವಿರುದ್ಧ ಜನಗಳನ್ನು ಅಣಿನೆರೆಸುವುದನ್ನು ಪ್ರಜಾಪ್ರಭುತ್ವವಾದಿ ಮತ್ತು ದೇಶಪ್ರೇಮಿ ಶಕ್ತಿಗಳು ಮುಂದುವರೆಸಬೇಕು.

ಅಮೇರಿಕನ್ ಸಾಮ್ರಾಜ್ಯಶಾಹಿಯ ಮೇಲೆ ಬಿಜೆಪಿಯ ಪ್ರೀತಿಯ ಹಿಂದೆ ದೊಡ್ಡ ಇತಿಹಾಸವೇ ಇದೆ. ಮುಕ್ತ ಮಾರುಕಟ್ಟೆ ಅಧಿಕಾರವನ್ನು ಪ್ರತಿಪಾದಿಸುವ ಮತ್ತು ಸಾರ್ವಜನಿಕ ವಲಯದ ಕಡು ವೈರಿಯಾದ ಬಿಜೆಪಿ ನೇತೃತ್ವದ ಸರಕಾರ ಬುಶ್ ಆಡಳಿತದ ಬಲಪಂಥೀಯ ಪರಿಹಾರಗಳನ್ನು ಸಂತೋಷದಿಂದ ಅನುಸರಿಸುತ್ತಿದೆ. ಎನ್ರೋನ್‌ನ ಧಬೋಲ್ ಸ್ಥಾವರಕ್ಕೆ ಅನುಮತಿ ನೀಡಿದ್ದು 1996ರಲ್ಲಿದ್ದ ಅಲ್ಪ ಕಾಲೀನ ವಾಜಪೇಯಿ ಸರಕಾರವೇ ಎಂಬುದನ್ನು ಮರೆಯಲು ಸಾಧ್ಯವಿಲ್ಲ. ಜಸ್ವಂತ್ ಸಿಂಗ್ ವಿದೇಶಾಂಗ ಮಂತ್ರಿಯಾಗಿ ಅಲಿಪ್ತ ವಿದೇಶಾಂಗ ನೀತಿಯನ್ನು ಅಂತ್ಯಗೊಳಿಸಲು



ಕೆಲಸ ಮಾಡಿದರೆ, ಹೂಡಿಕೆ ಹಿಂಪಡಿತ ಮಂತ್ರಿಯಾಗಿ ಅರುಣ್ ಶೌರಿ ಸಾರ್ವಜನಿಕ ವಲಯವನ್ನು ಕಳಚಿಹಾಕುವ ಕೆಲಸ ಮಾಡುತ್ತಿದ್ದಾರೆ. ಇವೆರಡೂ ಅಮೆರಿಕಾದೊಡನೆ ಇರುವ ತೀವ್ರ ಹೊಗಳುಭಟ್ಟಂಗಿ ಸಂಬಂಧಗಳ ಎರಡು ಮುಖಗಳು.

ಪುಟ 9



ಉಡುಪಿಯಲ್ಲಿ ತ್ರಿಶೂಲ ದೀಕ್ಷೆ ಕರ್ನಾಟಕಕ್ಕೆ ಕೇಡು

ಪ್ರಭಾಕರ ನೇರಳಕಟ್ಟೆ

ಉಡುಪಿಯಲ್ಲಿ ಶಿರೂರ ಮಠದಲ್ಲಿ ತ್ರಿಶೂಲ ಹಂಚಿಕೆ ನಡೆದಿದೆ. ಬ್ರಿಟಿಷರಿಗೆ ಶರಣಾಗಿ ತಪ್ಪೊಪ್ಪಿಗೆ ಬರೆದುಕೊಟ್ಟ ರಣಹೇಡಿ ಸಾವರ್ಕರರನ್ನು 'ರಾಷ್ಟ್ರಪಿತ'ನೆಂದು ಘೋಷಿಸಿಯಾಗಿದೆ. ಈ ಎಲ್ಲಾ ಕೇಡುಗಳನ್ನು ಕಣ್ಣುಮುಚ್ಚಿ ಸರ್ಕಾರವೇಕೆ ನೋಡುತ್ತಿದೆ?

ವಿನಾಯಕ ದಾಮೋದರ ಸಾವರ್ಕರ್ ...ವಾದ ರಾಷ್ಟ್ರಪಿತನಂತೆ ಹಿಂದುಗಳ ಹತ್ಯೆಗೆ ...ರಣರಾದ ಗಾಂಧೀಜಿಯನ್ನು ಕೊಂದದ್ದು ...ಷ್ಟ್ರದ್ರೋಹವೇ ಅಲ್ಲವಂತೆ!! ಹೀಗೆಲ್ಲಾ ತನ್ನ ...ಲುಬಿಲ್ಲದ ನಾಲಿಗೆಯನ್ನು ಎಗ್ಗಿಲ್ಲದಂತೆಯೇ ...ಸಿದ್ದು ಎಸ್.ಕೆ.ರಾಯ್ ಎಂಬಾತ. ...ಘಪರಿವಾರದ ಒಂದು ಬಣವಾದ ಹಿಂದೂ ...ಹಾಸಭಾವು ಇತ್ತೀಚೆಗೆ ಉಡುಪಿಯಲ್ಲಿ ಹಿಂದೂ ...ಷ್ಟ್ರ ಮಹಾದೀಕ್ಷಾ ಕಾರ್ಯಕ್ರಮವನ್ನು ...ಕೊಂಡಿತ್ತು. ಹಿಂದೂ ಧರ್ಮದ ಸಾಮಾನ್ಯ ...ಪ್ರದಾಯದಂತೆ ಕೆಲವೊಂದು ದೀಕ್ಷೆಗಳಿವೆ ನಿಜ. ...ದೀಕ್ಷೆ, ಸನ್ಯಾಸ ದೀಕ್ಷೆ ಇತ್ಯಾದಿಗಳು. ಆದರೆ ...ಹಿಂದೂ ರಾಷ್ಟ್ರ ದೀಕ್ಷೆ, ಇದರ ಜೊತೆಗೆ ...ಶೂಲ ದೀಕ್ಷೆ. ಇವೆಲ್ಲಾ ಎಲ್ಲೂ ಇಲ್ಲದ, ...ಂದೆಯೂ ಎಲ್ಲೂ ಸಲ್ಲದ ಸಂಘಪರಿವಾರದ ...ಸ ಅಸ್ತ್ರಗಳು. ಸಂಘ ಪರಿವಾರ ಬಳಸುತ್ತಿರುವ ...ಆಯುಧಗಳಿಗೆ ಅದೇನಂತಹ ಘನಂದಾರೀ ...ವಿದೆ. ಉಡುಪಿಯಲ್ಲಿ ತ್ರಿಶೂಲ ದೀಕ್ಷೆ ನೀಡಿದ ... 'ಹಿಂದೂಗಳ ಮೇಲಾಗುವ ಆಕ್ರಮಣದ ...ದ್ಧ ತ್ರಿಶೂಲ ಬಳಕೆಗೆ ಕರೆ ನೀಡಲಾಗಿದೆ. ...ಲದಿಂದಲೇ ಧರ್ಮ ಕಾಯುತ್ತೇವೆ ಎನ್ನುವ ...ಘಪರಿವಾರದ ವಾನರ ಸೈನ್ಯಕ್ಕೆ ಗೊತ್ತಿಲ್ಲದಿರುವ ..., ಹಿಂಸೆಯಿಂದ- ಆಯುಧಗಳ ಬಳಕೆಯಿಂದ ... ಧರ್ಮವನ್ನು ರಕ್ಷಿಸಲಿಕ್ಕಾಗದು ಎಂಬುದು. ...ಂಥ ಶಕ್ತಿಗಳ ಪರಸ್ಪರ ಬಡಿದಾಟದಿಂದ ...ವುದು ರಕ್ತಪಾತ, ಎರಡೂ ಕಡೆಯ ...ತಿಯ, ಒಟ್ಟಾರೆ ದೇಶದ ಸಂಸ್ಕೃತಿಯ ನಾಶ.

...ರ್ಮ ರಕ್ಷಣೆಯ ಸೋಗು

...ಉಡುಪಿಯ ಶಿರೂರು ಮಠದಲ್ಲಿ ಸುಮಾರು ...ಕ್ಕೂ ಹೆಚ್ಚಿನ ಮಂದಿಗೆ ತ್ರಿಶೂಲ ದೀಕ್ಷೆ ನೀಡಿ ...ೂ ಧರ್ಮದ ರಕ್ಷಣೆಗೆ ಬದ್ಧರಾಗುವಂತೆ ಕರೆ ...ಲಾಗಿದೆ. ಈ ಎಲ್ಲಾ ಮಂದಿ ...ಕೊಳ್ಳಬೇಕಾದ ಸತ್ಯವೊಂದಿದೆ. ಹಿಂದೂ ...ದೊಂದು ಧರ್ಮವಲ್ಲ, ಅದೊಂದು ಜೀವನ .... ಈ ಜೀವನ ಪದ್ಧತಿಯಂತೆ ಬದುಕಿದ ಶ್ರೀ ...ಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ ...ತಾದವರನ್ನು ತಿಳಿದುಕೊಳ್ಳುವ ಬದಲು, ...ಕಾನಂದ ಮತ್ತಿತರ ಮಹಾನುಭಾವರ ಭಾಷಣದ, ಲೇಖನದ ಕೆಲವೊಂದಿಷ್ಟು ಭಾಗಗಳನ್ನು ಕತ್ತರಿಸಿ ಬಿಸಾಡಿ ತಮಗೆ ಬೇಕಾದ್ದನ್ನಷ್ಟೇ ಬಳಸಿಕೊಳ್ಳುವ ಮೂಲಕ ವಿವೇಕಾನಂದರಂತವರನ್ನೂ ತಮ್ಮ ಚೆಡ್ಡಿಯೊಳಗೆ ತೂರಿಸಿಕೊಳ್ಳುವ ಆರೆಸ್ಸೆಸ್ಸಿನ ಕೆ.ಸಿ.ಸುದರ್ಶನ್, ವಿ.ಎಚ್.ಪಿಯ ಪ್ರವೀಣ್ ತೊಗಾಡಿಯಾ ಅಥವಾ ಹಿಂದೂ ಮಹಾಸಭಾದ ಎಸ್.ಕೆ.ರಾಯ್, ಅವನ ಮಾತಿಗೆ ಪುಂಗಿ ಊದುವ ಉಡುಪಿಯ ಪೇಜಾವರ ಸ್ವಾಮಿ, ಲಕ್ಷ್ಮೀವರತೀರ್ಥ, ಪುತ್ತಿಗೆ ಸುಗುಣೇಂದ್ರ ತೀರ್ಥ ಮುಂತಾದವರನ್ನು ತಿಳಿದುಕೊಳ್ಳುವ, ಅವರು ಕರೆಕೊಟ್ಟ ಕೂಡಲೇ ತ್ರಿಶೂಲ ಹಿಡಿದು ಬಡಿದಾಡುವ, ಅವರು ಊದುವ ಪುಂಗಿ ನಾದಕ್ಕೆ ತಲೆಯಲ್ಲಾಡಿಸುವ ನಾಚಿಕೆಗೆಟ್ಟ ಸ್ಥಿತಿಗೆ ಇಳಿಯಬಾರದು.

ರಾಷ್ಟ್ರ ಪಿತ ಯಾರು?

ಎಸ್.ಕೆ.ರಾಯ್ ಶ್ರೀ ಕೃಷ್ಣ ಮಠದ ರಾಜಾಂಗಣದಲ್ಲಿ ಮಾಡಿದ ಭಾಷಣದಲ್ಲಿ ವಿ.ಡಿ.ಸಾವರ್ಕರರೇ ನಿಜವಾದ ರಾಷ್ಟ್ರಪಿತ ಎಂದಿದ್ದಾನೆ. ಎಸ್.ಕೆ. ರಾಯ್ ಹೀಗಂದ, ಲಕ್ಷ್ಮೀವರ ತೀರ್ಥ ಆ ಮಾತಿಗೆ ತಲೆದೂಗಿದ ಎಂದ ಮಾತ್ರಕ್ಕೆ ಎಲ್ಲರೂ ಕೂಡ ಸಾವರ್ಕರನನ್ನು ಒಪ್ಪಿಕೊಳ್ಳಬೇಕಾಗಿಲ್ಲ. ಸಾವರ್ಕರ್ ಎಂತಹ ಹೇಡಿ ಎಂಬುದಕ್ಕೆ, ಆತ ಇಂಗ್ಲಿಷ್ ಅಧಿಕಾರಿಗಳಿಗೆ ಬರೆದುಕೊಂಡಂತಹ ಮಾನಗೇಡಿ ಮನವಿ ಪತ್ರಗಳು ಸಾಕ್ಷಿಯಾಗಿ, ಇಂದಿಗೂ ಭಾರತ ಸರ್ಕಾರದ ವಶದಲ್ಲಿದೆ. ಅವನ್ನು ನಾಶಪಡಿಸುವ ಸಂಘಪರಿವಾರ ಬೆಂಬಲಿತ ರಾಜಕಾರಣಿಗಳ ಪ್ರಯತ್ನವೇನೂ ಈ ತನಕ ಯಶಸ್ವಿಯಾಗಿಲ್ಲ. ಸಾವರ್ಕರನನ್ನು ಬ್ರಿಟೀಷರು ಜೈಲಿನಲ್ಲಿಟ್ಟರು ಎಂಬೊಂದೇ ಕಾರಣಕ್ಕೆ ಸಾವರ್ಕರ್ ರಾಷ್ಟ್ರಪಿತ ಆಗಲಾರ. ಈ ದೇಶದ ಸ್ವಾತಂತ್ರ್ಯಕ್ಕಾಗಿ ಸ್ವಾರ್ಥ ಸಾವರ್ಕರ್ ಪ್ರಯತ್ನಪಡಲಿಲ್ಲ. ಬದಲಾಗಿ ಈತ ಬ್ರಿಟೀಷರೊಂದಿಗೆ ಕೈಜೋಡಿಸಿ ಸ್ವಾತಂತ್ರ್ಯಾಂದೋಲನಕ್ಕೆ ಹಿಮ್ಮುಖವಾಗಿ ಚಲಿಸಿದ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಿದ್ದ ಅಮಾಯಕ ಭಾರತೀಯರನ್ನು ಧರ್ಮದ ಹೆಸರಿನಲ್ಲಿ ಒಟ್ಟುಗೂಡಿಸಿ, ಸಂಗ್ರಾಮದ ಹಾದಿ ತಪ್ಪಿಸುವ ಮೂಲಕ ಬ್ರಿಟೀಷರ ಬಡಿದಾಳುವ ನೀತಿಗೆ ಪೂರಕವಾಗಿ ಕೆಲಸ ಮಾಡಿದ. ಇಂತವನನ್ನು ಸ್ವಾತಂತ್ರ್ಯವೀರ ಎಂದು ಒಪ್ಪಿಕೊಳ್ಳುವುದಾದರೆ ಕೇವಲ ಎಸ್.ಕೆ.ರಾಯ್ ಒಪ್ಪಿಕೊಳ್ಳಲಿ. ರಾಷ್ಟ್ರಪಿತನೆಂದೇ ಅಲ್ಲ, ಬೇಕಿದ್ದರೆ ಖುದ್ದು ತನ್ನ ಪಿತನೆಂದು ಒಪ್ಪಿಕೊಳ್ಳಲಿ. ಸಾವರ್ಕರನಿಗೆ ರಾಷ್ಟ್ರಪಿತನ ಗೌರವ ಕೊಡಲಿಕ್ಕೆ ಎಸ್.ಕೆ.ರಾಯ್ ಏನು ಭಾರತೀಯರ ರಾಷ್ಟ್ರೀಯತೆಯ ಗುತ್ತಿಗೆದಾರನಲ್ಲ. ಹಿಂದೂಗಳ ಗುತ್ತಿಗೆದಾರನೂ ಅಲ್ಲ.

ವಿ.ಡಿ.ಸಾವರ್ಕರ್ ಎಂಬ ಪರಮ ಹೇಡಿಯನ್ನು ಬಂಧಿಸಿದ ಆಂಗ್ಲರ ಸರ್ಕಾರ 1911 ರ ಜೂನ್ ತಿಂಗಳಲ್ಲಿ ಆತನನ್ನು ಅಂಡಮಾನ್ ಜೈಲಿಗೆ ರವಾನಿಸಿತು. ಈ ರವಾನೆಯ ನಂತರ ಪದೇ ಪದೇ ಬ್ರಿಟೀಷ್ ಸರ್ಕಾರಕ್ಕೆ ಆತ ಲಜ್ಜೆಗೇಡಿತನದ



ಮನವಿಗಳನ್ನು ಅರ್ಪಿಸುತ್ತಾ ಬಂದಿದ್ದಾನೆ. 1913 ರ ನವೆಂಬರ್ 14 ರಂದು ಆತ ಅರ್ಪಿಸಿದ ಒಂದು ಮನವಿಯಲ್ಲಿ ಇಂಗ್ಲೀಷ್ ಅಧಿಕಾರಿಗಳೊಡನೆ ಹೆಂಡ ಕುಡಿದ ಕೋತಿಯಂತೆ ವರ್ತಿಸಿರುವುದು ಅತೀ ಸ್ಪಷ್ಟವಾಗಿದೆ. "...... ಸರ್ಕಾರ ಔದಾರ್ಯದಿಂದ ನನ್ನನ್ನು ಬಿಡುಗಡೆ ಮಾಡಿದ ಪಕ್ಷದಲ್ಲಿ ನಾನು ನನ್ನ ಮಟ್ಟಿಗೆ ಸಂವಿಧಾನಾತ್ಮಕ (ಬ್ರಿಟೀಷ್ ಸಂವಿಧಾನ) ಪ್ರಗತಿಯ ಕಡು ನಿಷ್ಠೆಯ ಪ್ರತಿಪಾದಕನೂ, ಇಂಗ್ಲಿಷ್ ಸರ್ಕಾರಕ್ಕೆ ವಿಧೇಯನೂ, ನಿಷ್ಠನೂ ಆಗಿರುತ್ತೇನಲ್ಲದೆ ಬೇರೆಯಲ್ಲ...." ಇದೇ ತರಹ ಸ್ವಾಭಿಮಾನ ಮಾರಿಕೊಂಡ ಸಾವರ್ಕರನ ಮಾತುಗಳು ಆತನ ಕ್ಷಮಾ ಯಾಚನಾ ಮನವಿಯ ಉದ್ದಕ್ಕೂ ಕಂಡುಬರುತ್ತದೆ.

ಬ್ರಿಟೀಷ್ ಸರ್ಕಾರ ಸಾವರ್ಕರನ ವಿಚಾರಣೆ ನಡೆಸಿ ಒಂದಿಷ್ಟು ಷರತ್ತುಗಳನ್ನು ವಿಧಿಸಿದ್ದಕ್ಕೆ ಸಾವರ್ಕರ್ ಅವನ್ನೆಲ್ಲಾ ಒಪ್ಪಿಕೊಂಡು ಧೃಡೀಕರಣ ಬರೆದುಕೊಟ್ಟಿದ್ದು ತೀರಾ ನಾಚಿಕೆಗೇಡು ಅನ್ನಿಸುವಂತಿದೆ. ತನ್ನನ್ನು ತಾನು ಮಾರಿಕೊಂಡಂತಹ ಇಂತಹ ಪರಮ ಅಸಹ್ಯ ಮುಚ್ಚಳಿಕೆ ಬರೆದುಕೊಟ್ಟು, ಬ್ರಿಟೀಷ್ ಅಧಿಕಾರಿಗಳೊಡನೆ ನಡುಬಗ್ಗೊಲ ಯಾಚಿಸಿದ ಹೇಡಿಯೊಬ್ಬನನ್ನು ರಾಷ್ಟ್ರಪಿತನೆಂದು ಗೌರವಿಸುವುದಕ್ಕೆ ಎಸ್.ಕೆ.ರಾಯ್ ಸಾವರ್ಕರ್‌ನಲ್ಲಿ ಅದೇನನ್ನು ಕಂಡುಕೊಂಡ? ಸಾವರ್ಕರ್ ಆ ದಿನಗಳಲ್ಲಿ ಬ್ರಿಟೀಷರ ಒಡೆದು ಆಳುವ ನೀತಿಗೆ ಪೂರಕವಾಗಿ ಧರ್ಮದ ಆಧಾರದಲ್ಲಿ ಕಟ್ಟಿದ ಹಿಂದೂ ಮಹಾಸಭಾದ ಈಗಿನ ಪದಾಧಿಕಾರಿಗಳಲ್ಲೊಬ್ಬ ಈ ಎಸ್.ಕೆ.ರಾಯ್.

ರಾಷ್ಟ್ರದ್ರೋಹ

ಆ ದಿನಗಳಲ್ಲಿ ಸಾವರ್ಕರನ ತೆಕ್ಕೆಯಲ್ಲಿರುತ್ತಿದ್ದವನು ಗಾಂಧಿ ಹಂತಕ ನಾಥೂರಾಮ್ ಗೋಡ್ಸೆ. ಇಬ್ಬರೂ ಹಿಂದೂ ಮಹಾಸಭಾಕ್ಕಾಗಿ ದುಡಿದವರು. ಅಷ್ಟೇ ಮಾತ್ರಕ್ಕೆ ನಾಥೂರಾಂ ಮಾಡಿದ ಗಾಂಧಿ ಹತ್ಯೆಯನ್ನು ರಾಷ್ಟ್ರದ್ರೋಹವೆಂದು ಪರಿಗಣಿಸಬಾರದೆಂದು ಎಸ್.ಕೆ.ರಾಯ್ ಹಲುಬುತ್ತಾನೆ. ಇದು ಏನನ್ನು ಸೂಚಿಸುತ್ತದೆ ಎಂದರೆ ಗಾಂಧಿ ಹತ್ಯೆ ದ್ರೋಹವಲ್ಲವೆಂದಾದರೆ ನಾಥೂರಾಮ್ ಗೋಡ್ಸೆಯನ್ನು, ಕೊಲೆಯಲ್ಲಿ ಶಾಮೀಲಾಗಿದ್ದ ನಾರಾಯಣ ದತ್ತಾತ್ರೆಯ ಆಪ್ಟೆ ಜೊತೆಗೆ 1949 ನವೆಂಬರ್ 15 ರಂದು ಅಂಬಾಲಾ ಜೈಲಿನಲ್ಲಿ ನೇಣಿಗೆ ಹಾಕುವಂತೆ ಕೋರ್ಟ್ ಆದೇಶಿಸಿದ್ದು ಯಾತಕ್ಕಾಗಿ? ಇದನ್ನೆಲ್ಲಾ ಸ್ಪಷ್ಟವಾಗಿ ಪರಾಂಬರಿಸಿದರೆ ಎಸ್.ಕೆ.ರಾಯ್ ಉಡುಪಿಯಲ್ಲಿ ಹೇಳಿದ್ದು ನ್ಯಾಯಾಂಗ ನಿಂದನೆ ಹೇಳಿಕೆಗೂ ಸಮಾನವಾದದ್ದು. ನಮ್ಮ ಸರ್ಕಾರಕ್ಕೆ ಕಿವಿಕೊಟ್ಟು ಕೇಳುವ ಅಥವಾ ರಾಯ್‌ನನ್ನು ಕೋರ್ಟಿಗೆಳೆದು ಶಿಕ್ಷೆಯಾಗುವಂತೆ ಮಾಡುವ ಮನಸ್ಸಿರಬೇಕು ಅಷ್ಟೆ.

ಕೆಲ ತಿಂಗಳ ಹಿಂದೆ ನಮ್ಮ ರಾಜ್ಯ ಸಚಿವೆ ಮೋಟಮ್ಮ "ಚಿಕ್ಕಮಗಳೂರಿಗೆ ಪ್ರವೀಣ್ **ತೊಗಾಡಿಯ ಕಾಲಿಟ್ಟರೆ ಕಾಲು** ಮುರಿಸುತ್ತೇನೆ" ಎಂದು ಹೇಳಿದರೆಂದು ಆಕೆಗೆ ಜೀವ ಬೆದರಿಕೆ ಕೇಸು ತಗುಲಿಸಿ ಕೋರ್ಟಿಗೆ ಎಳೆಯಲಾಗಿತ್ತು. ಇವತ್ತು ಮನಸ್ಸು ಮಾಡಿದರೆ ಎಸ್.ಕೆ.ರಾಯ್‌ನನ್ನು ಕೋರ್ಟಿನ ಕಟಕಟೆಯಲ್ಲಿ ನಿಲ್ಲಿಸಬಹುದು. ಗಾಂಧೀಜಿ ಹತ್ಯೆಯನ್ನು ರಾಷ್ಟ್ರದ್ರೋಹ ವಲ್ಲವೆಂದು ಬಹಿರಂಗ ಸಭೆಯೊಂದರಲ್ಲಿ ಹೇಳಿಕೆ ನೀಡುವುದು, ಅದನ್ನು ರಾಷ್ಟ್ರದ್ರೋಹ ಎಂದು ತೀರ್ಮಾನಿಸಿ ಸಂಬಂಧಪಟ್ಟ ಎಲ್ಲರಿಗೂ ಶಿಕ್ಷೆ ವಿಧಿಸಿದ್ದ (ನಾಥೂರಾಮ್ ಗೋಡ್ಸೆ, ನಾರಾಯಣ ದತ್ತಾತ್ರೆಯ ಆಪ್ಟೆ ಮರಣದಂಡನೆ (1949 ನವೆಂಬರ್ 15), ವಿಷ್ಣು ರಾಮಕೃಷ್ಣ ಕರಕರೆ, ಮದನಲಾಲ ಕಾಶ್ಮೀರಲಾಲ ಪಹವಾ, ಗೋಪಾಲ ವಿನಾಯಕ ಗೋಡ್ಸೆ- ಜೀವಾವಧಿ ಗಡೀಪಾರು ಶಿಕ್ಷೆ (1964 ಅಕ್ಟೋಬರ್ 13 ರಂದು ಖುಲಾಸೆ) ಭಾರತೀಯ ನ್ಯಾಯಾಲಯದ ತೀರ್ಮಾನವನ್ನು ನಿಂದಿಸಿದಂತೆ.

ಎಸ್.ಕೆ.ರಾಯ್ ವಿ.ಡಿ.ಸಾವರ್ಕರ್‌ನನ್ನು ನಿಜವಾದ ರಾಷ್ಟ್ರಪಿತನೆಂದು ಏಕೆ ಭಾವಿಸುತ್ತಾನೋ ಗೊತ್ತಿಲ್ಲ. ರಾಷ್ಟ್ರಪಿತನ ಸ್ಥಾನದಲ್ಲಿ ಗಾಂಧೀಜಿಗೆ ಪರ್ಯಾಯವಾಗಿ ಸಾವರ್ಕರ್ ಎಂಬ ರಣಹೇಡಿಯನ್ನು ಕಾಣುವ ಸಂಘಪರಿವಾರದ ಮಂದಿ ಮುಂದೊಂದು ದಿನ ತಮ್ಮ ಪ್ರಯತ್ನ ಫಲಕೊಡದ ಪಕ್ಷದಲ್ಲಿ, ಬ್ರಿಟೀಷ್ ಅಧಿಕಾರಿಗ... ಸಾವರ್ಕರ್ ಕಳಿಸಿದ್ದ ಕ್ಷಮಾ ಯಾಚ... ಮನವಿಗಳನ್ನು ಸಂಪೂರ್ಣವಾಗಿ ನಾಶಗೊಳಿ... ವಿಫಲವಾದ ಪಕ್ಷದಲ್ಲಿ ಇನ್ನೊಬ್ಬ ಚಡ್ಡಿ ಚತುರ... ರಾಷ್ಟ್ರಪಿತ ಎಂಬಂತೆ ಬಿಂಬಿಸಲು ಹಿಂದೇ... ಹಾಕವು. ಅದು ಆರೆಸ್ಸೆಸ್ ಸಂಸ್ಥಾಪಕ ಹೆಡ್ಗೇವಾ... ಇರಬಹುದು, ಅವನ ಉತ್ತರಾಧಿಕಾರಿಗಳಾ...

ಪುಟ 8 ಕ್ಕೆ

ಮಾತುಕತೆ

...ರೂ ಹೋದ ಮೇಲೆ
...ತ್ ಭವನದಲ್ಲಿ
...ರ್ ಎಂದು ಮುತ್ತುಕೊಂಡಿತು
...
...ಂದೊಮ್ಮೆಲೆ ಮಹಾತ್ಮ
...ರ್ ಎಂದು ನಕ್ಕಿದ್ದು ಕಂಡು,
...ಕಿನಿಂದ ಸಾವರ್ಕರ್
... ನಕ್ಕದ್ದು?"
...ಸು ಕ್ರಿಸ್ತನ ಒಂದು ಘಟನೆ ನೆನಪಾಗಿ"
...ಕೆ ಆತ ಶಿಲುಬೆಗೇರಿದ ಮಹಾತ್ಮ"
...ಮತ್ತೊಮ್ಮೆ ಗೊಳ್ ಎಂದ ಯಾಕೆ?"
...ನ ಸಂಗಡ ಒಬ್ಬ ಕಳ್ಳನೂ ಮೇಲೇರಿದ"
...ಗಾಢ ಮೌನ ಮುಂದುವರೆಯಿತು.

- ಡಾ. ಆರ್.ವಿ.ಭಂಡಾರಿ

ಪೊಲೀಸ್ ದುಂಡಾವರ್ತನೆಗೆ ಬಾಲಕ ಬಲಿ


ಪೊಲೀಸರ ದುಂಡಾವರ್ತನೆಯಲ್ಲಿ ಬೆಂಗಳೂರಿನ ಕಲಾಸಿಪಾಳ್ಯಂ ಬಾಲಕ ಬಲಿಯಾಗಿದ್ದಾನೆ. ಇದು ಹೃದಯಾಘಾತವೆಂದು ಸತ್ಯ ತಿರುಚಲು ಪೊಲೀಸ್ ಕಮಿಷನರ್‌ರವರೇ ಯತ್ನಿಸಿದ್ದಾರೆ. ಆದರೆ ಪೋಸ್ಟ್‌ಮಾರ್ಟಂ ವರದಿ ಸತ್ಯ ಹೊರತಂದಿದೆ... ಎಂತಹ ಒತ್ತಡ, ಕೊಲೆ ಬೆದರಿಕೆಯಲ್ಲಿಯೂ ಯುವಜನರು ಹೋರಾಟ ಮುಂದುವರಿಸಿದ್ದಾರೆ. ಇದು ಎಂತಹ ಆಡಳಿತವೆಂದು ಖರ್ಗೆ-ಕೃಷ್ಣರವರು ಉತ್ತರ ಹೇಳಬೇಕಿದೆ!

ಡಿವೈಎಫ್‌ಐ ನಿಂದ ಪ್ರತಿಭಟನೆ


ಕಲಾಸಿಪಾಳ್ಯಂ ಪೊಲೀಸರು ರೌಂಡ್ಸ್‌ಗೆ ಹೊರಟರೆಂದರೆ ಮುಗೀತು, ಇವರನ್ನು ಕಂಡು ದಿಕ್ಕಾಪಾಲಾಗಿ ಓಡುವವರನ್ನು ಕಂಡರೆ ಅವರಿಗೇನೋ ಖುಷಿ. ಅಷ್ಟಕ್ಕೇ ಸುಮ್ಮನಾಗುವುದಿಲ್ಲ. ಓಡುವವರ ಕಡೆಗೆ ದೊಣ್ಣೆ ಬೀಸುವುದು, ಕೈಗೆ ಸಿಗುವವರಿಗೆ ಬೂಟುಕಾಲು ಸೇವೆ! ಅಮಾಯಕ ಜನ ಯಾವ ತಪ್ಪು ಮಾಡದಿದ್ದರೂ ಒದೆತ ತಪ್ಪಿದ್ದಲ್ಲ. ಇದೇ ಪೊಲೀಸರು ಆ ಏರಿಯಾದಲ್ಲಿ ಬಡ್ಡಿ ವ್ಯವಹಾರದ, ಜೂಜು, ಮಟ್ಕಾದಂತಹ ದಂಧೆಯಲ್ಲಿ ಜನರನ್ನು ಸುಲಿಯುವ, ದಾಂಧಲೆ ನಡೆಸುವವರ ಸಹವಾಸಕ್ಕೆ ಹೋಗುವುದಿಲ್ಲ.

ಬಾಲಕ ಬಲಿ

ಮೊನ್ನೆ ಜುಲೈ 17 ರಂದು ಜನರನ್ನು ಬೆದರಿಸುವ



ದೌರ್ಜನ್ಯವೆಸಗಿದ ಇನ್ಸ್‌ಪೆಕ್ಟರ್ ಸಿದ್ದರಾಮಯ್ಯ



ಪೊಲೀಸ್ ದೌರ್ಜನ್ಯದ ವಿರುದ್ಧ ಬೀದಿಗಿಳಿದ ಜನತೆ

ಪೊಲೀಸರ ಇಂತಹ ಗೂಂಡಾಗಿರಿಗೆ ವಿನೋಬಾ ನಗರದ ಸ್ಲಂನ ಬಾಲಕನೊಬ್ಬ ಬಲಿಯಾಗೇಬಿಟ್ಟ. ಸ್ನೇಹಿತರೊಂದಿಗೆ ರಸ್ತೆ ಬದಿಯಲ್ಲಿ ಮಾತನಾಡುತ್ತಾ ನಿಂತಿದ್ದ ಚಂದ್ರಮೂರ್ತಿ ಪೊಲೀಸರ ಧಾಳಿಯಿಂದ ಕಂಗಾಲಾಗಿ ಓಡುವಾಗಲೇ ಬಿದ್ದ ಲಾಠಿ ಏಟುಗಳಿಂದಾಗಿ ಮಹಡಿ ಮೆಟ್ಟಿಲೇರುವಾಗಲೇ ಕುಸಿದು ಬಿದ್ದ. ಮತ್ತೆ ಮೇಲೇಳಲೇ ಇಲ್ಲ. ಇದಾವುದನ್ನೂ ಲೆಕ್ಕಿಸದೇ ಪೊಲೀಸರು ಠಾಣೆಗೆ ನಡೆದರು.

ಪೊಲೀಸ್ ದಾಳಿ

ಇಂತಹ ದಾಳಿಗಳಿಂದ ವಿನೋಬಾನಗರದ ಜನತೆ ಬೇಸತ್ತಿದ್ದರು. ಈಗ ಹೆಣ ಬಿದ್ದ ಮೇಲೆಯೂ ಅವರಿಗೆ ಸುಮ್ಮನಿರಲಾಗಲಿಲ್ಲ. ಜನಪರ ಕಾರ್ಯಗಳಲ್ಲಿ ಕಾಳಜಿ ಹೊಂದಿರುವ ಸಂಘಟನೆ ಡಿವೈಎಫ್‌ಐ ನೇತೃತ್ವದಲ್ಲಿ ಠಾಣೆಗೆ ನಡೆದರು. ಚಂದ್ರಮೂರ್ತಿ ಶವವನ್ನು ಠಾಣೆ ಮುಂದಿಟ್ಟು ನ್ಯಾಯ ದೊರಕಿಸಿಕೊಡಲು ಆಗ್ರಹಿಸಿದರು. ಶಾಂತ ರೀತಿಯಲ್ಲಿ ಧರಣಿ ಕುಳಿತಿದ್ದ ಜನರ ಮೇಲೆ ಪೊಲೀಸರ ಲಾಠಿ ಚಾರ್ಜ್ ಆರಂಭಿಸಿದರು. ಪ್ರಕ್ಷುಬ್ಧಗೊಂಡ ವಾತಾವರಣ ದಿಂದ ಜನರು ಕಲ್ಲು ತೂರಾಟಕ್ಕಿಳಿದರು. ಇದರಿಂದ ಹಲವಾರು ಬಸ್ ಮತ್ತು ಪೊಲೀಸ್ ಜೀಪ್‌ಗಳಿಗೆ ಜಖಂ ಆಯಿತು. ಡಿಸಿಪಿ ಛಬ್ಬಿ ಅವರಿಗೂ ಸೇರಿದಂತೆ ಕೆಲವು ಪೊಲೀಸರಿಗೆ ಗಾಯಗಳಾದವು. ಆದರೆ ಪ್ರತಿಭಟನೆ ನಿರತರ ಮೇಲಿನ ಹಲ್ಲೆಯಿಂದಾಗಿ ಅನೇಕ ಡಿವೈಎಫ್‌ಐ ಮುಖಂಡರ ಕೈ ಕಾಲುಗಳು ಮುರಿದವು. ಅವರಲ್ಲಿ ಆದಿಕೇಶವ, ಶಿವಕುಮಾರ್, ಕುಮಾರ್ ಮತ್ತಿತರರಿಗೆ ತೀವ್ರ ಸ್ವರೂಪದ ಗಾಯಗಳಾಗಿವೆ.

ಪೋಸ್ಟ್‌ಮಾರ್ಟಂ ಮೊದಲೇ ಸುಳ್ಳು ಸಮರ್ಥನೆ

ಇಷ್ಟೆಲ್ಲಾ ಆದರೂ ಡಿವೈಎಫ್‌ಐನ ಸ್ಥಳೀಯ ಯುವ ಮುಖಂಡರಾದ ರವಿಚಂದ್ರನ್, ನಾಗರಾಜ್ ಮತ್ತು ರಾಜ್ಯ ಕಾರ್ಯದರ್ಶಿಯಾದ ಕೆ.ಮಹಾಂತೇಶ್ ನೇತೃತ್ವದಲ್ಲಿ ನಾಗರೀಕರು, ಸಾವಿಗೆ ಕಾರಣರಾದ ಪೊಲೀಸ್ ಅಧಿಕಾರಿಗಳ ಮೇಲೆ ಕ್ರಮಕ್ಕೆ ಒತ್ತಾಯಿಸಿ ಪಟ್ಟು ಹಿಡಿದರು. ಸ್ಥಳಕ್ಕೆ ಭೇಟಿ ನೀಡಿದ ಕಮಿಷನರ್ ಮರಿಸ್ವಾಮಿಯವರು 'ಬಾಲಕನ ಸಾವಿಗೆ ಹೃದಯಾಪಘಾತವೇ ಕಾರಣ, ಬಾಲಕನ ಮೇಲೆ ಯಾವುದೇ ಹಲ್ಲೆಯ ಚಹರೆಗಳು ಇಲ್ಲ ಆದ್ದರಿಂದ ಕ್ರಮವಹಿಸುವ ಪ್ರಶ್ನೆಯೇ ಇಲ್ಲ'ವೆಂದು ಹೇಳಿ ತಮ್ಮ ಇಲಾಖೆಯ ಭ್ರಷ್ಟ ಅಧಿಕಾರಿಗಳ ಪರವಾಗಿ ನಿಂತರು. ಇದೇ ಸಂದರ್ಭದಲ್ಲಿ ಮಧ್ಯಪ್ರವೇಶಿಸಿದರು ಮಾರ್ಕೆಟ್ ದೇವಿ(ಚಾಮರಾಜಪೇಟೆ ಶಾಸಕ ಆರ್.ವಿ. ದೇವರಾಜ್). ಅನ್ಯಾಯಕ್ಕೊಳಗಾದ ಜನರಿಗೆ ನ್ಯಾಯ ದೊರಕಿಸಿಕೊಡುವರೆಂಬ ಭಾವನೆ ಹುಸಿಯಾಯಿತು. ಈ ಕೃತ್ಯದ ರೂವಾರಿಯಾದ ಇನ್ಸ್‌ಪೆಕ್ಟರ್ ಸಿದ್ದರಾಮಯ್ಯನವರ ರಕ್ಷಣೆಗೆ ಟೊಂಕ ಕಟ್ಟಿ ನಿಂತರು ದೇವಿ. ಕಾರಣವಿಷ್ಟೇ ಈ ಸಿದ್ದರಾಮಯ್ಯ ಮಾರ್ಕೆಟ್ ದೇವಿಗೆ ಕಪ್ಪ ಸಲ್ಲಿಸಿ ಈ ಠಾಣೆಗೆ ವಕ್ಕರಿಸಿದ್ದಲ್ಲದೆ ಅವರ ಎಲ್ಲಾ ಕುಕೃತ್ಯಗಳಿಗೂ ಬೆಂಗಾವಲಾಗಿ ನಿಂತವರು ಎಂಬುದು ಜನಜನಿತ.

ಈ ಶಾಸಕ ಯಾರ ಪರ?

ರಾಜಿ ಕಬೂಲಿಗೆ ನಿಂತ ದೇವರಾಜ್ ಒಂದು ಲಕ್ಷ ರೂಗಳನ್ನು ಮೃತನ ತಂದೆಗೆ ನೀಡುವುದಾಗಿ ಘೋಷಿಸಿದ್ದಲ್ಲದೆ ಮಿಕ್ಕವರು ಈ ವಿಷಯದಲ್ಲಿ ತಲೆ ಹಾಕುವ ಅಗತ್ಯವಿಲ್ಲವೆಂದು ಡಿವೈಎಫ್‌ಐ ಅನ್ನು ದೂರವಿಡಲು ಯತ್ನಿಸಿದರು. ಪ್ರಕರಣವನ್ನು ಮುಚ್ಚಿಹಾಕುವ ಯತ್ನ ಅವರದು.

ಆದರೆ ಅಪರಾಧವೆಸಗಿದ ಇನ್ಸ್‌ಪೆಕ್ಟರ್ ಸಿದ್ದರಾಮಯ್ಯ ಮತ್ತವರ ಸಿಬ್ಬಂದಿಯನ್ನು ಪಾರು ಮಾಡುವ ಇಂತಹ ಹುನ್ನಾರವನ್ನು ಅರಿತ ಡಿವೈಎಫ್‌ಐ ಸೂಕ್ತ ಕ್ರಮಕ್ಕೆ ಒತ್ತಾಯಪಡಿಸಿತು. ಆದರೆ ಪೊಲೀಸರು ಬಾಲಕನ ಸಾವು ಬೇರೆಯೇ ಕಾರಣಗಳಿಂದಾಗಿರುವುದು, ಅದಕ್ಕೆ ತಾವು ಹೊಣೆಯಲ್ಲವೆಂದೇ ವಾದಿಸುತ್ತಿದ್ದರು.

ವೈದ್ಯಕೀಯ ವರದಿ ಬಹಿರಂಗ ಪಡಿಸಿದ ಸತ್ಯ


ಆದರೆ ಈಗ ವೈದ್ಯಕೀಯ ವರದಿ ಬಂದಿದೆ. ಬಾಲಕನ ಎಡಬುಜದ ಮೇಲೆ ಎರಡು ಇಂಚು ಉದ್ದ ಅಗಲದ ಲಾಠಿಯಲ್ಲಿ ಹೊಡೆದಂತೆ ಕಾಣುವ ಗಾಯದ ಗುರ್ತು, ಎಡ ಮೊಣಕೈ ಕೆಳಗೆ ಒಂದು ಸೆಂ.ಮೀಟರ್ ಅಗಲದ ಗಾಯ, ಎಡ ಮುಂಗಾಲಿನಲ್ಲಿ ತರಚಿದ ಗಾಯ ಮತ್ತು ಸಾವಿಗೆ ಕಾರಣವಾಗಬಹುದಾದ ಎರಡೂವರೆ ಇಂಚು ಉದ್ದದ ಲಾಠಿ ಏಟು ಕಿಬ್ಬೊಟ್ಟೆಯ ಮೇಲೆ ಬಿದ್ದಿರುವುದನ್ನು ವೈದ್ಯಕೀಯ ವರದಿಗ[illegible] ದೃಢಪಡಿಸಿವೆ. ಮ್ಯಾಜಿಸ್ಟ್ರೇಟರು ಕೂಡಾ [illegible] ಏಟುಗಳು ಬಿದ್ದಿರುವುದನ್ನು ದೃಢಪಡಿಸಿದ್ದಾರೆ.

ರಾಜಿ ಇಲ್ಲ

ಸದಾ ಜನಹಿತ ಕೆಲಸಗಳಲ್ಲಿ ತೊಡ[illegible] ಕೊಂಡಿರುವ, ಅನ್ಯಾಯಕ್ಕೊಳಗಾದವರ ಪರವ[illegible] ನಿಲ್ಲುವ, ದಮನಕ್ಕೊಳಗಾಗುವ[illegible] ದನಿಯಾಗಿರುವ ಯುವ ಸಂಘಟನೆ ಡಿವೈಎಫ್[illegible] ಇಂತಹ ಅನ್ಯಾಯವನ್ನು ಸಹಿಸಲು ಸಾಧ್ಯವೇ [illegible] ಅಪರಾಧವೆಸಗಿದ ಪೊಲೀಸ್ ಅಧಿಕಾರಿಗಳಿಗೆ [illegible] ಆಗಲೇಬೇಕು, ಅನ್ಯಾಯಕ್ಕೊಳಗಾದವರಿಗೆ ಸ[illegible] ಪರಿಹಾರ ದೊರಕಿಸಿಕೊಡಬೇಕೆಂದು ಹೋರಾ[illegible] ಇಳಿದಿದೆ.

ಮಾನವ ಹಕ್ಕು ಆಯೋಗಕ್ಕೆ ಮನವಿ

ಪೊಲೀಸ್ ಇಲಾಖೆಯ ಉ[illegible] ಅಧಿಕಾರಿಗಳು, ರಾಜಕಾರಣಿಗಳೇ ಅಪರಾಧಿ[illegible] ಪರವಾಗಿ ನಿಂತಿರುವುದರಿಂದ ಅವರಿ[illegible] ನ್ಯಾಯಯುತ ಪರಿಹಾರ ನಿರೀಕ್ಷಿಸುವು[illegible]



ವೈದ್ಯಕೀಯ ವರದಿಯಲ್ಲಿ ಲಾಠಿ ಏಟನ್ನು ದೃಢಪಡಿಸಿರುವು[illegible]

ಸಾಧ್ಯವಿಲ್ಲವೆಂದು, ಮಾನವ ಹಕ್ಕು ಆಯೋ[illegible] ಪ್ರಕರಣದಲ್ಲಿ ಮಧ್ಯಪ್ರವೇಶಿಸಿ ಸೂಕ್ತ ನ್ಯಾ[illegible] ಒದಗಿಸಿಕೊಡಬೇಕೆಂದು ಡಿವೈಎ[illegible] (ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್) [illegible] ಮಾಡಿದೆ. ಇನ್ನೊಂದೆಡೆ ಈ ಹೋರಾಟ [illegible] ಎಂದು ಡಿವೈಎಫ್‌ಐ ಮುಖಂಡರ ಮೇಲೆ [illegible] ಹೇರಲಾಗುತ್ತಿದೆ. ಕೊಲೆ ಬೆದರಿಕೆಗಳು ಬ[illegible] ಹೇಗಿದೆ ಕೃಷ್ಣ-ಖರ್ಗೆಯವರ ಆಡಳಿತ? [illegible] ಹೈಟೆಕ್ ಸಿಟಿಯಲ್ಲಿ!

ಉಡುಪಿಯಲ್ಲಿ ತ್ರಿಶೂಲ ದೀಕ್ಷೆ......

ಪುಟ 7 ರಿಂದ

ಗೋಳ್ವಾಲ್ಕರ್, ಕೆ.ಎಸ್.ಸುದರ್ಶನ್, ಮುಂತಾದವರಿರಬಹುದು ಅಥವಾ ಜೈಲಿನಿಂದ ಬಿಡುಗಡೆಯಾಗಿ ಬಂದಿರುವ ತ್ರಿಶೂಲ ದೀಕ್ಷೆಯ ರೂವಾರಿ ಪ್ರವೀಣ್ ತೊಗಾಡಿಯ ಇರಬಹುದು. ರಾಷ್ಟ್ರಪಿತ ಎಂಬ ಗೌರವ ಸ್ಥಾನಕ್ಕೆ ಇರುವುದು ಕೇವಲ ಜೈಲಿಗೆ ಹೋಗಿ ಬಂದಿರುವ ಅರ್ಹತೆ ಮಾತ್ರ ಎಂದು ಹಿಂದೂ ಮತಾಂಧರು ತಿಳಿದುಕೊಂಡಿರುವುದೇ ಇದಕ್ಕೆ ಕಾರಣವಾಗಿರ ಬಹುದು. ಜೈಲಿಗೆ ಹೋಗಿ ಬಂದ ಮಾತ್ರಕ್ಕೆ ರಾಷ್ಟ್ರಪಿತ ಆಗುವುದಾದರೆ ನಮ್ಮ ದೇಶದಲ್ಲಿ ಅರ್ಧಕ್ಕರ್ಧ ಮಂದಿ ರಾಷ್ಟ್ರಪಿತರೇ ಇರುತ್ತಿದ್ದರು. ಬಾಬ್ರಿ ಮಸೀದಿ ಪ್ರಕರಣದ ನಿಷ್ಪಕ್ಷಪಾತ ತೀರ್ಪು ಹೊರಬಿದ್ದರೆ ಬಿ.ಜೆ.ಪಿಯಲ್ಲಿನ ಇನ್ನೂ ಸಾಕಷ್ಟು ದೊರೆಗಳೂ-ರಾಣಿಯರೂ ರಾಷ್ಟ್ರಪಿತ, ರಾಷ್ಟ್ರ ಮಾತಾಗಳಾಗಿಬಿಡುತ್ತಾರೆ. ರಾಷ್ಟ್ರಪಿತ ಎಂಬ ಗೌರವ ಮಕ್ಕಳಾಡುವ 'ಗಂಡ-ಹೆಂಡತಿ' ಆಟದಂತೆ ಎಂದು ಎಸ್.ಕೆ.ರಾಯ್ ಭಾವಿಸಿದಂತೆ ಕಾಣುತ್ತಿದೆ.


ಸರ್ಕಾರದ ನಿಗಾ ಎಲ್ಲಿ?

ನಮ್ಮರಾಜ್ಯದಲ್ಲಿ ಸರ್ಕಾರ ಸಂಘಪರಿವಾರದ ಬಗ್ಗೆ ತೀವ್ರ ನಿಗಾವಹಿಸಬೇಕಾದ ಕಾಲ ಬಂದೊದಗಿಯಾಗಿದೆ. 'ತ್ರಿಶೂಲ ದೀಕ್ಷಾ ಆಂದೋಲನ ಉಡುಪಿಯಿಂದ ಪ್ರಾರಂಭವಾಗಿದೆ' ಎಂದು ಹಿಂದೂ ಯುವಕ ಸಭಾದ ರಾಷ್ಟ್ರೀಯ ಉಪಾಧ್ಯಕ್ಷ ಎಸ್.ಕೆ.ರಾಯ್ ಘೋಷಿಸಿದ್ದಾನೆ. ಇದರರ್ಥ ಇದು ರಾಜ್ಯಾದ್ಯಂತ ವ್ಯಾಪಿಸುವಂತೆ ಸಂಘಪರಿವಾರ ನೋಡಿಕೊಳ್ಳುತ್ತದೆ ಎಂದೆ. ಕೆಲ ಸಮಯದ ಹಿಂದಷ್ಟೇ ತ್ರಿಶೂಲ ದೀಕ್ಷಾ ಕಾರ್ಯಕ್ರಮವನ್ನು ಘೋಷಿಸಿ, ದೀಕ್ಷೆಯಲ್ಲಿ ತೊಡಗಿದ್ದ ಪ್ರವೀಣ್ ತೊಗಾಡಿಯನನ್ನು ಬಂಧಿಸಲಾಗಿತ್ತು. ಕಾರ್ಯಕ್ರಮದ ಮೇಲೂ ಸರ್ಕಾರ ನಿಷೇಧ ಹೇರಿತ್ತು. ಈ ಸಮಯದಲ್ಲೇ ಕರ್ನಾಟಕದಲ್ಲೂ ಪ್ರಗತಿಪರ ಪತ್ರಿಕೆಗಳು, ವಿಚಾರವಾದಿಗಳು ತ್ರಿಶೂಲ ದೀಕ್ಷಾ ಕಾರ್ಯಕ್ರಮದ ಮೇಲೆ ನಿಷೇಧ ತರಲು ಕರ್ನಾಟಕ ಸರ್ಕಾರಕ್ಕೆ ಒತ್ತಡ ತಂದರೂ ನಮ್ಮ ಮುಖ್ಯಮಂತ್ರಿ ಅದನ್ನು ಕಿವಿ ಮೇಲೆ ಹಾಕಿಕೊಂಡಂತೆ ಕಾಣುತ್ತಿಲ್ಲ. ಸರ್ಕಾರ ಭಾರೀ ಉದಾಸೀನ ಪ್ರವೃತ್ತಿ ತೋರಿಸುತ್ತಿದೆ. ಇದರ ಪರಿಣಾಮವೇ ಎಂಬಂತೆ ದಿನಾಂಕ 29 ಜೂನ್ 2003 ರಂದು ಉಡುಪಿಯ ಶಿರೂರು ಮಠದಲ್ಲಿ 150 ಕ್ಕೂ ಹೆಚ್ಚು ಮಂದಿ ಹಿಂದೂ ಮಹಾಸಭಾ ಕಾರ್ಯಕರ್ತರಿಗೆ - ತ್ರಿಶೂಲ ದೀಕ್ಷೆ ನೀಡಿ, ಹಿಂದೂಗಳ ಮೇಲಾಗುವ ಆಕ್ರಮಣದ ವಿರುದ್ಧ ತ್ರಿಶೂಲ ಬಳಕೆಗೆ ಕರೆ ನೀಡಲಾಗಿದೆ. ಕರ್ನಾಟಕವನ್ನು ಮತ್ತೊಂದು ಗುಜರಾತ್ ಮಾಡುವ ಪ್ರವೀಣ್ ತೊಗಾಡಿಯಾನ ಇಚ್ಛೆ ನೇರವೇರುವ ಮೊದಲೇ ಸಂಬಂಧಪಟ್ಟ ಚೆಡ್ಡಿ ನಾಯಕರಿಗೆ ಕಡಿವಾಣ ಹಾಕಬೇಕಾಗಿದೆ. ದೀಕ್ಷಾ ಕಾರ್ಯ[illegible] ವನ್ನು ಸಂಪೂರ್ಣವಾಗಿ ನಿಷೇಧಿಸುವತ್ತ ಸ[illegible] ಯೋಚಿಸಬೇಕು.

ಬಾಬಾಬುಡನ್‌ಗಿರಿ ವಿವಾದ[illegible] ಪ್ರಚೋದನಕಾರಿಯಾಗಿ ವರ್ತಿಸಿದ ಬಿಜ[illegible] ಇನ್ನೊಬ್ಬ ಚತುರ ಅನಂತಕುಮಾರ್ ಎಂಬ[illegible] ರಾಡಿ' ಯನ್ನು ಕರ್ನಾಟಕದ ಬಿಜೆ[illegible] ಉಸ್ತುವಾರಿಗೆ ನೇಮಿಸಲಾಗಿದೆ. ಇದು ಬಿಜ[illegible] ಯಡಿಯೂರಪ್ಪ ಮುಂತಾದವ[illegible] ಸಂಘಪರಿವಾರಕ್ಕೆ ಹೆಚ್ಚು ಖುಷಿ ತಂದ ಪ್ರ[illegible] ಸಾಲದ್ದಕ್ಕೆ ಹಿಂದೂ ಮಹಾಸಭಾದ [illegible] 'ಹಿಂದುತ್ವದ ಆಧಾರದಲ್ಲಿ ಮುಂದಿನ ಚುನಾ[illegible] ಸಮರ ನಡೆಯಲಿದ್ದು, ಕರ್ನಾಟಕದಲ್ಲಿ ಲೋ[illegible] ಹಾಗೂ ವಿಧಾನಸಭೆ ಚುನಾವಣೆಯಲ್ಲಿ [illegible] ಮಹಾಸಭಾ ಸ್ಪರ್ಧಿಸಲಿದೆ' ಎಂದೂ ಹೇ[illegible] ಕರ್ನಾಟಕಕ್ಕೆ ಕೇಡು ಪ್ರಾರಂಭವಾದಂತಿದೆ. ಇನ್ನಾದರೂ ಎಚ್ಚೆತ್ತುಕೊಳ್ಳಲಿ.

ವೈವಿಧ್ಯತೆಯನ್ನು ಗೌರವಿಸಿದಾಗ ಮಾತ್ರ ಭಾರತ ಒಂದಾಗಿ ಉಳಿಯಲು ಸಾಧ್ಯ

ಸೀತಾರಾಂ ಯೆಚೂರಿ



ಭಾರತದ ವೈವಿಧ್ಯಮಯ ಸಂಸ್ಕೃತಿಯಲ್ಲಿರುವ ಸಾಮಾನ್ಯ ಅಂಶಗಳನ್ನು ಗುರುತಿಸಿ ಗೌರವಿಸಿದಾಗ ಮಾತ್ರ ಭಾರತ ಒಂದಾಗಿ ಉಳಿಯಲು ಸಾಧ್ಯ. ಬದಲು ಈ ವೈವಿದ್ಯತೆಯ ಮೇಲೇನಾದರು ಒಂದೇ ಸಂಸ್ಕೃತಿ, ಧರ್ಮ, ಭಾಷೆಯನ್ನು ಹೇರಲು ಹೊರಟರ ಭಾರತ ಒಡೆದು ಚೂರಾಗುತ್ತದೆ ಎಂದು ಕಾಂ। ಸೀತಾರಾಂ ಯೆಚೂರಿ ವಿಶ್ಲೇಷಿಸಿದರು.

ಹೊಸಪೇಟೆಯಲ್ಲಿ ಜುಲೈ 18 ರಂದು ನಡೆದ 'ಕೋಮುವಾದ ಅಪಾಯಗಳು' ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡುತ್ತಿದ್ದರು. ಜುಲೈ 18 ರಿಂದ 22 ರವರೆಗೆ ಸಿಪಿಐ(ಎಂ) ನ ರಾಜ್ಯ ಅಧ್ಯಯನ ಶಿಬಿರದ ಸಂದರ್ಭದಲ್ಲಿ ಈ ಸಂಕಿರಣ ಏರ್ಪಡಿಸಲಾಗಿತ್ತು.

ಭಾರತ ವೈವಿದ್ಯತೆಗಳ ತವರು, ಜನರ ನಡುವೆ, ಭಾಷೆಯ ನಡುವೆ ಅನೇಕ ವೈವಿದ್ಯತೆಗಳಿವೆ, ಒಂದೇ ಧರ್ಮದ ಜನರಲ್ಲೂ ಅನೇಕ ವೈವಿದ್ಯತೆಗಳಿವೆ, ಉದಾಹರಣೆಗೆ ದಕ್ಷಿಣ ಭಾರತದಲ್ಲಿ ಅಕ್ಕನ ಮಗಳನ್ನು ತಮ್ಮ ಮದುವೆಯಾಗಬಹುದು ಆದರೆ ಉತ್ತರ ಭಾರತದಲ್ಲಿ ಹೀಗೇನಾದರೂ ಆದರೆ ಒಂದೋ ಅವರನ್ನು ಊರಿನಿಂದ ಹೊರ ಹಾಕುತ್ತಾರೆ. ಇಲ್ಲವೇ ಅವರನ್ನು ಕೊಂದೇ ಬಿಡುತ್ತಾರೆ. ಆದರೆ ಒಂದೇ ಧರ್ಮದವರಾದ ಹಿಂದೂಗಳಲ್ಲೇ ಈ ರೀತಿ ವೈವಿದ್ಯತೆಯಿದೆ. ಇದು ನಿನ್ನೆ ಮೊನ್ನೆಯುವದಲ್ಲ ಶತಮಾನಗಳಿಂದ ಅಸ್ತಿತ್ವದಲ್ಲಿದೆ. ಹಾಗೇಯೆ ಕೇರಳದಲ್ಲಿ ಓಣಂ ಹಬ್ಬವನ್ನು ಮಹಾಬಲಿ ಚಕ್ರವರ್ತಿ ಹುಟ್ಟಿದ ಸಂಕೇತವಾಗಿ ಆಚರಿಸಿ ಸಂಭ್ರಮಿಸುತ್ತಾರೆ, ಹಾಗೆಯೇ ಉತ್ತರ ಭಾರತದಲ್ಲಿ ಮಹಾಬಲಿ ಸಾವನ್ನು ಆಚರಿಸುತ್ತಾರೆ. ಏಕೆಂದರೆ ಅವನು ರಾಕ್ಷಸರ ಚಕ್ರವರ್ತಿ ಆಗಿದ್ದ ಎಂದು. ಅಂದರೆ ಹಿಂದುಗಳಲ್ಲೇ ಒಂದು ಗುಂಪಿನ ಜನರು ಮಹಾಬಲಿಯ ಹುಟ್ಟನ್ನು ಆಚರಿಸಿದರೆ, ಮತ್ತೊಂದು ಗುಂಪು ಅವನ ಸಾವನ್ನು ಆಚರಿಸುತ್ತದೆ. ಇದು ಭಾರತದ ವೈವಿದ್ಯತೆಗೆ ಸಾಕ್ಷಿ. ಇವರಲ್ಲಿ ಯಾರು ಒಳ್ಳೆ ಹಿಂದೂ, ಯಾರು ಕೆಟ್ಟ ಹಿಂದೂ ಪ್ರಶ್ನಿಸಿ, ತೊಗಾಡಿಯಾ, ಅದ್ವಾನಿಗಳಿಂದ ಸರ್ಟಿಫಿಕೇಟ್ ಪಡೆಯಬೇಕೆ ಎಂದು ಹೇಳುತ್ತಾ ಕೋಮುವಾದ ಇಂತಹ ವೈವಿದ್ಯತೆಯನ್ನು ನಾಶ ಮಾಡುತ್ತದೆ. ಇದು ಭಾರತದ ಜಾತ್ಯಾತೀತತೆ, ಪ್ರಜಾಪ್ರಭುತ್ವಕ್ಕೆ ಮಾತ್ರ ತೊಂದರೆ ಕೊಡುವುದಿಲ್ಲ ಬದಲಾಗಿ ಭಾರತ ಐಕ್ಯತೆ ಸಮಗ್ರತೆಯನ್ನೆ ನಾಶ ಮಾಡುತ್ತದೆ ಎಂದರು.

ಕೋಮುವಾದ ಕೇವಲ 10-15 ವರ್ಷಗಳ ಹೊಸ ಸಮಸ್ಯೆಯೇನಲ್ಲ, ಅಥವಾ ರಾಮಭಕ್ತರ ಪ್ರವಾಹ ಹರಿದು ಬಂದದ್ದು ಕಾರಣವೂ ಅಲ್ಲ, ಬದಲಾಗಿ ಇದಕ್ಕೆ ಸ್ವಾತಂತ್ರ್ಯ ಪೂರ್ವದಿಂದಲೂ ಇತಿಹಾಸವಿದೆ, 1851 ರ ಪ್ರಥಮ ಸ್ವಾತಂತ್ರ ಸಂಗ್ರಾಮದಲ್ಲಿ ಭಾರತದ ಎಲ್ಲ ಜನ ಬ್ರಿಟಿಷರ ವಿರುದ್ಧ ಹೋರಾಟಕ್ಕಿಳಿದರು, ಇದರಿಂದ ಅಪಾಯವಿದೆ ಎಂದು ಅರಿತ ಬ್ರಿಟೀಷರು ಒಡೆದು ಆಳುವ ನೀತಿಯನ್ನು ಅನುಸರಿಸಿ, ಮೊದಲನೆಯದಾಗಿ ಹಿಂದೂ ಮುಸ್ಲಿಂ ನಡುವೆ ಕಂದಕ ಸೃಷ್ಟಿಸಿದರು. ಸ್ವಾತಂತ್ರ್ಯ ಚಳುವಳಿಯ ಆಶಯಗಳನ್ನು ಉಳಿಸಿಕೊಂಡು ಅದನ್ನು ಒಂದು ಸಮಾಜವಾದಿ ಗಣತಂತ್ರವಾಗಿ ಬದಲಾಯಿಸಿದಾಗ ಮಾತ್ರ ಭಾರತದ ಐಕ್ಯತೆಯನ್ನು ಉಳಿಸಿಕೊಳ್ಳಲು ಸಾಧ್ಯ. 1939ರಿಂದ ಆರ್‌ಎಸ್‌ಎಸ್ ಪ್ರತಿಪಾದಿಸುತ್ತಿರುವ ಹಿಂದೂ ರಾಷ್ಟ್ರದ ಪರಿಕಲ್ಪನೆಯಿಂದಾಗಲಿ, ಮುಸ್ಲೀಂ ಲೀಗ್‌ನ ಕಲ್ಪನೆಯಿಂದಾಗಲೀ ಅದು ಸಾಧ್ಯವಿಲ್ಲ, ಆರ್‌ಎಸ್‌ಎಸ್ ಮತ್ತು ಮುಸ್ಲೀಂ ಲೀಗ್‌ನ ದೃಷ್ಟಿಕೋನಗಳು ಒಂದೇ ಮೂಲದವು ಎಂದು ಪ್ರತಿಪಾದಿಸಿದರು.

ಯಾವುದೇ ಧರ್ಮ ಒಂದು ದೇಶದ ಐಕ್ಯತೆಗೆ ಕಾರಣವಾಗಲು ಸಾಧ್ಯವಿಲ್ಲ, ಎಂಬುದು ಪಾಕಿಸ್ತಾನದಿಂದ ಬಾಂಗ್ಲಾ ಬೇರೆಯಾದಾಗ ಸಂಪೂರ್ಣ ಸಾಬೀತಾಯಿತು. ಹಾಗಾಗಿ ಭಾರತ ಒಂದು ಜಾತ್ಯಾತೀತ ಪ್ರಜಾಪ್ರಭುತ್ವ ದೇಶವಾಗಿ ಉಳಿಯಬೇಕು, ಎಂದ ಸೀತಾರಾಂ, ತನ್ನ ಅಜೆಂಡಾವನ್ನು ಜಾರಿಗೊಳಿಸಲು ಅಡ್ಡಿಯಾದರು ಎಂಬ ಕಾರಣಕ್ಕೆ ಮಹಾತ್ಮ ಗಾಂಧಿಯನ್ನು ಆರ್.ಎಸ್.ಎಸ್. ನವರು ಕೊಂದರು.

ಕೋಮುವಾದಿಗಳು ಸಾಮ್ರಾಜ್ಯಶಾಹಿಗಳ ನಗ್ನ ಬೆಂಬಲಿಗರು, ಸಾಮ್ರಾಜ್ಯಶಾಹಿಗಳು ಇಡೀ ಜಗತ್ತನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳಲು ನೋಡುತ್ತಿದ್ದಾರೆ. ಹಾಗಾಗಿ ಕೋಮುವಾದಿಗಳು ದೇಶ ವಿರೋಧಿಗಳು. ದೇಶದ ಐಕ್ಯತೆ, ಸಮಗ್ರತೆಗೆ ಅವರಿಂದ ಅಪಾಯ ಕಾದಿದ್ದೇ, ಆದ್ದರಿಂದ ಇಂತಹ ಕೋಮುವಾದಿ ಆಕ್ರೋಶವನ್ನು ಮುಗಿಸುವ ಜವಾಬ್ದಾರಿ ನಮಗಿದೆ ಎಂಹು ಹೇಳಿದರು.

ಅಧ್ಯಯನ ಶಿಬಿರದಲ್ಲಿ ಮಿಂಚಿದ 'ನಗಾರಿ'

ವಿಶ್ವದ ಹಾಗೂ ರಾಜ್ಯ, ರಾಷ್ಟ್ರದ ಸಾಮಾಜಿಕ, ಆರ್ಥಿಕ, ರಾಜಕೀಯ ಬೆಳವಣಿಗೆಗಳನ್ನು ಆಳವಾಗಿ ವಿಶ್ಲೇಷಿಸಿ ದುಡಿಯುವ ವರ್ಗದ ಪ್ರಬಲ ಆಂದೋಲನವನ್ನು ಕಟ್ಟಿ ಬೆಳೆಸುವ ಸಲುವಾಗಿ ಕಾರ್ಯಕರ್ತರನ್ನು ಸೈದ್ಧಾಂತಿಕವಾಗಿ, ಸಂಘಟನಾತ್ಮಕವಾಗಿ ತರಬೇತುಗೊಳಿಸುವ ಉದ್ದೇಶದಿಂದ 100 ಪ್ರಮುಖ ಕಾರ್ಯಕರ್ತರಿಗೆ 5 ದಿನಗಳ ರಾಜ್ಯ ಮಟ್ಟದ ತರಬೇತಿ ಶಿಬಿರವೊಂದನ್ನು ಸಂಘಟಿಸಲಾಗಿತ್ತು. ಜುಲೈ 18 ರಿದ 25 ರ ವರೆಗೆ ಹೊಸಪೇಟೆಯಲ್ಲಿ ನಡೆದ ಈ ಕಾಂತರ್ಾಗಾರದಲ್ಲಿ ಪಕ್ಷದ ಪೊಲಿಟ್‌ಬ್ಯೂರೋ ಸದಸ್ಯರಾದ ಕಾಂ। ಸೀತಾರಾಂ ಯೆಚೂರಿ, ಕೇಂದ್ರ ಸಮಿತಿ ಸದಸ್ಯರಾದ ಕಾಂ। ಕೆ. ವರದರಾಜನ್, ರಾಜ್ಯ ಕಾರ್ಯದರ್ಶಿ ಕಾಂ। ಜಿ.ಎನ್. ನಾಗರಾಜ್ ಮತ್ತು ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ। ನಿತ್ಯಾನಂದ ಸ್ವಾಮಿ ವಿವಿಧ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು.

ಶಿಬಿರದ ಮೂರನೇ ದಿನ ಬೆಳಿಗ್ಗೆ ಗೋಡೆಗೆ ಅಂಟಿಸಲಾಗಿದ್ದ 2 ಪುಟಗಳ "ನಗಾರಿ" ಪತ್ರಿಕೆ ಎಲ್ಲರ ಗಮನ ಸೆಳೆಯಿತು. ವರ್ಣ ರಂಜಿತವಾದ, ಕೈ ಬರಹದಿಂದ ಕೂಡಿದ ಈ ಪತ್ರಿಕೆಯಲ್ಲಿ ಹಿಂದಿನ ದಿನ ನಡೆದ ಪಾಠದ ಪ್ರಮುಖ ಅಂಶಗಳು ಮತ್ತು ಹಿಂದಿನ ದಿನದ ಎಲ್ಲ ಕಲಾಪಗಳ ಸಂಕ್ಷಿಪ್ತ ವಿವರಣೆ ಇರುತ್ತಿತ್ತು. ಇದರೊಂದಿಗೆ ನಾಳಿನ ಕಾರ್ಯಕ್ರಮ, ಶಿಬಿರಕ್ಕೆ ಬಂದಿರುವ ಹಿರಿಯ ಸಂಗಾತಿಗಳ ಸಂದರ್ಶನ, ಕಲ್ಪಿತ ಸಂದರ್ಶನ, ಹಾಸ್ಯ, ಕವನಗಳು, ಚುಟುಕುಗಳು, ಈ ರೀತಿಯ ಅನೇಕ ಅಂಶಗಳಿದ್ದವು. ಬಹುತೇಕ ಚುಟುಕುಗಳು ಹಾಗೂ ವರದಿಗಳು ಹಾಸ್ಯಮಯವಾಗಿದ್ದವು.

ಗಂಭೀರ ವಿಷಯಗಳ ಬಗ್ಗೆ ಪಾಠ ಕೇಳಿ ಚರ್ಚೆ ನಡೆಸಿ ದಣಿದ ಶಿಬಿರಾರ್ಥಿಗಳಿಗೆ ಪತ್ರಿಕೆ ಒಂದು ರೀತಿಯ ಮನರಂಜನೆಯಂತಿತ್ತು. ಊಟ, ಉಪಹಾರ, ಕಾಫಿ ವಿರಾಮ ಘೋಷಿಸಿದ ಕೂಡಲೇ ಶಿಬಿರಾರ್ಥಿಗಳು ಪತ್ರಿಕೆಯ ಮುಂದೆ ನೆರೆಯುತ್ತಿದ್ದುದು ಪತ್ರಿಕೆಯ ಜನಪ್ರಿಯತೆಯನ್ನು ಎತ್ತಿ ತೋರುತ್ತಿತ್ತು. ಶಿಬಿರದ ನಾಲ್ಕನೇ ದಿನದ ಮುಂಜಾನೆಯೂ 3 ಪುಟಗಳ ನಗಾರಿ ಪತ್ರಿಕೆಯನ್ನು ಹೊರತರಲಾಗಿತ್ತು. ಸುದ್ದಿಗಳು ಹೆಚ್ಚಿದ ಕಾರಣದಿಂದಾಗಿ 2 ರಿಂದ 3 ಪುಟಗಳಿಗೆ ಹೆಚ್ಚಿಸಲಾಗಿತ್ತು. ಈ ಪತ್ರಿಕೆ ತರಲು 10–15ಜನರ ಸಂಪಾದಕ ಮಂಡಳಿ ರಾತ್ರಿ ಊಟದ ನಂತರ ಸುಮಾರು 12 ಇಸ್ನೊಮ್ಮೆ 3 ಗಂಟೆಯವರೆಗೂ ಕಾರ್ಯನಿರ್ವಹಿಸಿತ್ತು.

...... ಸಾಮ್ರಾಜ್ಯಶಾಹಿಗೆ ಧಿಕ್ಕಾರ !

ಟ 6 ರಿಂದ

ಮ್ರಾಜ್ಯಶಾಹಿ ತುಂಬಿರುವ ಸಂಕಟ

ಅಮೆರಿಕಾ ಸಾಮ್ರಾಜ್ಯಶಾಹಿ ನಮ್ಮ ಮಾಜದೊಳಗೆ ತ್ವರಿತವಾಗಿ ನುಸುಳುತ್ತಿದೆ. ನಮ್ಮ ರು, ಗ್ರಾಮೀಣ ಜನತೆ ಅನುಭವಿಸುತ್ತಿರುವ ವ್ರ ಕೃಷಿ ಸಂಕಟಗಳು ನೇರವಾಗಿ ಸರಕಾರದ ಮ್ರಾಜ್ಯಶಾಹಿ-ಪರ ನೀತಿಗಳ ದುಷ್ಫಲ. ತ್ತಿರುವ ನಿರುದ್ಯೋಗ ಕೂಡ ಸಾರ್ವಜನಿಕ ಲಯವನ್ನು ಕಳಚಿ ಹಾಕುತ್ತಿರುವುದರ, ರ್ವಜನಿಕ ಹೂಡಿಕೆಯಲ್ಲಿ ದೊಡ್ಡ ಕಡಿತದ ಷ್ಫಲ. ಅಮೇರಿಕನ್ ಸಾಮ್ರಾಜ್ಯಶಾಹಿ ಸುಳಿದ, ಅವರಿಂದ ಪ್ರಭಾವಿತವಾಗದ ಯಾವ ಮಾಜಿಕ ವಲಯವೂ ಇಲ್ಲ ಎಂದೇ ಬಹುದು.

ಶಿಕ್ಷಣ ರಂಗವೂ ಖಾಸಗೀಕರಣ ಮತ್ತು ಜಿಜ್ಯೀಕರಣವಾಗಿ ದೊಡ್ಡ ಧಾಳಿಯನ್ನು ರಿಸುತ್ತಿದೆ. ದೇಶದಲ್ಲಿ ವಿದೇಶಿ ವಿದ್ಯಾಲಯಗಳನ್ನು ರಕ್ಷಣಾ ಸಂಸ್ಥೆಗಳನ್ನು ಸಲು ನಮ್ಮ ಸರಕಾರ ಕೆಲಸ ಮಾಡುತ್ತಿದೆ. ಈ ಸಂಸ್ಥೆಗಳು ಭಾರೀ ಶುಲ್ಕಗಳನ್ನು ವಸೂಲಿಮಾಡಿ ವಿದೇಶೀ ಡಿಗ್ರಿಗಳನ್ನು ಹಂಚಲಿವೆ. ಶಿಕ್ಷಣ, ಆರೋಗ್ಯ, ವಿದ್ಯುತ್, ಸಾರಿಗೆ ಇತ್ಯಾದಿ ಸಾರ್ವಜನಿಕ ಸೇವೆಗಳ ಖಾಸಗೀಕರಣ ಅಮೆರಿಕಾದ ನೇರ ಒತ್ತಡದಿಂದಲೇ ನಡೆಯುತ್ತಿವೆ. ಐ.ಎಂ.ಎಫ್. ವಿಶ್ವಬ್ಯಾಂಕ್ ಮೂಲಕ ಅದು ಈ ಕೆಲಸ ಮಾಡುತ್ತಿದೆ. ಆಗಲೇ ವಾಜಪೇಯಿ ಸರಕಾರ ಇಲೆಕ್ಟಾನಿಕ್ಸ್ ಮತ್ತು ಮುದ್ರಣ ಮಾಧ್ಯಮದೊಳಗೆ ದೊಡ್ಡ ಬಂಡವಾಳಶಾಹಿ ವಿದೇಶಿ ಮಾಧ್ಯಮಕ್ಕೆ ಪ್ರವೇಶ ಒದಗಿಸಿದೆ. ವಿಶ್ವ ವ್ಯಾಪಾರ ಸಂಘಟನೆಯ ಜಿ.ಎ.ಟಿ.ಎಸ್. ನಡೆ (ವ್ಯಾಪಾರ ಸೇವೆಗಳನ್ನು ಕುರಿತ ಸಾರ್ವತ್ರಿಕ ಒಪ್ಪಂದ) ಸೇವಾವಲಯವನ್ನು ತೆರೆದಿಡುವ ಬೆದರಿಕೆ ಬರುತ್ತಿದೆ.


ಆದ್ದರಿಂದ ಸಾಮ್ರಾಜ್ಯಶಾಹಿಯ ಪ್ರಭಾವದ ವಿರುದ್ಧ, ಭಾರತವನ್ನು ತನ್ನ ಜಾಗತೀಕ ಹುನ್ನಾರಗಳಲ್ಲಿ ಒಳಗೊಳ್ಳುವ ಅಮೆರಿಕನ್ ಪ್ರಯತ್ನಗಳ ವಿರುದ್ಧ ಹೋರಾಟ ನಡೆಸುವುದು ಅತ್ಯಗತ್ಯ.

ಸಾಮ್ರಾಜ್ಯಶಾಹಿ - ವಿರೋಧಿ ಆಂದೋಲನದ ಬಗ್ಗೆ, ಮುಖ್ಯವಾಗಿ ಸಿಪಿಐ(ಎಂ) ಮತ್ತು ಎಡ ಶಕ್ತಿಗಳಷ್ಟೇ ಕಾಳಜಿ ವಹಿಸಿವೆ. ಈಗ ಸಾಮ್ರಾಜ್ಯಶಾಹಿ ಪರ ಆರ್ಥಿಕ ಧೋರಣೆಗಳಿಂದ ಸಂಕಟಕ್ಕೆ ಈಡಾಗಿರುವ ಎಲ್ಲಾ ಜನವಿಭಾಗಗಳನ್ನು ಮತ್ತು ನಮ್ಮ ಆರ್ಥಿಕ ಸಾರ್ವಭೌಮತೆ ಹಾಗೂ ಸ್ವಾತಂತ್ರ ನಿರ್ಣಯ ಸಾಮರ್ಥ್ಯ ಮೊಟಕುಗೊಳ್ಳುತ್ತಿರುವುದನ್ನು ಕಂಡು ಕಳವಳಕ್ಕೀಡಾಗಿರುವ ದೇಶಪ್ರೇಮಿ ಶಕ್ತಿಗಳನ್ನು ಈ ಆಂದೋಲನದೊಳಗೆ ಆಕರ್ಷಿಸಿ ಈ ಆಂದೋಲನವನ್ನು ವಿಸ್ತಾರಗೊಳಿಸಬೇಕು.


ಸಿಪಿಐ(ಎಂ) ಕೇಂದ್ರ ಸಮಿತಿ ಕರೆನೀಡಿರುವ ಮುಂಬರುವ ಆಗಸ್ಟ್ ಚಳುವಳಿಯಲ್ಲಿ ಎಲ್ಲಾ ಸಾಮ್ರಾಜ್ಯಶಾಹಿ ವಿರೋಧಿ ಪ್ರಶ್ನೆಗಳನ್ನು ಜನರ ಬಳಿಗೆ ಒಯ್ಯಬೇಕು. ನಾವು ಈ ಕೆಳಗಿನ ಬೇಡಿಕೆಗಳನ್ನಿಡಬೇಕು.

1. ವಾಜಪೇಯಿ ಸರಕಾರ ತನ್ನ ಸಾಮ್ರಾಜ್ಯಶಾಹಿ - ಪರ ನಿಲುವು ಬಿಟ್ಟು ಒಂದು ಅಲಿಪ್ತ ಮತ್ತು ಸ್ವತಂತ್ರ, ವಿದೇಶಾಂಗ ಧೋರಣೆಯನ್ನು ಅಂಗೀಕರಿಸಬೇಕು. ಇದಕ್ಕೆ ಮೊತ್ತಮೊದಲು ಅಮೇರಿಕಾದೊಂದಿಗೆ ಹೊಂದಿರುವ ಎಲ್ಲಾ ಸಾಮರಿಕ ಮಿಲಿಟರಿ ಸಹಕಾರಗಳನ್ನು ಕೊನೆಗೊಳಿಸಬೇಕು.
2. ಇರಾಕ್ ಅಮೆರಿಕನ್ ವಶದಲ್ಲಿ ಇರುವವರೆಗೆ, ಅಲ್ಲಿ ಒಂದು ಕೈಗೊಂಬೆ ಆಡಳಿತ ಇರುವವರೆಗೆ ಅಲ್ಲಿಗೆ ಭಾರತದ ಸೇನಾ ಪಡೆಗಳನ್ನು ಕಳಿಸುವ ಪ್ರಶ್ನೆಯೇ ಏಳಬಾರದು.
3. ಒಂದು ಸ್ವತಂತ್ರ ವಿದೇಶಾಂಗ ದೋರಣೆಯನ್ನು ಅನುಸರಿಸುವಲ್ಲಿ ರಶ್ಯಾ, ಚೀನಾ, ಜಪಾನ್, ಫ್ರಾನ್ಸ್, ಜರ್ಮನಿ ಮತ್ತು ಯೂರೋಪಿಯನ್ ಸಂಘದಂತಹ ಎಲ್ಲಾ ಪ್ರಮುಖ ದೇಶಗಳೊಂದಿಗೆ ನಿಕಟ ಸಂಬಂಧಗಳನ್ನು ಬೆಳೆಸಬೇಕು.
4. ಪ್ಯಾಲೆಸ್ಟೇನ್ ಜನತೆಯನ್ನು ದಮನ ಮಾಡುವ, ಅರಬ್ ಪ್ರದೇಶಗಳನ್ನು ಆಕ್ರಮಿಸಿಕೊಂಡಿರುವ ಇಸ್ರೇಲ್‌ನೊಂದಿಗೆ ಯಾವುದೇ ಸಾಮರಿಕ ಸಂಬಂಧ ಇರಬಾರದು. ಇಸ್ರೇಲಿ ಪ್ರಧಾನ ಮಂತ್ರಿ ಅರಿಯಲ್ ಶರೋನ್ ಈ ಆಕ್ರಮಣಕಾರೀ ನೀತಿಗಳನ್ನು ಪ್ರತಿನಿಧಿಸುವುದರಿಂದ ಆತನಿಗೆ ಭಾರತದಲ್ಲಿ ಸ್ವಾಗತವಿಲ್ಲ.

ಆರ್ಥಿಕ, ಸೇವಾವಲಯವನ್ನು ತೆರೆಯುವುದು, ಶಿಕ್ಷಣ, ಮಾಧ್ಯಮ ಇರಾನಿಗಳಿಗೆ ಸಂಬಂಧಪಟ್ಟ ದೋರಣೆಗಳಲ್ಲಿ ಅಮೆರಿಕನ್ ಒತ್ತಡಗಳಿಗೆ ಅತ್ಯಂತ ವ್ಯಾಪಕ ಪ್ರತಿರೋಧವನ್ನು ಕಟ್ಟಲು ನಾವು ಕರೆನೀಡಬೇಕು. ○



ಬೆಳಗ್ಗೆ ಶಾಲೆಗೆ ಹೋಗುವ ಮಕ್ಕಳು ಗಂಜಿಯುಂಡು ಶಾಲೆಗೆ ಹೋದರೆ ಮಧ್ಯಾಹ್ನ ಕೇವಲ ನೀರು ಕುಡಿದು ಹಸಿವು ಇಂಗಿಸಿಕೊಳ್ಳುವ ಮಕ್ಕಳು, ಶಾಲೆ ಬಿಟ್ಟರೂ ಬಿಡದ ಮಳೆ, ಮಳೆಯಲ್ಲಿ ನೆನೆದು ಮನೆ ಸೇರಿ 'ಗಂಜಿ ಇಕ್ಕಿ' ಎಂದ ಕಥೆಯ ನಾಯಕ, ಇಲ್ಲವೆಂದು ಹೇಳಿದ ಮೀನಾಕ್ಷಕ್ಕ, ಅವಳ ಬಗೆಗಿನ ಅಭಿಪ್ರಾಯ ಈ ಬಗ್ಗೆ ಓದಿರುವಿರಿ. ಮುಂದೆ....



'ಉಣ್ಣಿ ನೀನು ಆ ಚೆಟ್ಟಿಯಾರರ ಮನೆಗೆ ಹೋಗಿ ಒಂದಾಣೆಗೆ ಹಪ್ಪಳ ತೆಗೆದುಕೊಂಡು ಬಾ. ... ನಾನು ನಾಳೆ ಕೊಟ್ಟು ಕಳುಹಿಸುತ್ತೇನೆಂದು ಹೇಳು. ಹೋಗುವಾಗ ಆ ಕಣಕ್ಕರಾಯಿ ಹುಡುಗನಲ್ಲಿ ... ಓಡಿ ಬರಲು ಹೇಳು. ಮೀನಾಕ್ಷಿ ಮರದಲ್ಲಿರುವ ಕಾಯಿಗಳಲ್ಲಿ ನೋಡಿ ಬಲಿದುದೊಂದನ್ನು ಕೊಯಿಸು.... ತೆಂಗಿನಕಾಯಿ ಚಟ್ನಿ ಮಾಡಬೇಕು. ಬರೇ ಬಾಳೆಗಡ್ಡೆಯ ಪಲ್ಯ ಮಾತ್ರ ಮಾಡಿ ಅಂಡತ್ತೋಡಿನವರಿಗೆ ಬಡಿಸುವುದಾದರೂ ಹೇಗೆ?ಕಲ್ಯಾಣಿಯ ಮನೆಯಿಂದ ಒಂದು ಚೂರು ತೆಂಗಿನ ಎಣ್ಣೆ ಕೊಡಲು ಹೇಳು.

ಹಲವು ಆದೇಶಗಳನ್ನು, ಹಲವು ಸೂಚನೆಗಳನ್ನು ಕೊಟ್ಟು ಅಮ್ಮ ಮತ್ತೆ ಚಾವಡಿಗೆ ಹೋಗುವಾಗ ಹಿಂತಿರುಗಿ ಮತ್ತೆ ನೆನಪಿಸಿದಳು.

'ಹಪ್ಪಳ ತುಂಡು ಮಾಡಿ ಕಾಯಿಸಬೇಡ. ಇಡಿಯಾಗಿ ಕಾಯಿಸಿದರೆ ಸಾಕು. ಹಾಗೆ ಮಾಡುವುದು ನಾಚಿಕೆ'.

ಅಡ್ಡಾಗರದಲ್ಲಿ ತುಂಬಿಟ್ಟ ದುರ್ಗಂಧದ ಆವಿಯಾಡುವ ಹಳದಿ ಬಣ್ಣದ ಗೇಣೀರನ್ನು ನೋಡಿಕೊಂಡು ನಾನು ನಿಂತೆ.

ನಾನು ಊಟ ಮಾಡಲಿಲ್ಲವೆಂಬ ವಿಷಯ ಮೀನಾಕ್ಷಕ್ಕನಿಗೆ ನೆನಪಿಲ್ಲವೆ? ಬಾಯಾರಿಕೆಯಾಗುತ್ತಿದೆಯೆಂದು ಹೇಳಿದರೋ? ಹಸಿವಾಗುತ್ತಿದೆ ಎಂದು ಹೇಳಲು ಸ್ವಾಭಿಮಾನ ಬಿಡುವುದಿಲ್ಲ.

ಚೆಟ್ಟಿಯಾರರ ಮನೆಯತ್ತ ನಡೆಯುವಾಗ ನೆನೆದುಕೊಂಡೆ. ಶಂಕುಣ್ಣಿಯಣ್ಣ ಬಂದದ್ದು ಒಳ್ಳೆಯದೇ ಆಯಿತು. ಹಪ್ಪಳ ಚಟ್ನಿ ಇರುತ್ತದೆ. ಹಪ್ಪಳ ಕರಿದ ಕೊಬ್ಬರಿ ಎಣ್ಣೆಯನ್ನು ಅನ್ನಕ್ಕೆ ಹಾಕಿ ಸ್ವಲ್ಪ ಉಪ್ಪು ಬೆರೆಸಿಕೊಂಡಾಗಿನ ರುಚಿಯನ್ನು ನೆನೆದಾಗಲೇ ಬಾಯಲ್ಲಿ ನೀರೂರಿತ್ತು. ಮೀನಾಕ್ಷ್ಯಕ್ಕನಲ್ಲಿ ಗುಟ್ಟಾಗಿ ಸ್ವಲ್ಪ ಕೊಬ್ಬರಿ ಎಣ್ಣೆ ಕೇಳಿ ಪಡೆಯಬೇಕು.

ಹಪ್ಪಳ ಪಡೆದು ಹಿಂತಿರುಗಿ ಬರುವಾಗ ತೆಂಕಣ ಮನೆಯ ಬೇಲಿಯ ಸಮೀಪವಿರುವ ಕಸಿಮಾವಿನ ಮರದ ಬುಡದಲ್ಲಿ ಒಂದು ಮಾವಿನ ಹಣ್ಣು ಬಿದ್ದಿದ್ದನ್ನು ನೋಡಿದೆ. ಓಡಿ ಹೋಗಿ ಹೆಕ್ಕಿ ನೋಡಿದರೆ ಒಂದು ಭಾಗದ ಸಿಪ್ಪೆ ಮಾತ್ರವೇ ಉಳಿದಿತ್ತು. ಒಳಗಿನದನ್ನೆಲ್ಲ ಕಾಗೆ ಕುಕ್ಕಿ ತಿಂದುಬಿಟ್ಟಿದೆ.



ಮರಳಿ ಬಂದಾಗ ಶಂಕುಣ್ಣಿಯಣ್ಣ ಅಂಗಿ ಕಳಚಿ ಮಡಿಚಿ ಅಟ್ಟಳಿಕೆಯಲ್ಲಿ ಇಟ್ಟಿದ್ದಾನೆ. ಅಮ್ಮ ಕುಳಿತು ಮಾತನಾಡುತ್ತಿದ್ದರು.

'ಮಾಡಿಗೆ ಹಂಚು ಹೊದಿಸುವುದಕ್ಕೆ ಮಳೆಗಾಲ ಕಳೆಯಬೇಕು. ಅದಕ್ಕಾಗಿ ಎರಡು ಹಲಸಿನ ಮರಗಳನ್ನು ನೋಡಿ ಇಡಲಾಗಿದೆ. ನಾಲ್ಕು ವರ್ಷ ಮಡಲು ಹೊದಿಸಲು ಖರ್ಚು ಮಾಡುವ ಹಣವೇ ಸಾಕಲ್ಲ ಹಂಚು ಹೊದಿಸಲು. ಗೋವಿಂದಕುಟ್ಟಿ ಯಾವಾಗಲೂ ಬರೆಯುತ್ತಿರುತ್ತಾನೆ'.

ಅಪ್ಪನದು ಹೊಸದಾಗಿ ಕಟ್ಟಿಸಿದ ಹಂಚಿನ ದೊಡ್ಡಮನೆ. ಅದನ್ನು ಗಮನದಲ್ಲಿಟ್ಟುಕೊಂಡೇ ಅಮ್ಮ ಹೇಳುತ್ತಿರಬಹುದು.

'ಈ ಮನೆ ಹೊರಗಿನಿಂದ ಕಾಣುವ ಹಾಗಲ್ಲ. ಒಳಗೆ ಎಷ್ಟು ಜಾಗ! ನೋಡಿದ ಹಾಗಲ್ಲ ಇರುವುದು. ಗುಡಿಸಿ ಸಾರಿಸುವುದಕ್ಕೆ ಒಬ್ಬರು ಜನ ಬೇಕು. ಆ ಮೀನಾಕ್ಷಿ ಇರುವುದರಿಂದ ಗೆದ್ದಲು, ಜೇಡರ ಬಲೆ ಮಾಯವಾಗುತ್ತದೆ. ನನ್ನಿಂದಾದೀತ ಇದನ್ನೆಲ್ಲಾ ಮಾಡಿ ಪೂರೈಸುವುದು?'

ಶಂಕುಣ್ಣಿಯಣ್ಣ ಹೆಣ್ಣಿನ ದನಿಯಲ್ಲಿ ಹೂಂಗುಟ್ಟುತ್ತಿದ್ದಾರೆ.

ಅಣ್ಣನ ನೌಕರಿ. ಅಪ್ಪ ತಿಂಗಳು ತಿಂಗಳು ಕಳಿಸುವ ಮನಿಯಾರ್ಡರ್, ಉಣ್ಣಿಯ (ನನ್ನ) ಬುದ್ಧಿ ಶಕ್ತಿ. ಮಾಡಿಗೆ ಮಡಲು ಹೊದಿಸುವ ದಿವಸ ಮಾಡುವ ಊಟದ ಖರ್ಚು ಹೀಗೆ ಅಮ್ಮ ಹಲವನ್ನೂ ಹೇಳುತ್ತಿದ್ದಾರೆ.

ಹೊರಗೆ ಆಕಾಶ ಮತ್ತೂ ಕಪ್ಪಾಗುತ್ತಿದೆ. ಬೇಗನೆ ಕತ್ತಲಾಯಿತು.

'ಶಂಕುಣ್ಣಿ ಮೀಯಬೇಡವೇ?'

'ಮೀಯ್ಬೇಕು'

'ಉಣ್ಣೀ ಆ ಬೈರಾಸನ್ನು ಮತ್ತು ಪಾತದ ಹೊಸ ಮಡಕೆಯಲ್ಲಿರುವ ಸ್ವಲ್ಪ ಬಾಗೇಪುಡಿ ತೆಗೆದುಕೊಂಡು ಬರಲು ಮೀನಾಕ್ಷಿಗೆ ಹೇಳು. ತಟ್ಟೆಯಲ್ಲಿ ಸ್ವಲ್ಪ ಎಳ್ಳೆಣ್ಣೆಯನ್ನು ತೆಗೆದುಕೊಂಡುಬಂದು ಕೊಡು. ತೆಂಕೋಣೆಯ ಭರಣಿಯಲ್ಲಿದ್ದೀತು.'

ಒಳಗೆ ಬಡಕ್ಕೋಣೆಯಲ್ಲಿ ಚಿಕ್ಕಮ್ಮ ಹಾಸಿಗೆ ಹಾಸುತ್ತಿದ್ದಾಳೆ. ಚಿಕ್ಕಮ್ಮ ಎಲ್ಲಾ ಹೊತ್ತಿಗೂ ಮಲಗುತ್ತಿರುತ್ತಾಳೆ. ಮೈಮೇಲೆಲ್ಲ ಯಾವಾಗಲೂ ಮೆಣಸು ಅರೆದು ಹಚ್ಚಿದಂತೆ ಬೆಂಕಿ ಬರುತ್ತಿರುತ್ತದಲ್ಲ. ಸಂಜೆಯಾದರೆ ಹಾಸಿಗೆ ಕೊಡುವುತ್ತಾಳೆ.

ಅಜ್ಜಿ ಮಲಗುವ ಕೋಣೆಯಲ್ಲಿ ಕತ್ತಲೆ. ಆ ಮಂಚದಡಿಯಲ್ಲಿ ಎಣ್ಣೆ ಭರಣಿ.

'ಏನು ನೋಡುತ್ತಿದ್ದೀ?'

'ಎಣ್ಣೆ'

'ಯಾರಿಗೆ?'

'ಆ ಶಂಕುಣ್ಣಿಯಣ್ಣ ಬಂದಿದ್ದಾರಲ್ಲ. ಅಂಡತ್ತೋಡಿನಿಂದ.'

'ಅಂಡತ್ತೋಡಿನಿಂದಲೋ'

ಅಜ್ಜಿಯ ಉದ್ಗಾರದಲ್ಲಿ ಆದರವಿತ್ತು.

ಅಂಡತ್ತೋಡಿನಿಂದ ಒಬ್ಬ ಬರುವುದು ಎಂದರೆ ಸಣ್ಣ ಸಂಗತಿಯಲ್ಲ. ಅಪ್ಪನ ಮನೆಗೆ ಸಂಬಂಧಿಸಿದ ಯಾರನ್ನೇ ಆದರೂ ಅಂಡತ್ತೋಡಿನವರು ಎಂದೇ ಹೇಳುವುದು.

ಭರಣಿಯ ಮುಚ್ಚಳ ಬಟ್ಟೆ ಸುತ್ತಿ ಮುಚ್ಚಿಡಲಾಗಿದೆ. ಇರುವೆ ಹತ್ತದಿರುವಂತೆ ಸೀಮೆಎಣ್ಣೆಯಲ್ಲಿ ಒದ್ದೆ ಮಾಡಿದ ಬಟ್ಟೆಯನ್ನು ಭರಣಿಯ ಕೊರಳಿಗೆ ಸುತ್ತಲಾಗಿದೆ. ಭರಣಿಯನ್ನು ತೆಗೆದು ಬಾಗಿಲಿಗೆ ಹತ್ತಿರ ಬೆಳಕಿಗೆ ತಂದಿಟ್ಟು ತೆರೆದು ನೋಡಿದೆ. ತಳದಲ್ಲಿ ಸ್ವಲ್ಪ ಮಾತ್ರ ಎಣ್ಣೆಯಿತ್ತು.

ತಿಂಗಳಿಗೊಮ್ಮೆ ಎಣ್ಣೆತರುವ ಮಾಪಿಳ್ಳೆ ಬಂದಾಗ ಪಾವು ಎಣ್ಣೆ ತೆಗೆದಿಡುವುದು ಪದ್ಧತಿ. ಆದಿತ್ಯವಾರದ ಎಣ್ಣೆಸ್ನಾನಕ್ಕೆಂದು ಒಂದು ಸಣ್ಣ ಬಟ್ಟಲಲ್ಲಿ ಚೂರು ಎಣ್ಣೆ ನನಗೆ ಕೊಡುತ್ತಾನೆ. ಅದರಲ್ಲಿ ಒಂದು ಬಿಂದನ್ನು ಹಾಳುಮಾಡದೇ ಮೈಗೆ ತಿಕ್ಕಬೇಕು. ಅಮ್ಮನಿಗೆ ಕೊಬ್ಬರಿ ಎಣ್ಣೆ ತಲೆಗೆ ಹಾಕಿದರ ಆಗುವುದಿಲ್ಲ. ಅದರಿಂದಾಗಿ ಎಳ್ಳೆಣ್ಣೆ ತೆಗೆಯುವುದು ಪಾವೆಣ್ಣೆ ಒಂದು ತಿಂಗಳಿಗೆ ಬರುತ್ತದೆ.

ಪುಟ್ಟ ಕಂಚಿನ ಬಟ್ಟಲಿಗೆ ಎಣ್ಣೆ ಸುರಿದಾಗ ಹೆಚ್ಚಾದೀತೆಂದು ತೋರಿತು. ಇನ್ನು ಕೇಡವೆ ಭರಣಿಯಕ್ಕಿ ಬಾಕಿ ಉಳಿದಿರುವುದು.

ಕಂಚಿನ ಪಾತ್ರೆಯೊಂದಿಗೆ ಚಾವಡಿಗ ಹೋದಾಗ ಅಮ್ಮನ ಕಣ್ಣುಗಳು ಅದರಲ್ಲಿ ನೆಟ್ಟವು ಆ ನೋಟ ಅಪರಾಧಿಯನ್ನು ದಿಟ್ಟಿಸುವಂತಿತ್ತು ಮೀನಾಕ್ಷ್ಯಕ್ಕ ತೆಗೆದುಕೊಂಡುಬಂದು ಕೊಟ್ಟ ಬೈರಾಸನ್ನು ಶಂಕುಣ್ಣಿಯಣ್ಣ ತಲೆಗೆ ಸುತ್ತಿ ದೊಡ ಪಂಚೆಯನ್ನು ಅಡ್ಡದ ಮೇಲಿಟ್ಟು ಮೈಗೆ ಎಣ ಸವರತೊಡಗಿದರು. ತಲೆಗೂ ಮೈಗೂ ಸಾಕ್ಷ ಎಣ್ಣೆ ಉಜ್ಜಿದ ಬಳಿಕ ಪಾತ್ರೆಯಲ್ಲಿ ಅರ್ಧದ ಬಾಕಿ ಉಳಿಯಿತು. ಅಮ್ಮನಿಗೆ ಬಹುಶಃ ನನ್ನ ಮೇ ಸಿಟ್ಟು ಬಂದಿರಬೇಕು.

ಕಾಗದದ ತುಂಡಿನಲ್ಲಿ ತಂದಿಟ್ಟ ಬಾಗೇಹು ತೆಗೆದಾಗ ಅದನ್ನು ಪಾತ್ರೆಯಲ್ಲಿ ಬಾಕಿ ಉಳಿದಿರು ಎಣ್ಣೆಯಲ್ಲಿ ಬೆರೆಸಿ ಶಂಕುಣ್ಣಿಯ ಮೀಯಬಹುದೆಂದು ನಾನು ಆಲೋಚಿಸಿರಲಿಲ ಎಣ್ಣೆಯಲ್ಲಿ ಬೆರೆಸಿದ ಬಾಗೇಪುಡಿಯನ್ನು ಒಂದ ಉಂಡೆಮಾಡಿ ಕೈಯಲ್ಲಿಟ್ಟು ಅಲುಗಾಡಿಸು ಶಂಕುಣ್ಣಿಯಣ್ಣ ಕೇಳಿದರು.

'ಉಣ್ಣಿ ಕರೆಯಿರುವುದು ಎಲ್ಲಿ?'

ಯಾಕೋ ದಾರಿ ತೋರಿಸಿಕೊಡಲು ಅ ಹೇಳಲಿಲ್ಲ.

ಅಂಗಳದ ತೆಂಕುಭಾಗದ ಕೊನೆಗೆ ಹೋ ಕೈತೋರಿಸಿ ಹೇಳಿದೆ.

'ಓ.... ಅಲ್ಲಿ ಇಳಿದರಾಯ್ತು'

ಮೀನಾಕ್ಷ್ಯಕ್ಕ ದೀಪ ಹಿಡಿದು ತೋರಿಸಿದರು

'ಉಣ್ಣಿ ತುಂಬ ಹಸಿದಿರಬಹುದು'.

ಮುಂದುವರಿಯುತ್ತ

'ಹ್ಯಾರಿ ಪೊಟ್ಟರ್'......

ಪುಟ 12 ರಿಂದ

ಪೈಪೋಟಿಯೇ ಕಥೆಯ ಸಾರ. ಆದರೆ ಕಥೆ ಹೇಳುವ ರೀತಿ, ಮಾಯಾ ಜಗತ್ತಿನಲ್ಲೂ ಪಾಟರ್‌ನ ಊರು ಮತ್ತು ಬೋರ್ಡಿಂಗ್ ಸ್ಕೂಲ್‌ಗಳಲ್ಲಿ ಬರುವ ಜೀವನಕ್ಕೆ ಹತ್ತಿರವಾದ ಸನ್ನಿವೇಶಗಳು ಇದನ್ನೊಂದು ಆಸಕ್ತಿಕಾರಕ ಕೃತಿಯನ್ನಾಗಿಸಿವೆ.

ಲೇಖಕಿ ಜೆ.ಕೆ. ರೌಲಿಂಗ್ ಸ್ವಂತ ಕಥೆಯೂ ಮಾಯಾ ಜಗತ್ತಿಗಿಂತ ಯಾವುದಕ್ಕೂ ಕಡಿಮೆ ಇಲ್ಲ. ಎಡಿಸ್‌ಬರೋದ ಕೊಳೆಗೇರಿಯಲ್ಲಿ ನಿರುದ್ಯೋಗ ಭತ್ಯೆಯಲ್ಲಿ ಜೀವನ ಮಾಡುತ್ತಾ, ಮನೆಯಲ್ಲಿ ಚಳಿ ಹೋಗಲಾಡಿಸುವ ಹೀಟಿಂಗ್ ಇಲ್ಲದೆ, ಪಕ್ಕದ ಕೆಫೆಯಲ್ಲಿ ಕೂತು ಬರೆದ ಕಥೆ ಇದು. ಆದರಿಂದ ಇದಕ್ಕೆ ಜೀವನಕ್ಕೆ ಹತ್ತಿರದ ಒಂದು ನೈಜತೆ ಬಂದಿದೆ. ದುರ್ಬರ ಪರಿಸ್ಥಿತಿಯಲ್ಲಿ ಆಶ್ಚರ್ಯ, ಅದ್ಭುತ ಮಾಯಾಲೋಕದ ಸೃಷ್ಟಿ ಸಾಧ್ಯವಾಗುತ್ತದೆಯೇನೋ?

ಸಕಾರಾತ್ಮಕ ಮೌಲ್ಯಗಳಿರುವ ಮಾಯಾಜಗತ್ತು

ಇದರಿಂದಾಗಿಯೇ ಏನೋ 'ಹ್ಯಾರಿ ಪಾಟರ್' ಎತ್ತಿ ಹಿಡಿಯುವ ಮೌಲ್ಯಗಳು (ಕಥೆಯ ಹಂದರದಲ್ಲಿ ಅವನ್ನು ನವಿರಾಗಿ ಪೋಣಿಸಲಾಗಿದೆ) ಸಕಾರಾತ್ಮಕವಾಗಿವೆ. ಕಥೆಯಲ್ಲಿ ಬರುವ ಬೋರ್ಡಿಂಗ್ ಸ್ಕೂಲಿನಲ್ಲಿ ಹುಡುಗ ಹುಡುಗಿಯರಿಗೆ ಪ್ರವೇಶ ಇದೆ. ಸ್ಕೂಲಿನಲ್ಲಿ ಎಲ್ಲಾ ಜನಾಂಗದ, ವರ್ಗದ ವಿದ್ಯಾರ್ಥಿಗಳಿದ್ದಾರೆ. ಹ್ಯಾರಿ ಪಾಟರ್‌ನ ಸಹಪಾಠಿಯೊಬ್ಬಳ ಹೆಸರು ಪಾರ್ವತಿ ಪಾಟೀಲ್! ಕಥೆಯಲ್ಲಿ ಬರುವ ರಾಕ್ಷಸಿ ವ್ಯಕ್ತಿಗಳು ಕಂಪನಿ ಡೈರೆಕ್ಟರುಗಳು, ಶ್ರೀಮಂತರು, ಭಾರಿ ಎಸ್ಟೇಟ್ ಮಾಲಿಕರು! ಒಳ್ಳೆಯವರೆಲ್ಲಾ ಮಧ್ಯಮ ಕೆಳವರ್ಗದ ಸುಸಂಸ್ಕೃತರು.. ರೌಲಿಂಗ್ ಎಡಪಂಥೀಯ ಸಾಮಾಜಿಕ ಪೂರ್ವಗ್ರಹದವಳು ಎಂದು ಹಲವು ಬಲಪಂಥೀಯ ಪತ್ರಿಕೆಗಳು ಹಳಿದಿವೆ. ಕ್ರಿಶ್ಚಿಯನ್ ಮೂಲಭೂತವಾದಿಗಳು ಇದು ಮಾಯ, ಮಾಟದಿಂದ ಹುಡುಗರ ತಲೆಕೆಡಿಸುತ್ತದೆ. ಪಾಟರ್‌ನನ್ನು ಸ್ಕೂಲ್, ಲೈಬ್ರರಿಗಳಿಂದ ಕಿತ್ತುಹಾಕಬೇಕೆಂದು ಗದ್ದಲ ಮಾಡುತ್ತಿದ್ದಾರೆ.

ಪುಸ್ತಕಗಳ ಲೋಕಕ್ಕೆ ಮರಳಿಸುವ ಮಾಯೆ

ಇಂಡಿಯಾದಲ್ಲೂ ಇದು ಮಾಯಾಮಂತ್ರದ ಮೂಢನಂಬಿಕೆಗಳಿಗೆ ಅಡಿಪಾಯ ಹಾಕುತ್ತದೋ ಎಂಬ ಅನುಮಾನ ವ್ಯಕ್ತವಾಗುತ್ತದೆ. ಆದರೆ ಕಥೆಯ ಸಾರ, ವ್ಯಕ್ತವಾಗುವ ಮೌಲ್ಯಗಳು ಇವನ್ನು ಬೆಂಬಲಿಸುವುದಿಲ್ಲ. ಹಾಗೆ ಯಾವ ಮಕ್ಕಳ ಸಾಹಿತ್ಯದಲ್ಲಿ ಮಾಯಾಲೋಕವಿಲ್ಲ. ಅಲ್ಲಾವುದ್ದೀನ್ ಅದ್ಭುತ ದ್ವೀಪ, ಮಾಟತಂತ್ರ, ಇವೆಲ್ಲಾ ಉತ್ತಮ ಮೌಲ್ಯಗಳಿರುವ ಮಾಯಾಲೋಕ ಸೃಷ್ಟಿಸುವುದಿಲ್ಲವೆ? ಮಾಯಾ ಲೋಕ ಮಕ್ಕಳ ಸಾಹಿತ್ಯದ ಅನಿವಾರ್ಯ ಅಂಗವಲ್ಲವೇ?

ವಿದೇಶಿ 'ಮಕ್ಕಳ ಸಾಹಿತ್ಯ'ದ ಆಕ್ರಮಣ ಭಾರತೀಯ ಭಾಷೆಗಳ ಮಕ್ಕಳ ಸಾಹಿತ್ಯವನ್ನು ಕುಂಠಿತಗೊಳಿಸುವುದಿಲ್ಲವೆ ಎಂಬ ಇನ್ನೊಂದು ಅನುಮಾನ ಮೂಡುವುದು ಸಹಜ. ಆದರ ಇದು ಮಕ್ಕಳ ಸಾಹಿತ್ಯ (ಅಥವಾ ದೊಡ್ಡವರ ಸಾಹಿತ್ಯಕ್ಕೂ) ಇರುವ ಪ್ರಮುಖ ಸವಾಲು ಬರುವ ಹವ್ಯಾಸವೇ ಬಿಟ್ಟು ಹೋಗುತ್ತಿರುವುದು. 'ಹ್ಯಾರಿ ಪಾಟರ್' ಕನಿಷ್ಟ ಅಮೆರಿಕ ಬ್ರಿಟನ್‌ಗಳಲ್ಲಿ ಮಕ್ಕಳಲ್ಲಿ ಓದುವ ಹವ್ಯಾಸ ಮತ್ತೊಮ್ಮೆ ಜೀವಂತಗೊಳಿಸಿದೆ. ಟಿವಿ, ಫಿಲಂ ವಿಡಿಯೋ ಗೇಮ್ಸ್‌ಗಳಿಂದ ಮಕ್ಕಳನ್ನು ಓದು ಲೋಕಕ್ಕೆ ತರುವ ಮೂಲಕ ಹ್ಯಾರಿ ಪಾಟರ್‌ ಪರಿಣಾಮ ಸಕಾರಾತ್ಮಕವಾದುದೆ ಎನ್ನಬಹುದು.

'ಹ್ಯಾರಿ ಪಾಟರ್' ಭಾರತೀಯ ಭಾಷೆಗಳಲ್ಲೂ ಬರಲಿದೆ. ಭಾರತೀಯ ಭಾಷೆಗಳಲ್ಲು ಮಕ್ಕಳನ್ನು ಪುಸ್ತಕದ ಲೋಕಕ್ಕೆ ಮರಳಿ ತರು ಮಾಯೆಯನ್ನು ಅದು ಪ್ರದರ್ಶಿಸಿತೇ?

WTO ನ 5ನೇ ವಾಣಿಜ್ಯ ಸಚಿವರ ಸಭೆ ಮೆಕ್ಸಿಕೊದ ಕ್ಯಾಂಕುನ್ ಎಂಬ ಪಟ್ಟಣದಲ್ಲಿ ಸೆಪ್ಟೆಂಬರ್‌ನಲ್ಲಿ ನಡೆಯಲಿದೆ. ಎಂದಿನಂತೆ ಶ್ರೀಮಂತ ದೇಶಗಳು ಬಡ ದೇಶಗಳನ್ನು ಇನ್ನಷ್ಟು ಹಿಂಡಿ ಹಿಪ್ಪೆ ಮಾಡಲು ಪ್ರಯತ್ನಿಸುತ್ತಿದ್ದಾರೆ. ಬಡ ದೇಶಗಳು ಅದಕ್ಕೆ ಪ್ರತಿರೋಧ ಒಡ್ಡಿವೆ. ಹಿಂದಿನ ದೋಹಾದ ಸಭೆ ಸೆಪ್ಟೆಂಬರ್ 11 ರ ಭಯಾನಕ ನೆರಳಿನಲ್ಲಿ ನಡೆದು, ಶ್ರೀಮಂತ ದೇಶಗಳ ಕೈ ಮೇಲಾಗಿತ್ತು. ಆದರೆ ಈಗ ಪರಿಸ್ಥಿತಿ ಪೂರ್ತಿ ಬದಲಾಗಿದೆ. ಜಾಗತೀಕರಣ-ವಿರೋಧಿ ಚಳುವಳಿ 'ಕ್ಯಾಂಕುನ್' ನಲ್ಲಿ WTO ಸಭೆ ಅಸ್ತವ್ಯಸ್ತಗೊಳಿಸಿ' ಎಂಬ ಘೋಷಣೆಯಡಿ ಕ್ಯಾಂಕುನ್ ದೋಹಾ ಆಗದಂತೆ ಪಣತೊಟ್ಟಿವೆ. ಕ್ಯಾಂಕುನ್ ಇನ್ನೊಂದು ಸಿಯಾಟಲ್ ಆಗುವ ಲಕ್ಷಣಗಳು ಹೆಚ್ಚಿವೆ. 1997 ರಲ್ಲಿ ಸಿಯಾಟಲ್‌ನಲ್ಲಿ ನಡೆದಿದ್ದ WTO ಸಭೆಯ ಸಂದರ್ಭದಲ್ಲಿ ಜಾಗತೀಕರಣ-ವಿರೋಧಿ ಚಳುವಳಿಯ ಹುಟ್ಟೂರು ಎಂದು ಭಾವಿಸಲಾಗಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ತಯಾರಿದ್ದರೆ, ಯುರೋಪಿಯನ್ ದೇಶಗಳು ಇವನ್ನು ಒಟ್ಟಾಗಿ ತೆಗೆದುಕೊಳ್ಳಬೇಕೆಂದು ಒತ್ತಡ ಹಾಕುತ್ತಿವೆ.

ಇದಲ್ಲದೆ ಕ್ಯಾಂಕುನ್ ಸಭೆಯಲ್ಲಿ ಹಲವು ವಿಷಯಗಳ ಬಗ್ಗೆ ಮೂಲಭೂತ ಚೌಕಟ್ಟು ಒಪ್ಪಂದ ಆಗಬೇಕು ಎಂದು ಮೂರನೇ ಜಗತ್ತಿನ ದೇಶಗಳ ಅಭಿಪ್ರಾಯ. ಆದರೆ ಶ್ರೀಮಂತ ದೇಶಗಳು ಮಾತುಕತೆಗಳು ಹೇಗೆ ನಡೆಯಬೇಕು? ಎಷ್ಟು ಸಭೆಗಳು ನಡೆಯಬೇಕು? ಮುಂತಾದವುಗಳ ಬಗ್ಗೆ ಕ್ಯಾಂಕುನ್‌ನಲ್ಲಿ ಚರ್ಚೆ ನಡೆದರೆ ಸಾಕು ಎಂದು ಹೇಳುತ್ತಿವೆ. ಬಡ ದೇಶಗಳಿಂದ 'ಬ್ಲಾಂಕ್ ಚೆಕ್' ಪಡೆದು ಸಣ್ಣ ಸಭೆಗಳಲ್ಲಿ ತಮ್ಮ ನೀತಿ ಹೇರುವ ಹುನ್ನಾರ ಅವರದ್ದು.

ಈಗಿರುವ ಒಪ್ಪಂದದ ಜಾರಿಯಲ್ಲಿ

ಜಾಗತೀಕರಣದ ಸುತ್ತು

ಶರತ್‌ಚಂದ್ರ

ಯುರೋಪಿಯನ್ ಒಕ್ಕೂಟ WTO ಒಪ್ಪಂದ ಉಲ್ಲಂಘಿಸಿದೆ. ಅದರ ವಿರುದ್ಧ ಕ್ರಮಕೈಗೊಳ್ಳುವುದಾಗಿ ಅಮೆರಿಕ ಬೆದರಿಸಿದೆ. ಇದಲ್ಲದೆ ಅಮೆರಿಕ ತನ್ನ ರೈತರಿಗೆ ಕೊಟ್ಟಿರುವ 100 ಶತಕೋಟಿ ಡಾಲರು ಸಬ್ಸಿಡಿ ಮತ್ತು ಉಕ್ಕು ಆಮದಿನ ಮೇಲೆ ಹೊರಿಸಿರುವ ಶೇಕಡಾ

ಕ್ಯಾಂಕುನ್ ಸಿಯಾಟಲ್ ಆಗಲಿ ! ದೋಹಾ ಆಗುವುದು ಬೇಡ!!

ಮುಂಬರುವ 5ನೇ WTO ವಾಣಿಜ್ಯ ಸಚಿವರ ಸಭೆಯ ಮುಂದೆ ಹಲವು ಮಹತ್ವದ ವಿಷಯಗಳು ಇವೆ. 90ರ ದಶಕದ ಜಾಗತೀಕರಣದ ನೀತಿಗಳು ಬಲಾಢ್ಯ ದೇಶಗಳ ಶ್ರೀಮಂತರಿಗೆ ಬಿಟ್ಟು ಯಾರಿಗೂ ಪ್ರಯೋಜನವಾಗಿಲ್ಲ. ಉಳಿದೆಲ್ಲರನ್ನೂ ಹಿಂಡಿ ಹಿಪ್ಪೆ ಮಾಡಿದೆ ಎಂಬುದು ಈಗ ನಿರ್ವಿವಾದಿತ ವಿಚಾರ. ಈ ಜನ-ವಿರೋಧಿ ಸಾಮ್ರಾಜ್ಯಶಾಹಿ ಜಾಗತೀಕರಣವನ್ನು ಜಗತ್ತಿನ ಜನತೆಯ ಕೊರಳಲ್ಲಿ ತುರುಕಿದ ಸಂಘಟನಾ ವ್ಯವಸ್ಥೆಯ ಅಂಗಗಳು ಐಎಂಎಫ್- ವಿಶ್ವಬ್ಯಾಂಕ್-WTO ಎಂಬುದೂ ಈ ಸರ್ವವಿದಿತ. WTO ನ ಮುಂಬರುವ ಸಭೆಯಲ್ಲಿ ಶ್ರೀಮಂತ ದೇಶಗಳು ಜಾಗತೀಕರಣವನ್ನು ಮುಂದಕ್ಕೆ ಒಯ್ಯಲು ಪ್ರಯತ್ನಿಸಿದರೆ, ಬಡ ದೇಶಗಳು ತೀವ್ರ ಪ್ರತಿರೋಧ ಒಡ್ಡಲಿವೆ.

ಕೃಷಿ ಸಬ್ಸಿಡಿ -ಆಮದು ಸುಂಕ


ತೀವ್ರ ಚರ್ಚೆಯಾಗಲಿರುವ ವಿಷಯಗಳಲ್ಲಿ ಪ್ರಮುಖವಾದದ್ದು ಕೃಷಿ ಸಂಬಂಧಿತ ಒಪ್ಪಂದ. WTO ನ ಕೃಷಿ ಒಪ್ಪಂದ ಸಮಿತಿಯ ಮುಖ್ಯಸ್ಥ ಹಾರ್ಬಿನ್‌ಸನ್ ತಯಾರಿಸಿದ ಕರಡು ಯಾರಿಗೂ ಒಪ್ಪಿಗೆಯಾಗುತ್ತಿಲ್ಲ. ಈ ಕರಡು ಎಲ್ಲಾ ದೇಶಗಳು ಕೃಷಿ ಆಮದು ಸುಂಕವನ್ನು ಇನ್ನಷ್ಟು ತೀವ್ರ ಕಡಿತ ಗೊಳಿಸಬೇಕೆಂದು ಪ್ರತಿಪಾದಿಸುತ್ತದೆ. ಅಮೆರಿಕ ಮತ್ತು ಕೃಷಿ-ರಫ್ತು ಹೊಂದಿರುವ ಮೂರನೇ ಜಗತ್ತಿನ ದೇಶಗಳ ಗುಂಪು ಇದು ಸಾಲದು ಎನ್ನುತ್ತಿದೆ. ಯುರೋಪಿಯನ್ ಒಕ್ಕೂಟ, ಜಪಾನ್ ಮತ್ತು ದೊಡ್ಡ ಸಂಖ್ಯೆಯಲ್ಲಿ ಬಡದೇಶಗಳು ಕಡಿತ ಬಹಳ ಹೆಚ್ಚು ಎಂದು ಆತಂಕಗೊಂಡಿವೆ.

ಪೇಟೆಂಟ್(ಟ್ರಿಪ್ಸ್) ಮತ್ತು ಸಾರ್ವಜನಿಕ ಆರೋಗ್ಯದ ಬಗ್ಗೆ ದೋಹಾ ಸಭೆಯಲ್ಲಿ ಸಾಧಿಸಿದ್ದ ಸ್ವಲ್ಪ ಮುನ್ನಡೆಯನ್ನು ಸಹ ಉಳಿಸಿಕೊಳ್ಳುವುದು ಸಾಧ್ಯವಾಗದಿರಬಹುದು. ದೋಹಾ ಹೇಳಿಕೆಯಲ್ಲಿ ವ್ಯಾಪಕವಾಗಿ ಸಾರ್ವಜನಿಕ ಆರೋಗ್ಯದ ಸಮಸ್ಯೆಗಳು ಬಂದಾಗ ಪೇಟೆಂಟನ್ನು ಮನ್ನಿಸದಿರಬಹುದು ಎಂಬ ಅಂಶವನ್ನು ಅಮೆರಿಕ ಈಗ ಒಪ್ಪಲು ತಯಾರಿಲ್ಲ. ಸಾರ್ವಜನಿಕ ಆರೋಗ್ಯದ 'ಬಿಕ್ಕಟ್ಟು' ತಲೆದೋರಿದಾಗ - ಅದರಲ್ಲೂ ಏಡ್ಸ್, ಮಲೇರಿಯಾ ಮತ್ತು ಕ್ಷಯ ರೋಗಗಳಿಗೆ ಮಾತ್ರ ಅದು ಅನ್ವಯವಾಗುತ್ತದೆ ಎಂಬ ತನ್ನದೇ ವಿವರಣೆ ಆರಂಭಿದೆ.

WTO ಡೈರೆಕ್ಟರ್ ಸಹ ಈ ವಿಷಯದ ಬಗ್ಗೆ ಭಿನ್ನಾಭಿಪ್ರಾಯ ತಲೆ ದೋರಿರುವುದಕ್ಕೆ ಭಾರತ ಮತ್ತು ಬ್ರೆಜಿಲ್‌ನ್ನು ದೂರಿದ್ದಾರಂತೆ! ದೋಹಾ ಹೇಳಿಕೆ ತಿರುಚುತ್ತಿರುವ ಅಮೆರಿಕವನ್ನಲ್ಲ.

ಹೊಸ ವಿಷಯಗಳು

ಬಂಡವಾಳ ಹೂಡಿಕೆ, ಪೈಪೋಟಿ ನೀತಿ, ಸರ್ಕಾರಿ ಖರೀದಿ ಮತ್ತು ವಾಣಿಜ್ಯ ಸವಲತ್ತುಗಳು-ವಿವಾದಿತ ಹೊಸ ವಿಷಯಗಳು. ಈಗ WTO ಅಳವಿಗೆ ಇನ್ನೂ ಒಳಗೊಳ್ಳದಿರುವ ವಿಷಯಗಳು. ಉಳಿದ ಈಗಿರುವ ವಿವಾದಗಳು ಬಗೆಹರಿಯದೆ ಈ ಹೊಸ ವಿಷಯಗಳನ್ನು ಕೈಗೆತ್ತಿಕೊಳ್ಳಲು ಬಡ ದೇಶಗಳು ತಯಾರಿಲ್ಲ. ಆದರೆ ಶ್ರೀಮಂತ ದೇಶಗಳು ಈ ವಿಷಯಗಳನ್ನು ಕೈಗೆತ್ತಿಕೊಳ್ಳಬೇಕೆಂದು ಪಟ್ಟು ಹಿಡಿದಿವೆ. ಅಮೆರಿಕ ಈ ನಾಲ್ಕು ವಿಷಯಗಳನ್ನು ಬೇರೆ ಬೇರೆಯಾಗಿ ಪರಿಶೀಲಿಸಲು



ವಿಶ್ವ ವಾಣಿಜ್ಯಸಂಸ್ಥೆ ಮುಖ್ಯಸ್ಥ ಸುಪಾಚಿ ಪನಿಚಪಕ್ಡಿ

ನ್ಯೂನ್ಯತೆಗಳ ಬಗ್ಗೆ ಚರ್ಚೆಯಾಗಿ ಅದನ್ನು ಸರಿಪಡಿಸಬೇಕು ಎಂಬುದು ಬಡ ದೇಶಗಳ ಒತ್ತಾಯ. ಶ್ರೀಮಂತ ದೇಶಗಳು ಬಡ ದೇಶಗಳಿಂದ ಆಮದಿನ ಮೇಲೆ WTO ಒಪ್ಪಂದವನ್ನು ಮೀರಿ ಹಾರುತ್ತಿರುವ ನಿರ್ಬಂಧಗಳು, ಹಾಗೆಯೇ ತಮ್ಮ ಸರಕುಗಳಿಗೆ ರಕ್ಷಣೆ ಒದಗಿಸಲು ಒಪ್ಪಂದವನ್ನು ತಿರುಚುತ್ತಿರುವುದು ವಿವರವಾಗಿ ಚರ್ಚೆಯಾಗ ಬೇಕೆಂದು ಬಡದೇಶಗಳು ಒತ್ತಡ ಹಾಕುತ್ತಿವೆ.

ಕ್ಯಾಂಕುನ್ ದೋಹಾ ಆಗಲಿಕ್ಕಿಲ್ಲ

ಹೀಗೆ ಎಲ್ಲಾ ವಿಷಯಗಳಲ್ಲೂ ತೀವ್ರ ಭಿನ್ನಾಭಿಪ್ರಾಯಗಳಿರುವುದರಿಂದ ಕ್ಯಾಂಕುನ್‌ನಲ್ಲಿ ಏನಾದರೂ ಒಪ್ಪಂದ ಆದೀತೆ ಎಂಬುದರ ಬಗ್ಗೆ ತೀವ್ರ ಸಂಶಯವಿದೆ. ಅಲ್ಲದೆ ಅಮೆರಿಕ ಮತ್ತುಯುರೋಪಿನ ನಡುವೆ ಎದ್ದಿರುವ ತೀವ್ರ ವಾಣಿಜ್ಯ ಭಿನ್ನಾಭಿಪ್ರಾಯಗಳಿಗೂ ಕಾರ್ಮೋಡಗಳಂತೆ ಕವಿದಿವೆ. ರಫ್ತುಗಾರರಿಗೆ ಅಮೆರಿಕ WTO ನಿಯಮಗಳನ್ನು ಉಲ್ಲಂಘಿಸಿ 2003 ಬಜೆಟ್‌ನಲ್ಲಿ ಆದಾಯ ತೆರಿಗೆಯಲ್ಲಿ ಕೊಟ್ಟಿರುವ ರಿಯಾಯಿತಿಗಳನ್ನು ಯುರೋಪು ತೀವ್ರವಾಗಿ ವಿರೋಧಿಸಿದೆ. WTO ಕಾನೂನು ಸಮಿತಿಯೊಂದು ಅದರ ನಿಯಮಗಳ ಉಲ್ಲಂಘನೆ ಎಂದು ಈಗಾಗಲೇ ತೀರ್ಪಿತ್ತಿದೆ. ಜೀವತಂತ್ರಜ್ಞಾನ ಬಳಸಿ ತಯಾರಿಸಿದ ಆಹಾರ ವಸ್ತುಗಳನ್ನು ನಿಷೇಧಿಸುವ ಮೂಲಕ

40 ಸುಂಕ ಎಲ್ಲರನ್ನೂ ರೊಚ್ಚಿಗೆಬ್ಬಿಸಿದೆ. ಸೆಪ್ಟೆಂಬರ್ 11 ರ ನಂತರದ ಭಯೋತ್ಪಾದನೆ ವಿರುದ್ಧದ 'ಸಂಯುಕ್ತ ರಂಗ' ಈಗ ಮಾಯವಾಗಿದೆ. ದೋಹಾದಲ್ಲಿ ಒಪ್ಪಂದವಾಗಲು ಇದು ಸಹಾಯ ಮಾಡಿತ್ತು. ಈಗ ಸರ್ಕಾರಗಳ ನಡುವೆ ಒಂದು ಒಪ್ಪಂದ ಸಾಧ್ಯವೇ ಇಲ್ಲವೇನೋ ಎಂಬ ಪರಿಸ್ಥಿತಿ ಮೂಡಿದೆ. ಅಮೆರಿಕ ಮತ್ತು ಯುರೋಪ್‌ಗಳ ನಡುವೆ ಭಿನ್ನಾಭಿಪ್ರಾಯ ಬಡ ದೇಶಗಳಿಗೆ ತಮ್ಮ ಅಭಿಪ್ರಾಯದ ಬಗ್ಗೆ ಒತ್ತಡ ಹೆಚ್ಚಿಸಲು ಸಹಾಯಕವಾಗಬೇಕಿತ್ತು. ಆದರೆ ಬಡದೇಶಗಳಲ್ಲೂ ಹಲವು ಪ್ರಮುಖ ವಿಷಯಗಳ ಬಗ್ಗೆ (ಕೃಷಿ ಆಮದು ಸುಂಕ, ಸಬ್ಸಿಡಿ ಸೇರಿದಂತೆ) ಭಿನ್ನಾಭಿಪ್ರಾಯ ಇದೆ.

ಇದನ್ನು ಮನಗಂಡು WTO ಡೈರೆಕ್ಟರ್ ಜನರಲ್ ಕೆಲವು ಸರ್ಕಾರೇತರ ಸಂಘಟನೆಗಳನ್ನು ತಮ್ಮ ಕಡೆ ಸೇರಿಸಿ, ಜಾಗತೀಕರಣ-ವಿರೋಧಿ ಚಳುವಳಿಯನ್ನು ಒಡೆಯುವ ಹುನ್ನಾರ ನಡೆಸಿದ್ದಾರೆ. ಆದರೆ 'ಮುಕ್ತ ವ್ಯಾಪಾರ'ದ ಅವಾತಂತರಗಳನ್ನು ಕಂಡಿರುವ ಉತ್ತರ ಅಮೆರಿಕ ಖಂಡದಲ್ಲಿ ಇದು ಯಾರನ್ನೂ ಮೋಸ ಮಾಡುವ ಸ್ಥಿತಿಯಲ್ಲಿಲ್ಲ. WTO ನಲ್ಲಿ ನಂಬಿಕೆ, ಅತ್ಯಂತ ಕೆಳಮಟ್ಟದಲ್ಲಿದ್ದು ಇದಕ್ಕೆ ಕಾರಣವಾಗಬಹುದು. ಕ್ಯಾಂಕುನ್ 'ಎರಡನೇ ದೋಹಾ' ಆಗುವುದೋ? 'ಎರಡನೇ ಸಿಯಾಟಲ್' ಆಗುವುದೋ ಎಂದು ಕಾದು ನೋಡಬೇಕಾದ ವಿಷಯ. ■

WTO ಕ್ಯಾಂಕುನ್ ಸಭೆ ವಿರುದ್ಧ ಆಂದೋಲನ

ಇಂದಿನ ಸನ್ನಿವೇಶ ಬಳಸಿ WTO ವಿರುದ್ಧ ಪ್ರತಿರೋಧ ಗಟ್ಟಿಗೊಳಿಸಲು ಜಾಗತೀಕರಣ- ವಿರೋಧಿ ಚಳುವಳಿ ಸಜ್ಜಾಗಿದೆ. ಮೆಕ್ಸಿಕೊದ ಕ್ಯಾಂಕುನ್‌ನಲ್ಲಿ 1997 ರ ಸಿಯಾಟಲ್‌ನಂತಹ ಸನ್ನಿವೇಶ ಹುಟ್ಟುಹಾಕಲು ಚಳುವಳಿ ಪ್ರಯತ್ನಿಸುತ್ತಿದೆ. ಎಲ್ಲಾ ಜಾಗತೀಕರಣ- ವಿರೋಧಿ ಶಕ್ತಿಗಳನ್ನು ಅಣಿ ನೆರಸಲಾಗುತ್ತಿದೆ. ಮೇ ಯಲ್ಲೇ ಅಮೆರಿಕ ಜಾಗತೀಕರಣ ವಿರೋಧಿ ಸಂಘಟನೆಗಳ ಸಮನ್ವಯ ಸಭೆ ನಡೆದಿದ್ದು WTO ಕ್ಯಾಂಕುನ್ ಸಭೆ ಅಸ್ತವ್ಯಸ್ತಗೊಳಿಸಿ' ಎಂಬ ಪ್ರಚಾರಾಂದೋಲನ ಆರಂಭಿಸಿವೆ. ಮೆಕ್ಸಿಕನ್ ಸರ್ಕಾರ ಸಹ ಈ ಸಭೆ ಮತ್ತು ಪ್ರತಿಭಟನಾ ಪ್ರದರ್ಶನಗಳಿಗೆ ಸಜ್ಜಾಗುತ್ತಿದೆ. ಮೆಕ್ಸಿಕೊ ದೇಶದ ಪ್ರಸಿದ್ಧ ಝಪಾಟಿಸ್ಟಾ ಚಳುವಳಿ ಪ್ರತಿಭಟನಾಕಾರರ ಅಣಿನೆರೆಸುವುದರಲ್ಲಿ ಪ್ರಮುಖ ರೀತಿಯಲ್ಲಿ ಸಹಾಯ ಮಾಡುವ ಸಾಧ್ಯತೆ ಇದೆ. ಮೆಕ್ಸಿಕೊದ ಒಂದು ಪ್ರದೇಶದಲ್ಲಿ ವ್ಯಾಪಕ ಜನ ಬೆಂಬಲವಿದ್ದು, ಹಲವು ಬಾರಿ ಚಳುವಳಿಗಳನ್ನು ಸಂಘಟಿಸಿರುವ ಅನುಭವವಿರುವ ಝಪಾಟಿಸ್ಟಾಗಳು ಕಣಕ್ಕೆ ಇಳಿದರೆ ಕ್ಯಾಂಕುನ್ 'ಎರಡನೇ ಸಿಯಾಟಲ್' ಆಗುವುದರಲ್ಲಿ ಏನೂ ಸಂಶಯವಿಲ್ಲ.

ಯುರೋಪಿಯನ್ ಹಸು ಮತ್ತು ಆಫ್ರಿಕನ್

ಪ್ರತಿ ಯುರೋಪಿಯನ್ ಹಸುವಿಗೆ ಪ್ರತಿದಿನ ಮೂರು ಡಾಲರು ಸಬ್ಸಿಡಿ ದೊರೆಯುತ್ತದೆ.



ಆಫ್ರಿಕಾದ ಅರ್ಧದಷ್ಟು ಜನ ಪ್ರತಿದಿನ ಒಂದು ಡಾಲರು ಸಹ ಖರ್ಚು ಮಾಡುವುದಿಲ್ಲ.

ಅಮೆರಿಕದ ಹತ್ತಿ ರೈತರಿಗೆ ಒಂದು ಕೋಟಿ ಡಾಲರು ಪ್ರತಿದಿನ ಸಬ್ಸಿಡಿ ಸಿಗುತ್ತದೆ. ಇದು ಸಹಾರಾ ಬಳಿಯ ಬಡ ಆಫ್ರಿಕಾಕ್ಕೆ ಅಮೆರಿಕ ಕೊಡುವ ಸಹಾಯಧನದ ಮೂರು ಪಟ್ಟು.

ಈ ಅಂಕೆ ಸಂಖ್ಯೆ ಕೊಟ್ಟಿರುವುದು ಜಾಗತೀಕರಣ-ವಿರೋಧಿ ಚಳುವಳಿಯ ವಕ್ತಾರರಲ್ಲ. ವಿಶ್ವಸಂಸ್ಥೆ ಬೆಳವಣಿಗೆ ಸಂಸ್ಥೆ(UNDP)ಯ ಪರಿಣಿತರೊಬ್ಬರು. ಇದು 'ಮುಕ್ತ ವ್ಯಾಪಾರ'ದ ಪರಿ.

ಕನ್ನಡ ಚಿತ್ರೋದ್ಯಮ ಉಳಿದೀತೆ ? ಹೇಗೆ ?

ಪ್ರದರ್ಶಕರ ಕೈಗೆ ಸೇರುತ್ತಿದ್ದ ಸೇವಾ ಶುಲ್ಕದಲ್ಲಿ ತಮಗೂ ಪಾಲು ಬೇಕೆಂದು ನಿರ್ಮಾಪಕರು ಸಿನಿಮಾ ಬಂದ್ ಮಾಡಿದರು. ಅಸಲಿ ಸಂಗತಿಯೇನು?

ಚಲನಚಿತ್ರಮಂದಿರಗಳ ಮಾಲೀಕರಿಗೆ ನೀಡಲಾಗುತ್ತಿದ್ದ ಸೇವಾಶುಲ್ಕವನ್ನು ರದ್ದುಗೊಳಿಸಲು ಸರ್ಕಾರ ನಿರ್ಧರಿಸಿದೆ. ಯಾರಾದರೂ, ವಸೂಲು ಮಾಡಿದರೆ ಅಂತಹವರ ಥೇಟರ್‌ನ ಪರವಾನಗಿ ರದ್ದುಪಡಿಸುವುದಾಗಿ ಹೇಳಿದೆ. ಥೇಟರ್‌ನ ಆಧುನೀಕರಣ ಮೂಲಭೂತ ವ್ಯವಸ್ಥೆಗಳನ್ನು ಕಲ್ಪಿಸ ಕೊಡಲೆಂದೇ ಪ್ರತಿಯೊಬ್ಬ ಪ್ರೇಕ್ಷಕನಿಂದ ಹವಾನಿಯಂತ್ರಿತ ಥಿಯೇಟರ್‌ನಲ್ಲಿ ರೂ.1-50, ಹವಾನಿಯಂತ್ರಣ ಇಲ್ಲದೆಡೆ ರೂ.1 ವಸೂಲು ಮಾಡಲಾಗುತ್ತಿತ್ತು. ಇದು ಥೇಟರ್ ಮಾಲಿಕರ ಕೈಗೆ ಸೇರುತ್ತಿತ್ತು.

ಕಳೆದ 10-12 ವರುಷಗಳಿಂದ ಈ ವಸೂಲಿ ಮಾಡಿದ್ದು ಸೌಲಭ್ಯಗಳನ್ನು ಕಲ್ಪಿಸಿರುವುದರಿಂದ ಸೇವಾಶುಲ್ಕ ರದ್ದು ಪಡಿಸ ಲಾಗಿದೆಯೆಂಬುದು ಸರ್ಕಾರದ ಅಂಬೋಣ.

ಸಿನಿಮಾ

ಸರ್ಕಾರದ್ದೇನು ಕಾಳಜಿ?

ಸರ್ಕಾರದ ಈ ತೀರ್ಮಾನ ಬಂದಿದ್ದು, ಥೇಟರ್ ವ್ಯವಸ್ಥೆ ಪರಿಶೀಲಿಸಿದ ನಂತರವಾಗಲೀ, ಅಥವಾ ಪ್ರೇಕ್ಷಕರ ಹಣ ಉಳಿಸುವ ಇಚ್ಛೆಯಿಂದ ಬಂದದ್ದೇನಲ್ಲ. ಕಳೆದ ವಾರದಲ್ಲಿ ಬಹುತೇಕ ಆರು ದಿನಗಳು, ಸಿನಿಮಾ ಪ್ರದರ್ಶನ ನಡೆಯದೇ 'ಬಂದ್' ಆಗಿ ಕನ್ನಡ ಚಿತ್ರ ಲೋಕದ್ದೇ ಗಾಂಧಿನಗರಿಯಲ್ಲಿ ಕೋಲಾಹಲ ಉಂಟಾಗಿತ್ತು. ಚಿತ್ರಗಳ ನಿರ್ಮಾಪಕರು ಥೇಟರ್‌ನವರು ಬಾಚಿಕೊಳ್ಳುತ್ತಿದ್ದ ಹಣದಲ್ಲಿ ತಮಗೆ ಪಾಲುಬೇಕೆಂದು ನಿರ್ಮಾಪಕರ ಸಂಘ'ದ ನೇತೃತ್ವದಲ್ಲಿ ಚಳುವಳಿಗೆ ಇಳಿದಿದ್ದರು (ಕರ್ನಾಟಕ ಫಿಲಂ ಛೇಂಬರ್‌ನ್ನು ಬಿಟ್ಟು). ಇದರ ನೇತೃತ್ವವನ್ನು ಪಾರ್ವತಮ್ಮ ರಾಜಕುಮಾರ್ ಬಣ ವಹಿಸಿತ್ತು. ತಾವು ಸಿನಿಮಾ ತಯಾರಿಸಲು ಹಾಕಿದ ದುಡ್ಡೂ ಸಹ ವಾಪಾಸಾಗದೆ 'ದೋಖಾ' ಅನುಭವಿಸು ತ್ತಿದ್ದು, 'ಸೇವಾಶುಲ್ಕ'ದಲ್ಲಿ ತಮಗೊಂದು ಪಾಲು ಸಿಗಲೇಬೇಕೆಂದು ಒತ್ತಾಯಿಸಿದ್ದರು. ಆದರೆ ವಿಷಯ ಇಷ್ಟಕ್ಕೆ ನಿಂತಿರಲಿಲ್ಲ. ಈ ಹೋರಾಟಗಾರರಿಗೆ ಒಂದು ಕಲ್ಲಿನಲ್ಲಿ ಹಲವು ತಲೆಗಳನ್ನು ಉರುಳಿಸುವ ಲೆಕ್ಕಾಚಾರವಿತ್ತೆಂದು ಅನೇಕ ವರದಿಗಳಿವೆ. ಸಿನಿಮಾ ರಂಗದಲ್ಲಿ ಜಾರುತ್ತಿರುವ ಅಥವಾ ಕೈ ತಪ್ಪಿದ ಹಿಡಿತ ಮರಳಿ ಸಾಧಿಸಬೇಕೆಂಬ ಆಸೆ 'ಪಾರ್ವತಮ್ಮ ರಾಜ್' ಬಣಕ್ಕಿದ್ದರೆ, ಫಿಲಂ ಛೇಂಬರ್' ನ ಅಧ್ಯಕ್ಷ ಸ್ಲಂ ರಮೇಶ್‌ರನ್ನು ಪದಚ್ಯುತಿಗೊಳಿಸುವ ತಂತ್ರ ಇನ್ನೊಂದಂತೆ. ಹಾಗೆ ಥೇಟರ್ ಮಾಲಿಕರು ಏನೂ ಸೌಲಭ್ಯ ಕಲ್ಪಿಸದೇ ಸಂಪಾದಿಸುವ ಸೇವಾ ಕಾಸಿನ ಮೇಲೆ ಕಣ್ಣು ನೆಟ್ಟಿದ್ದರಂತೆ. ಇವೇನೇ ಇರಲಿ. ಈ 'ಬಂದ್' ನಿಂದ ಸಿನಿಮಾ ಜಗತ್ತಿನ ವಹಿವಾಟು ಸುಮಾರು 40 ಕೋಟಿ ನಷ್ಟವಾಗಿದೆಯೆಂದು ಅಂದಾಜು. ಮುಖ್ಯವಾಗಿ ಸಿನಿಮಾ ರಂಗದ ಕಾರ್ಮಿಕರು ಜೀವನ ಸಾಗಿಸಲು ಪರದಾಡ ಬೇಕಾದ ಗತಿಯೊದಗಿದ್ದು ಧಾರುಣ ಸಂಗತಿ.

ಕಳಪೆ ಗುಣಮಟ್ಟ

ಒಟ್ಟಾರೆ ಈ ಸಾಹಸದಲ್ಲಿ ನಿಜವಾಗಿಯೂ ಕನ್ನಡ ಚಿತ್ರೋದ್ಯಮ ಎದುರಿಸುತ್ತಿರುವ ಗಂಭೀರ ಪ್ರಶ್ನೆಗಳಿಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನಗಳೇನು ಇದ್ದೀತೆ? ಹಾಗೆ ನೋಡಿದರೆ ಆಳವಾದ ಚಿಂತನ ಮಂಥನವೇ ಕಾಣಲಿಲ್ಲ. ದಿನಂ ದಿನಕ್ಕೆ ಸಿನಿಮಾ ಥೇಟರ್‌ಗಳು ಪ್ರೇಕ್ಷಕರಿಲ್ಲದೆ ಭಿಕೋ ಎನ್ನುತ್ತಿರುವುದು, ನಾಲ್ಕಾರು ದಿನಗಳಲ್ಲೇ ಕನ್ನಡ ಚಿತ್ರಗಳು ಎತ್ತಂಗಡಿಯಾಗ ಬೇಕಾಗಿರುವುದು ಒಂದು ರೀತಿಯಲ್ಲಿ ವಾಸ್ತವ ಹೀಗೇಕೆ? ಚಿತ್ರೋದ್ಯಮದ ಬಿಕ್ಕಟ್ಟಿಗೆ ಕಾರಣವೇನು? ಇದು ದೇಶಮಟ್ಟದಲ್ಲಿಯೂ ಕಂಡುಬರುತ್ತಿರುವ ಸಂಗತಿ. ನಿಜ, ಬಿಡುಗಡೆಯಾದ ಎಲ್ಲಾ ಚಿತ್ರಗಳಿಗೂ ಇದೇ ಗತಿಯೆಂದು ಹೇಳಲಾಗದು. ಆದರಲ್ಲಿ ಕೆಲವು ಚಿತ್ರಗಳು ಪ್ರೇಕ್ಷಕರ ಮನಸೆಳೆದಿವೆ. ಹಣ ಮಾಡಿಕೊಂಡಿವೆ. ಕನ್ನಡದಲ್ಲಿಯೇ 'ಜನುಮದ ಜೋಡಿ'ಯಂತಹದ್ದಿದೆ. 'ಲಗಾನ್' ಖ್ಯಾತಿ ಎಲ್ಲರಿಗೂ ಗೊತ್ತಿರುವಂತಹದೇ. ಅಂದರೆ ಈಗಲೂ ಉತ್ತಮ ಕಥಾವಸ್ತುವಿರುವ, ಸದಾಭಿ ರುಚಿಯ ಸಿನಿಮಾಗಳನ್ನು ನೋಡಲು ಪ್ರೇಕ್ಷಕರು ಇಷ್ಟಪಡುತ್ತಾರೆ. ಆದರೆ ಈಗ ನಿತ್ಯಕ್ಕೊಂದರಂತೆ ಹೊರಟಿರುವ ಎರಡು- ಮೂರಕ್ಷರದ 'ಡೋಂಟ್ ವರಿ, ಬೀ ಹ್ಯಾಪಿ' ತಳಿಯ ಹಿಂಸೆ, ಅಶ್ಲೀಲತೆ ವಿಜೃಂಭಿಸುವ ಒಂದೇ ಥರದ ಕಥಾವಸ್ತು ನಕಲುಗೊಂಡ ಸಿನಿಮಾ ಗಳು ಎಷ್ಟರಮಟ್ಟಿಗೆ ಜನಮನ ಸೂರೆ ಗೊಂಡಾವು? ಒಂದು ಚಿತ್ರ ತಯಾರಿಸುವಾಗ ಜನರ ಆಶೆ-ಆಕಾಂಕ್ಷೆಗಳೇನು ಎಂಬುದಕ್ಕಾಗಲಿ, ನಿರ್ಮಾಪಕರು- ನಿರ್ದೇಶಕರೂ- ಕಥಾಕಾರರು ಸ್ವಲ್ಪವಾದರೂ ತಲೆಕೆಡಿಸಿ ಕೊಂಡಿದ್ದಾರೆಯೇ? ವಿಚಿತ್ರ ಫಾರ್ಮುಲಾಗಳಿಗೆ ತಲೆ ತೂರಿಸುವ ಮುನ್ನ ಯೋಚಿಸುವುದು ಒಳ್ಳೆಯದಲ್ಲವೆ?

ಹೀಗಾಗಿ ಚಿತ್ರವೊಂದರ ಯಶಸ್ಸನ್ನು ಭಾರಿ ಸೆಟ್ಟಿಂಗ್, ಮುಂತಾದ ಖರ್ಚುಗಳಲ್ಲಿ ವಿಜೃಂಭಿಸಲು ಹೋಗಿ ಚಿತ್ರರಂಗ ವಿಪರೀತ ಬಂಡವಾಳ ಬೇಡುವ, ಕಬಳಿಸುವ ಉದ್ದಿಮೆಯಾಗಿದೆ. ಇಂತಹದ್ದಕ್ಕೆ ಮೀಟರ್ ಬಡ್ಡಿಯ ಹಣದ ಲೇವಾದೇವಿಗಾರರು ಹುಟ್ಟು ಹಾಕಿದ ಹತ್ತು, ಹಲವಾರು ಅನಾರೋಗ್ಯಕರ ಪ್ರವೃತ್ತಿಗಳಿಗೆ ಈಡಾಗಿವೆ. ಇದರಲ್ಲಿ ಭೂಗತ ಲೋಕದ ಮಾಫಿಯಾಗಳು ಮೇಲುಗೈ ಪಡೆಯುತ್ತಾ ಹುಟ್ಟುತ್ತಿರುವ ಅನೇಕ ಅನಾಹುತಗಳು ಕಣ್ಣೆದುರೆ ಇವೆ.

ಮೇಲಾಗಿ ಬೆಂಗಳೂರಿನಂಥಹ ನಗರಗಳಲ್ಲಿ ಸಿನಿಮಾ ಟಿಕೇಟ್‌ನ ದರಗಳು ಸಾಮಾನ್ಯ ಜನರ ಕೈಗೆ ಎಟುಕಲಾರದಷ್ಟು. ಒಂದು ಸಿನಿಮಾವೆಂದರೆ ಕುಟುಂಬ ಸಮೇತ ಥೇಟರ್ ಪ್ರವೇಶಿಸಿದರೆ ನೂರಾರು ರೂಪಾಯಿಗಳು ತೆತ್ತು ಹೊರ ಬರಬೇಕಾಗುತ್ತದೆ. ಪ್ರೇಕ್ಷಕರ ಮೇಲೆ ವಿಪರೀತ



ಹೊರೆಯಂತೂ ಇದೆ.


ಕಳಪೆ ಸೌಲಭ್ಯಗಳು-ಪ್ರೇಕ್ಷಕನ ರಕ್ತಹೀರುವ ಹಣದಾಹಿ ತಿಗಣೆಗಳು

ಆದರೆ ನಿರ್ಮಾಪಕರು, ಫಿಲಂ ಛೇಂಬರ್ ಇದರತ್ತ ಕಿಂಚಿತ್ತು ಯೋಚಿಸಿಲ್ಲ. ಹೋಗಲಿ, ಈ ಸೇವಾ ಶುಲ್ಕವೆಂಬುದು ಯಾರ ಲಾಭಕ್ಕಾಗಿ? ಥೇಟರ್‌ನ ಬಾಡಿಗೆಯೇ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಸಾಕಾಗದೇ? ಒಂದೆ ... ಶುಲ್ಕ ಹೀರುವಲ್ಲಿ ಕೋಟ್ಯಾಂತರ ಹಣ ಲಂ... ಸೀಡಿದ್ದ ಸಂಗತಿಗಳೇನೂ ಹೊರಬಂದಿವೆ. ... ಸೇವಾಶುಲ್ಕ ವಸೂಲು ಮಾಡುವ ಥೇಟ... ಮಾಲಿಕರು ಸೌಲಭ್ಯ ಕಲ್ಪಿಸಲು ಎಳ್ಳಷ್ಟು ಕ್ರ... ವಹಿಸಿಲ್ಲ. ಈಗಲೂ ಥೇಟರ್‌ಗಳು ಹೊಲಸಿ... ತುಂಬಿವೆ. ಕೂಡುವ ಕುರ್ಚಿಗಳು ಓಬಿರಾಯ... ಕಾಲದ್ದು. ಅದರಲ್ಲಿ ಯಥೇಚ್ಛ ರಕ್ತಬೀಜಾಸುರ... ಸಂತತಿ ತಿಗಣೆಗಳ ಅಟ್ಟಹಾಸ. ಶೌಚಾಲಯದ... ಹೆಜ್ಜೆ ಇಡಲು ಆಗದ ಸ್ಥಿತಿ. ಇನ್ನು ಗಾಳಿಯಂತ... ಸೌಲಭ್ಯ ಪ್ರೇಕ್ಷಕನ ತಾಕತ್ತಿಗೆ ಬಿಟ್ಟ ಸಂಗ... ಬೆಂಗಳೂರಿನ ಥೇಟರ್‌ಗಳೇ ಹೀಗಿರುವಾಗ ರಾಜ... ಉಳಿದೆಡೆ ಪರಿಸ್ಥಿತಿ ಇನ್ನೆಷ್ಟು ಘೋರವೆಂ... ಊಹಿಸಲು ಆಗದು. ಇವುಗಳನ್ನು ಪರೀಕ್ಷಿಸಬೇಕಾ... ಸರ್ಕಾರದ ಯಂತ್ರವೇ ನಿರ್ಲಕ್ಷಿಸಿ, ಥೇಟ... ಮಾಲೀಕರ ಜೊತೆ ಶಾಮೀಲಾಗಿದೆ. ಥೇಟರ... ಹೋಗೋದಾದ್ರೆ ವಾಕರಿಕೆ ಹುಟ್ಟಿಸುವಂತಿದೆ ವ್ಯವ... ಇಂತಹ 'ವ್ಯವಸ್ಥೆ'ಯನ್ನು ನೋಡಿಯೂ ಸರ್ಕಾ... ಸುಮ್ಮನಿದೆ. ಅಭಿವೃದ್ಧಿಯಾಗಿದೆ ಆದ್ದರಿಂದ ಸೇ... ಶುಲ್ಕ ರದ್ದುಪಡಿಸಿದ್ದೇವೆಂದು ಹೇಳುವುದು ಮೋ... ಸಂಗತಿ.

ಪ್ರೇಕ್ಷಕರ ಮೇಲಿನ ಹೊರೆ ಕಡಿಮೆಗೊಳಿಸಿ... ಸ್ವಾಗತ. ಹಲವಾರು ವರುಷಗಳಿ... ಅಡೆತಡೆಯಿಲ್ಲದೆ ಸುಲಿದ ಕೋಟ್ಯಾಂತ... ರೂಪಾಯಿಗಳಿಂದ ಈಗಲಾದರೂ ಆಧುನೀಕರ... ಉತ್ತಮ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾ... ಬಿಗಿಕ್ರಮ ಅನುಸರಿಸಲೇಬೇಕು. ಅದನ್ನು ಕೈಬಿ... 'ಹಾಯಾಗಿ' ಕುಳಿತುಕೊಳ್ಳುವುದು ಯಾರ ಹಿತದ... ಈಗಲಾದರೂ ಪ್ರೇಕ್ಷಕರ ಹಿತ ಕಾಯಲು ಸರ್ಕಾ... ಬಿಗಿ ಕ್ರಮ ವಹಿಸಬೇಕು. ಇನ್ನಷ್ಟು ಟಿಕೇಟ್‌ನ... ಭಾರ ಸುಲಿಗೆ ತಗ್ಗಿಸಬೇಕು. ಜೊತೆಗೆ ಸಿ... ನಿರ್ಮಾಪಕರೂ ಸಹ ಪ್ರೇಕ್ಷಕರಿಗೆ ನೀಡ... ಸೌಲಭ್ಯಗಳೇನೇ ಹಾಳಾಗಿ ಹೋಗ... ಸೇವಾಶುಲ್ಕದಲ್ಲಿ ಒಂದಿಷ್ಟು ಪಾಲು ಸಿಗ... ಎಂಬಂತಹ ಧೋರಣೆ ಕೈ ಬಿಡಬೇ... ಬಿಕ್ಕಟ್ಟಿನಲ್ಲಿರುವ ಚಿತ್ರೋದ್ಯಮ ಉಳಿಸ... ಕಿಂಚಿತ್ತಾದರೂ ಜವಾಬ್ದಾರಿಯುತವಾ... ಗಾಂಧಿನಗರದ ಹಣಕಾಸಿನ ಸಾಹುಕಾರ... ಯೋಚಿಸಿಯಾರೆ?

'ಹ್ಯಾರಿ ಪಾಟರ್'ನ ಮಾಯಾ ಜಗತ್ತು

ಇತ್ತೀಚೆಗೆ ಮಕ್ಕಳ ಸಾಹಿತ್ಯದಲ್ಲಿ ಚರಿತ್ರೆ ಸೃಷ್ಟಿಸಿದ 'ಹ್ಯಾರಿ ಪಾಟರ್' ಉತ್ತಮ ಬೆಳವಣಿಗೆಯೇ? ಎಂತಹ ಮೌಲ್ಯಗಳನ್ನು ಬಿತ್ತುತ್ತದೆ ಇದು? ಭಾರತೀಯ ಮಕ್ಕಳ ಸಾಹಿತ್ಯದ ಮೇಲೆ ಏನು ಪರಿಣಾಮ ಬೀರುತ್ತದೆ? ಒಟ್ಟಾರೆಯಾಗಿ ಉತ್ತಮ ಬೆಳವಣಿಗೆ ಎಂಬ 'ಅನಿರೀಕ್ಷಿತ' ಅಭಿಪ್ರಾಯಕ್ಕೆ ಬರುತ್ತದೆ ಈ ಲೇಖನ.



ಹ್ಯಾರಿ ಪಾಟರ್ ಕರ್ತೃ ಜೆ.ಕೆ. ರೌಲಿಂಗ್

'ಹ್ಯಾರಿ ಪಾಟರ್' ಮಕ್ಕಳ ಕಥಾ ಸರಣಿಯ 5ನೇ ಪುಸ್ತಕ ಇತ್ತೀಚೆಗೆ ಜಗತ್ತಿನಾದ್ಯಂತ ಬಿಡುಗಡೆ ಆಯಿತು. ಇದು ಮಕ್ಕಳ ಸಾಹಿತ್ಯದಲ್ಲಿ ಚರಿತ್ರೆ ಸೃಷ್ಟಿಸಿದೆ. ದುಬಾರಿ ಬೆಲೆ (ರೂ. 900) ಮತ್ತು ದಪ್ಪ ಪುಸ್ತಕ (ಸುಮಾರು 800 ಪುಟ). ಆದರೂ ಲಕ್ಷಾಂತರ ಪ್ರತಿಗಳು ಜಗತ್ತಿನ ಇಂಗ್ಲೀಷ್ ಭಾಷೆ ಪ್ರಚಲಿತವಿರುವ ದೇಶಗಳಲ್ಲಿ ಪ್ರಕಟವಾದವು. ಬಿಡುಗಡೆ ಹಿಂದಿನ ದಿನ ರಾತ್ರಿಯೆಲ್ಲ ಪುಸ್ತಕ ಅಂಗಡಿಗಳ ಮುಂದೆ ಜನ ಕಾದರಂತೆ. ಮುಖ್ಯವಾಗಿ ಅಮೇರಿಕ, ಬ್ರಿಟನ್‌ಗಳಲ್ಲಿ ಮಾಧ್ಯಮಗಳು ಈ ಪುಸ್ತಕದ ಕಮರ್ಶಿಯಲ್ ಮಗ್ಗುಲ ಬಗೆಗೆ ಸುದ್ದಿ ಮಾಡಿದವು. ಲೇಖಕಿಗೆ ಎಷ್ಟು ಅಡ್ವಾನ್ಸ್ ಕೊಡಲಾಯಿತು. 'ಹ್ಯಾರಿ ಪೊಟ್ಟರ್' ಐದನೇ ಪುಸ್ತಕದ ನಂತರ ಆಕೆ ಈಗ ಇಂಗ್ಲೆಂಡಿನ ರಾಣಿಗಿಂತ ಶ್ರೀಮಂತಳಾಗಿದ್ದಾಳೆ. ಹ್ಯಾರಿ ಪೋಟ್ಟರ್ ಪೆನ್ಸಿಲ್, ರಬ್ಬರ್, ಲಂಚ್‌ಬಾಕ್ಸ್, ಆಟಿಕೆಗಳ ಒಂದು ಹೊಸ ಉದ್ಯಮ ಸೃಷ್ಟಿಯಾಗಿದೆ. ಮೊದಲನೇ ಕಂತು ಫಿಲಂ ಆಗಿ ಬಂದಿದೆ. 'ಹ್ಯಾರಿ ಪೊಟ್ಟರ್' ಒಂದು ಉದ್ಯಮವೇ ಆಗಿದೆ ಇತ್ಯಾದಿ ಇದೆಲ್ಲ ನಿಜ. ಆದರೆ ಇವೆಲ್ಲಾ ಈ ಬೆಳವಣಿಗೆಯ ನಿಜವಾದ ಮಹತ್ವದ ಬಗ್ಗೆ ಏನೂ ಹೇಳುವುದಿಲ್ಲ.

ಕಥೆ, ಕಥೆಗಾರ್ತಿಯ 'ಮಾಯೆ'

'ಹ್ಯಾರಿ ಪೋಟ್ಟರ್' ಇಂತಹ ವಿಕ್ರಮ ಸೃಷ್ಟಿಸಲು ಬರೀ ಪ್ರಚಾರ ಕಾರಣವೋ? ಅಥವಾ ಅದರ ಕಥೆಯಲ್ಲಿ ಗಟ್ಟಿತನವಿತ್ತೇ ಎಂಬುದನ್ನು ಯಾರೂ ಗಮನಿಸಲಿಲ್ಲ. ಇದು ಅನಾಥ ಹುಡಗನ ಮಾಯಾ ಜಗತ್ತಿನ ಬಗೆಗಿನ ಕಥೆ. ಮೆಟ್ಟಿಲ ಕೆಳಗೆ ಕಪಾಟಿನಲ್ಲಿ ಮಲಗುವ, ರಾಕ್ಷಸೀ ಸಂಬಂಧಿಗಳಿಂದ ಅವಮಾನ, ಅಪಹಾಸ್ಯ, ಯಾತನೆಗಳಿಗೆ ಒಳಗಾಗುವ ಹುಡುಗನ ಕಥೆ. ಹ್ಯಾರಿ ತಾನು ಮ್ಯಾಜಿಕ್ ಮಾಡಬಹುದು ಎಂದು ತಿಳಿದು... ಮ್ಯಾಜಿಕ್ ಸ್ಕೂಲಿಗೆ ಹೋಗಲು ಆರಂಭಿಸಿದಾಗ... ಎಲ್ಲಾ ಬದಲಾಗುತ್ತದೆ. ಮಾಯಾ ಜಗತ್ತು... ತೆರೆದುಕೊಳ್ಳುತ್ತದೆ. ತನ್ನ ತಾಯಿ - ತಂದೆ ಕೊಲೆ... ಮಾಡಿದ ಮಾಟಗಾರ ವೋಲ್ಡೆಯೋರ್ಟ್ ಜ... ಮಾಯಾ ವಿದ್ಯೆಯ ಸಹಾಯದಿಂದ ನಡೆಸು...

ಪುಟ 11


ಹ್ಯಾರಿ ಪಾಟರ್ ಸಿನಿಮಾದ ದೃ...

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು 27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee Editor : S.Y.GURUSHANTH